ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 20 ಭಾನುವಾರ 2025

₹4

ಸಂಪುಟ: 46 | ಸಂಚಿಕೆ: 94 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಡಾ.ಕೆ.ಬಿ.ಗಣಪತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ....



ಕಳೆದ ಭಾನುವಾರ (ಜು.13) ನಿಧನರಾದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಶನಿವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಕ್ಲಬ್ ಕಾರ್ಯದರ್ಶಿ ಹಾಗೂ ಅಂತರ‍್ರಾಷ್ಟ್ರೀಯ ಅಥ್ಲೆಟರ್ ಎಂ.ಯೋಗೇಂದ್ರ, ಕ್ರೀಡಾ ಅಂಕಣಕಾರ ಸಿ.ಕೆ.ಮುರಳೀಧರನ್, ದೈಹಿಕ ಶಿಕ್ಷಣ ನಿರ್ದೇಶಕ ಡಾ.ವೆಂಕಟೇಶ್, ಡಾ.ಸದಾಶಿವ ಭಟ್, ಡಾ.ಪಿ.ಕೃಷ್ಣಯ್ಯ,ಪತ್ರಕರ್ತ ಟಿ.ಆರ್.ಸತೀಶ್, ಕ್ಲಬ್ ಉಪಾಧ್ಯಕ್ಷ ರಾಜ್ ಪುರೋಹಿತ್, ವಕೀಲ ಸುರೇಶ್ ಕುಮಾರ್, ಕ್ಲಬ್‌ನ ಉಪಾಧ್ಯಕ್ಷ ಚೈನ್ ಸಿಂಗ್, ಕೋಚ್ ಜಿ.ಆರ್.ಪ್ರಭಾಕರ್, ರಾಷ್ಟ್ರೀಯ ಅಥ್ಲೆಟ್ ಗುರುರಾಜ್, ಕೆ.ಮಹದೇವಯ್ಯ, ಶ್ರೀಕಾಂತ್, ಎಂ.ಪಿ.ಚಂದ್ರಶೇಖರ, ಎಸ್.ಮಹದೇವ, ಎಂ.ಉಮೇಶ್, ಜ್ಯಾಮ್ ಜಿಮನಾಸ್ಟ್ ಗಣೇಶ್, ಕರಾಟೆ ಪಟು ಸಿದ್ಧರಾಜು, ಸ್ವಿಮ್ಮಿಂಗ್ ಕೋಚ್ ಜಗದೀಶ್, ಪತ್ರಕರ್ತರಾದ ಎಂ.ಎಸ್.ರಾಜೇಂದ್ರಕುಮಾರ್, ಬಿ.ಆರ್.ಮಂಜುನಾಥ, ಪತ್ರಿಕಾ ಛಾಯಾಗ್ರಾಹಕ ಲಕ್ಷ್ಮೀನಾರಾಯಣ ಯಾದವ್ ಮತ್ತಿತರರು ಉಪಸ್ಥಿತರಿದ್ದರು.

ಬಂಡಿಪಾಳ್ಯ ಎಪಿಎಂಸಿ ಸಗಟು ಮಳಿಗೆಗೆ ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಭೇಟಿ

ಮೈಸೂರು, ಜು.19(ಜಿಎ)–ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿರುವ ಸಗಟು ಮಳಿಗೆಗೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾದ ಕೆ.ಹೆಚ್. ಮುನಿಯಪ್ಪ ಭೇಟಿ ನೀಡಿ ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲಿಸಿದರು.

ಸಗಟು ಮಳಿಗೆಯನ್ನು ಪರಿಶೀಲಿಸಿ ಸಗಟು ಮಳಿಗೆಯು ಗುಣಮಟ್ಟದ್ದಾಗಿದ್ದು ಉತ್ತಮವಾಗಿದೆ ಎಂದು ಸಿಬ್ಬಂದಿಗೆ ಪ್ರಶಂಸಿಸಿ ರಾಜ್ಯದ ಎಲ್ಲಾ ಸಗಟು ಮಳಿಗೆಗಳು ಈ ರೀತಿಯಲ್ಲಿ ಗುಣಮಟ್ಟವನ್ನು ಕಾಪಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿ, ಅಕ್ಕಿ, ರಾಗಿಯ ಗುಣಮಟ್ಟದ ಕುರಿತು ಪರಿಶೀಲಿಸಿ ಉತ್ತಮವಾದ ಆಹಾರ ಧಾನ್ಯಗಳನ್ನು ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಹೇಳಿದರು.

ಸಗಟು ಮಳಿಗೆಯಲ್ಲಿ ಹಮಾಲಿ ಕೆಲಸಗಾರನ್ನು ಮಾತನಾಡಿಸಿ ಅವರ ಸಮಸ್ಯೆಗಳು ಏನೇ ಇದ್ದರು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಚಿವರ ಆಪ್ತ ಕಾರ್ಯದರ್ಶಿ ಡಾ.ಹೆಚ್.ನಟರಾಜ್, ಜಂಟಿ ಉಪ ನಿರ್ದೇಶಕ ಮಂಟೇಸ್ವಾಮಿ, ಸಗಟು ಮಳಿಗೆಯ ಸಹಾಯ ನಿರ್ದೇಶಕ ಕಿರಣ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಬಂಡಿಪಾಳ್ಯದಲ್ಲಿರುವ ಸಗಟು ಮಳಿಗೆಗೆ ಶನಿವಾರ ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಭೇಟಿ ನೀಡಿ, ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲಿಸಿದರು.

ಅವಕಾಶ ಸಿಕ್ಕರೆ ಜನರ ಸೇವೆಗೆ ಸಿದ್ಧನಿದ್ದೇನೆ: ಭರತ್ ಮಂಜೇಗೌಡ





ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಪುತ್ರ ಭರತ್ ಮಂಜೇಗೌಡ ಅವರ 37ನೇ ಹುಟ್ಟುಹಬ್ಬದ ಅಂಗವಾಗಿ ಸ್ನೇಹಿತರು, ಹಿತೈಷಿಗಳು ಹಾಗೂ ಅಭಿಮಾನಿಗಳು ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ, ಬೃಹತ್ ಹೂವಿನ ಹಾರ ಹಾಕಿ ಶನಿವಾರ ಅಭಿನಂದಿಸಿದರು. ಚಿತ್ರದಲ್ಲಿ ಸಾ.ರಾ.ಮಹೇಶ್, ಸಿ.ಎನ್.ಮಂಜೇಗೌಡ ಇತರರಿದ್ದಾರೆ.

ಮೈಸೂರು,ಜು.19– ರಾಜಕೀಯವಾಗಿ ಅವಕಾಶ ಸಿಕ್ಕರೆ ಜನರ ಸೇವೆ ಮಾಡಲು ಸದಾ ಸಿದ್ಧನಿದ್ದೇನೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಪುತ್ರ ಭರತ್ ಮಂಜೇಗೌಡ ಹೇಳಿದರು.

ಶ್ರೀರಾಂಪುರದ ಅವರ ನಿವಾಸದ ಬಳಿ 37ನೇ ಹುಟ್ಟುಹಬ್ಬದ ಅಂಗವಾಗಿ ಸ್ನೇಹಿತರು, ಅಭಿಮಾನಿಗಳೊಂದಿಗೆ ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ, ಬೃಹತ್ ಹೂವಿನ ಹಾರದೊಂದಿಗೆ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಮ್ಮ ಮುಂದಿನ ಗುರಿ 2028ರ ಚುನಾವಣೆಯಲ್ಲಿ ಕುಮಾರಣ್ಣ ಅವರನ್ನು ಮುಖ್ಯಮಂತ್ರಿ ಮಾಡುವುದು. ಸಾ.ರಾ.ಮಹೇಶಣ್ಣ ಅವರನ್ನು ಉಪಮುಖ್ಯಮಂತ್ರಿ ಮಾಡುವುದಾಗಿದೆ. ನಾನು ಈಗ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದೇನೆ. ಗ್ರಾಮೀಣ ಭಾಗದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು ಎಂದು ಜಯಪುರ ಬಳಿ ಶಾಲಾ–ಕಾಲೇಜು ಪ್ರಾರಂಭಿಸಿದ್ದೇನೆ. ನಮ್ಮ ತಂದೆ ವಿಧಾನಪರಿಷತ್ ಸದಸ್ಯರಾಗಿ ಎರಡು ಜಿಲ್ಲೆಗಳಲ್ಲಿ ಜನರ ಸೇವೆ ಮಾಡುತ್ತಿದ್ದಾರೆ. ನಾನು ಈ ಹಿಂದೆ ಶ್ರೀರಾಂಪುರ ಗ್ರಾಮ ಪಂಚಾಯಿತಿ ಸದಸ್ಯನಾಗಿ ಕೆಲಸ ಮಾಡಿರುವ ಅನುಭವವಿದೆ. ಪಕ್ಷ, ಕುಮಾರಣ್ಣ, ಸಾ.ರಾ.ಮಹೇಶಣ್ಣನವರು ಅವಕಾಶ ಕೊಟ್ಟರೆ ನಾನು ಯಾವುದೇ ಚುನಾವಣೆಗೆ ನಿಲ್ಲಲು ಸಿದ್ಧನಿದ್ದೇನೆ. ಸ್ನೇಹಿತರು, ಅಭಿಮಾನಿಗಳು, ಹಿತೈಷಿಗಳು ನನ್ನ ಮೇಲೆ ಇಟ್ಟಿರುವ ಪ್ರೀತಿಗೆ ಚಿರಋಣಿಯಾಗಿದ್ದೇನೆ. ಎಲ್ಲರಿಗೂ ಚಾಮುಂಡೇಶ್ವರಿ ಒಳ್ಳೆಯದು ಮಾಡಲಿ ಎಂದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿ.ಪಂ. ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಮುಖಂಡರಾದ ಅಪೆಕ್ಸ್ ಶ್ರೀನಿವಾಸ್, ಪೈಲ್ವಾನ್ ದಿನೇಶ್‌ಗೌಡ, ತಾಂಡವಪುರ ಗ್ರಾ.ಪಂ. ಉಪಾಧ್ಯಕ್ಷ ಶಿವಣ್ಣ, ಸುರೇಶ್, ಧರ್ಮ, ಜೇಸುದಾಸ್, ಪ್ರಕಾಶ್, ಹರೀಶ್, ಶಿವಣ್ಣ, ರಾಮಚಂದ್ರ, ಶಿವಶಂಕರ್, ಆನಂದ, ಬಸವರಾಜು, ಮಹೇಶ್, ಜಗದೀಶ್, ಪಾರ್ಥಸಾರಥಿ, ರಾಜು, ಶಿವಣ್ಣ, ಜೆಡಿಎಸ್ ಕಾರ್ಯಕರ್ತರು ಹಾಜರಿದ್ದರು.

"ತಾಯಿ ಹೆಸರಲ್ಲಿ ಒಂದು ಮರ" ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ


ಮೈಸೂರು, ಜು.19(ಜಿಎ)–ಭಾರತ ಸರ್ಕಾರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಮೇರಾ ಯುವ ಭಾರತ್, ಮಹಾವೀರ ವಿದ್ಯಾ ಮಂದಿರದ ಸಹಯೋಗದೊಂದಿಗೆ 'ಏಕ್ ಪೇಡ್ ಮಾಕೆ ನಾಮ್' (ತಾಯಿ ಹೆಸರಲ್ಲಿ ಒಂದು ಮರ) ಗಿಡ ನೆಡುವ ಕಾರ್ಯಕ್ರಮವನ್ನು ವಿದ್ಯಾ ಮಂದಿರದ ಶಾಲಾ ಆವರಣದಲ್ಲಿ ನೆರವೇರಿಸಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕಾವಾ ಕಲಾವಿದೆ ಎಸ್.ಹಿರೀಶ್ ಹಾಗೂ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಕೇಂದ್ರ ಸ್ಥಾನಿಕ ಸಹಾಯಕ ನಿವೃತ್ತ ಅಧಿಕಾರಿ ಎನ್.ಕೆ.ಪ್ರಸಾದ್ ಪಾಲ್ಗೊಂಡು ಪರಿಸರದ ಬಗ್ಗೆ ಅರಿವು ಮೂಡಿಸಿದರು. ಈ ವೇಳೆ ಎಂ.ವಿ.ಎಂ ಶಾಲೆಯ ಪ್ರಾಂಶುಪಾಲರಾದ ಡಿ.ಅನಿತಾ, ಉಪ ಪ್ರಾಂಶುಪಾಲೆ ಎಸ್.ಆಶಾ, ಸಹಶಿಕ್ಷಕಿ ಎಂ.ಪಿ.ಸೋನಿ ಪರಿಸರದ ಬಗ್ಗೆ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಹಾಗೂ ಬಹುಮಾನ ಪಡೆದ ಮಕ್ಕಳು, ಶಾಲಾ ಶಿಕ್ಷಕಿಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



'ತಾಯಿ ಹೆಸರಲ್ಲಿ ಒಂದು ಮರ' ಗಿಡ ನೆಡುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಗಾಂಧಿನಗರದಲ್ಲಿ ಶ್ರೀ ಚಾಮುಂಡೇಶ್ವರಿ ವರ್ಧಂತಿ



ಮೈಸೂರಿನ ಗಾಂಧಿನಗರದ 12ನೇ ಕ್ರಾಸ್‌ನ ಶ್ರೀ ವಿದ್ಯಾ ಗಣಪತಿ ಗೆಳೆಯರ ಬಳಗದ ವತಿಯಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವ ಆಚರಿಸಲಾಯಿತು. ಚಿತ್ರದಲ್ಲಿ ಶ್ಯಾಮ್ ಆರ್, ಅರುಣ್, ಮಹೇಶ್, ಮೂರ್ತಿ, ಪ್ರಕಾಶ್, ಕಿಶೋರ್, ಪ್ರತಾಪ್ ನಾಗರಾಜ್, ಶುಹಾಸ್ ಇನ್ನಿತರರಿದ್ದಾರೆ.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವಿಭು ಬಖ್ರು ಪ್ರಮಾಣವಚನ ಸ್ವೀಕಾರ

ಬೆಂಗಳೂರು,ಜು.19 (ಕೆಎಂಶಿ) –ಕರ್ನಾಟಕ ಹೈಕೋರ್ಟ್‌ನ 35ನೇ ಮುಖ್ಯ ನ್ಯಾಯಾಧೀಶರಾಗಿ ನ್ಯಾಯಮೂರ್ತಿ ವಿಭು ಬಖ್ರು ಶನಿವಾರ ಪ್ರಮಾಣವಚನ ಸ್ವೀಕರಿಸಿದರು.



ವಿಭು ಬಖ್ರು

ರಾಜಭವನದ ಗಾಜಿನಮನೆಯಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ನೂತನ ಮುಖ್ಯ ನ್ಯಾಯಮೂರ್ತಿ ಅವರಿಗೆ ಪ್ರಮಾಣವಚನ ಬೋಧಿಸಿದರು.


ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಕೊಲಿಜಿಯಂ ವಿಭು ಬಖ್ರು ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

ಪ್ರಮಾಣವಚನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಹಂಗಾಮಿ ಮುಖ್ಯ ನ್ಯಾಯಾಧೀಶ ವಿ.ಕಾಮೇಶ್ವರರಾವ್, ಕಾನೂನು–ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್ ಸೇರಿದಂತೆ ಕರ್ನಾಟಕ ಹೈಕೋರ್ಟ್‌ನ ಹಲವು ನ್ಯಾಯಾಧೀಶರು, ಗಣ್ಯರು ಪಾಲ್ಗೊಂಡಿದ್ದರು.

ಹೆಬ್ಬಾಳ್‌ನಲ್ಲಿ ಶ್ರೀ ಚಾಮುಂಡೇಶ್ವರಿ ಜಾತ್ರಾ ಮಹೋತ್ಸವ ನಾಳೆ

ಮೈಸೂರು,ಜು.19–ಮೈಸೂರಿನ ಹೆಬ್ಬಾಳ್ ಸೂರ್ಯ ಬೇಕರಿ ವೃತ್ತದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಜು.21ರಂದು ಜಾತ್ರಾ ಮಹೋತ್ಸವ ನಡೆಯಲಿದೆ. ಅಂದು ಬೆಳಗ್ಗೆ 9 ಗಂಟೆಗೆ ಗಣಪತಿ ಪೂಜೆ, ನವಗ್ರಹ ಮತ್ತು ಮೃತ್ಯುಂಜಯ ಪೂಜೆ, 11 ಗಂಟೆಗೆ ಗಣಪತಿ, ನವಗ್ರಹ, ಮೃತ್ಯುಂಜಯ, ದುರ್ಗಾ ಹೋಮ ನಡೆಯಲಿದ್ದು, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ ನಡೆಯಲಿದೆ. ಮಧ್ಯಾಹ್ನ 2.10ರಿಂದ 2.50ರೊಳಗಿನ ತುಲಾ ಲಗ್ನದಲ್ಲಿ ದೇವಸ್ಥಾನದಿಂದ ಅಮ್ಮನವರ ಉತ್ಸವ ಹೊರಟು ಕುಂಬಾರಕೊಪ್ಪಲಿನ ತಿಪ್ಪಾಜಿ ಕೊಳ ತಲುಪಲಿದೆ. ಸಂಜೆ 4 ಗಂಟೆಗೆ ತಿಪ್ಪಾಜಿ ಕೊಳದಿಂದ ಡೊಳ್ಳು ಕುಣಿತ, ಪೂಜಾ ಕುಣಿತ, ವೀರಗಾಸೆ ಮುಂತಾದ ಜನಪದ ಕಲಾ ತಂಡಗಳೊಂದಿಗೆ ಅಮ್ಮನವರ ಮೆರವಣಿಗೆ ಹೊರಟು ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ರಾತ್ರಿ 10 ಗಂಟೆಗೆ ದೇವಸ್ಥಾನ ತಲುಪಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬ್ರಾಹ್ಮಣ ಪರಿಷದ್‌ಗೆ ನೇಮಕ



ಮೈಸೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಮೈಸೂರಿನ ನವೀನ್‌ಕುಮಾರ್ ಎನ್.ಎಂ.ಅವರನ್ನು ಅಖಿಲ ಭಾರತ ಬ್ರಾಹ್ಮಣ ಏಕೀಕೃತ ಪರಿಷದ್‌ನ ಕರ್ನಾಟಕ ಪ್ರದೇಶ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಅಂಕ ಪಡೆದು ತೇರ್ಗಡೆ ಹೊಂದಿದ ಮೈಸೂರು ಜಿಲ್ಲಾ ಮುಸ್ಲಿಂ ಸಮುದಾಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. 2024–25ನೇ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಕೇಂದ್ರ ಪಠ್ಯದಲ್ಲಿ ಶೇ.85 ಹಾಗೂ ರಾಜ್ಯ ಪಠ್ಯದಲ್ಲಿ ಶೇ.90 ಮತ್ತು ಅದಕ್ಕಿಂತ ಅಧಿಕ ಅಂಕಪಡೆದ ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸಲು ಅವಕಾಶವಿದೆ. http://forms.gle/dGd9vmgd FiuCQYLd9 ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜು.25. ಮಾಹಿತಿಗಾಗಿ ಮೊ.ನಂ: 9880972551 ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.07.2025 ಭಾನುವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರಿ ಪತ್ತಿನ ಸಂಘ :** ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಕು. ಪಿ. ಚಿಕ್ಕಜ್ಯೋತಿ, ಉಪಸ್ಥಿತರು : ಸಂಘದ ಉಪಾಧ್ಯಕ್ಷ ಬಿ. ಪ್ರಕಾಶ್, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 9.30ಕ್ಕೆ.

■ **ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕ :** ಗ್ರಾಹಕ ಪಂಚಾಯತ್ ಜಿಲ್ಲಾ ಅಭ್ಯಾಸ ವರ್ಗ, ಅಧ್ಯಕ್ಷತೆ : ಪ್ರಾಂತ್ಯದ ಅಧ್ಯಕ್ಷ ನರಸಿಂಹ ನಕ್ಷತ್ರಿ, ಉದ್ಘಾಟನೆ : ಜಿಲ್ಲಾ ಗ್ರಾಹಕ ಆಯೋಗದ ಅಧ್ಯಕ್ಷೆ ನವೀನ್ ಕುಮಾರಿ, ಉಪಸ್ಥಿತರು : ಜ್ಯೋತಿಶಂಕರ್, ಮೈಸೂರು ಜಿಲ್ಲಾಧ್ಯಕ್ಷ ಸಿ.ಎಸ್. ಚಂದ್ರಶೇಖರ್, ಸ್ಥಳ: ಅಗ್ರಹಾರದ ಕಲ್ಯಾಣ ಭವನ, ಬೆಳಗ್ಗೆ 9.30ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಚೆರಿಸ್ ಮತ್ತು ಲಯನ್ಸ್ ಕ್ಲಬ್ ಆಫ್ ಮೈಸೂರು ಕ್ಲಾಸಿಕ್ :** ಉಚಿತ ಕಣ್ಣಿನ ತಪಾಸಣಾ ಶಿಬಿರ, ಉಪಸ್ಥಿತರು : ಎನ್. ಸುಬ್ರಹ್ಮಣ್ಯ, ಅಶ್ವತ್ಥಕುಮಾರ್, ವೈ.ಎಂ. ಕಿರಣ್, ಧರ್ಮೇಂದ್ರ, ಸ್ಥಳ: ಅರಸು ಮಂಡಲಿ ಸಂಘದ ಸಭಾಂಗಣ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಮತ್ತು ಅನ್ಯನರ ಸಂಬಂಧಿ ಕಾಯಿಲೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಕವಿತಾ ಪ್ರಕಾಶನ :** ನಿವೃತ್ತ ಮೈಲ್ಯಾಕ್ ವ್ಯವಸ್ಥಾಪಕ ನಿರ್ದೇಶಕ ನಾಗೇಂದ್ರ ರಾವಣಿಕರ್ ಅವರು ಬರೆದಿರುವ ಪಾತಾಳದಿಂದ ಪರ್ವತವೇರಿದ ರುದ್ರಮ್ಮ ಕೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ಹೆಚ್.ಎಂ. ಕಲಾಶ್ರೀ, ಮುಖ್ಯ ಅತಿಥಿಗಳು : ಆಹಾರ ವಿಜ್ಞಾನ ಮತ್ತು ಪೌಷ್ಠಿಕಾಂಶ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಕೋಮಲ ಗಂಗಾಧರ್, ಉಪಸ್ಥಿತರು : ವಿಜ್ಞಾನ ಅಧ್ಯಯನ ವಿಭಾಗದ ನಿವೃತ್ತ ಡೀನ್ ಡಾ. ಶಶಿಕಲಾ ಪುಟ್ಟರಾಜ್, ಬರಹಗಾರ ನಾಗೇಂದ್ರ ರಾವಣಿಕರ್ ಅಧ್ಯಕ್ಷತೆ : ವಕೀಲ ಎಸ್. ಅರುಣ್‌ಕುಮಾರ್, ಸ್ಥಳ: ಆರ್.ಆರ್. ಫಾರಂ, ಕಳಲವಾಡಿ, ಹೆಚ್.ಡಿ. ಕೋಟೆ ರಸ್ತೆ, ಬೆಳಗ್ಗೆ 10ಕ್ಕೆ.

■ **ಸ್ವಾಭಿಮಾನಿ ಬಳಗ :** ರಾಜ್ಯ ಮಟ್ಟದ ಸಂವಿಧಾನವೇ ಸಿದ್ಧಾಂತ–ಸ್ವಾಭಿಮಾನಿಗಳ ಸಮ್ಮಿಲನ ಕಾರ್ಯಕ್ರಮ, ಉಪಸ್ಥಿತರು : ಸೋಮೇಗೌಡ, ಶ್ರೀಮತಿ ಸರ್ವಮಂಗಳ, ಎ.ಕೆ. ಬಸವರಾಜು, ಮಂಜುನಾಥ ತಿಮ್ಮಯ್ಯ, ಮೋಹನ್, ಕಲೀಂ ಷರೀಫ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಚಿಂತನ–ಮಂಥನ ವೇದಿಕೆ :** ಉದ್ಘಾಟನಾ ಕಾರ್ಯಕ್ರಮ, ಉದ್ಘಾಟನೆ : ಚಲನಚಿತ್ರ ಕಲಾವಿದ ಶಿವಾಜಿರಾವ್ ಜಾಧವ್, ಮುಖ್ಯ ಭಾಷಣ : ಕರ್ನಾಟಕ ಪೊಲೀಸ್ ಅಕಾಡೆಮಿ ಮನಶಾಸ್ತ್ರ ಉಪನ್ಯಾಸಕ ಡಾ. ಡಿ. ಚಂದ್ರಶೇಖರ್, ಸ್ಥಳ: ಶ್ರೀ ರಾಮಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಾಸುದೇವಾಚಾರ್ಯ ಸಭಾಂಗಣ :** ಬೆಂಗಳೂರಿನ ವಿದುಷಿ ಪ್ರಿಯಾಂಕ ಕನ್ನಮದಕಲ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ತುಮಕೂರು ಯಶಸ್ವಿ–ವಯೋಲಿನ್, ವಿದುಷಿ ಪೃಥ್ವಿ ಕೃಷ್ಣ–ಮೃದಂಗ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನದ ಹೆರಿಟೇಜ್ ಹೌಸ್, ಅಗ್ರಹಾರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಓಪನ್ ಫೋರಂ :** 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ, ಅಧ್ಯಕ್ಷತೆ : ಪ್ರೊ. ಕೆ.ಸಿ. ಬೆಳ್ಳಿಯಪ್ಪ, ಸ್ಥಳ: ಕಲ್ಪ ಕ್ಷೇತ್ರ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಭಾರತೀಯ ಬೌದ್ಧ ಮಹಾಸಭಾ :** ಕರ್ನಾಟಕ ರಾಜ್ಯ ಬಿಎಸ್‌ಐ ದಕ್ಷಿಣ ಮಹಿಳಾ ಘಟಕದ ಉದ್ಘಾಟನಾ ಸಮಾರಂಭ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಬೆಳಗ್ಗೆ 10.30ಕ್ಕೆ.

■ **ಕಾರ್ಮಿಕರ ಹಕ್ಕುಗಳ ಸೇವಾ ಸಮಿತಿ :** ಕಾರ್ಮಿಕರ ಹಕ್ಕುಗಳ ಕಾರ್ಯಾಗಾರ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಮುಖ್ಯ ಕಾನೂನು ನೆರವು ಅಭಿರಕ್ಷಕ ಎಂ.ಎಸ್. ನವೀನ್, ವಿ. ವಿನಯ್‌ಕುಮಾರ್, ಅಖಿಲ ಭಾರತ ಅಂಚೆ ನೌಕರರ ಸಂಘದ ಅಧ್ಯಕ್ಷ ಎನ್. ಕೃಷ್ಣ, ಎನ್. ವನಜಾಕ್ಷಿ, ಶ್ರೀಮತಿ ಎಂ. ಲಲಿತಾರಾವ್, ಶ್ರೀಮತಿ ಶುಭ ಕೃಪೇಶ, ವಿ. ರಾಮಮೂರ್ತಿ, ರದಿವುಲ್ಲಾ ಖಾನ್, ಪ್ರಶಾಂತ್ ಪಿ. ಆಸ್ಕ್ ಮೈಸೂರು, ಮಹೇಶ್ ಕೆ.ಹೆಚ್. ಬೇಲೂರು, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಸಮಸ್ತ ಜೈನ ಸಮಾಜ :** ಚಾತುರ್ಮಾಸ ವರ್ಷಾಯೋಗ–2025, ಆಚಾರ್ಯ 108 ಶ್ರೀ ವಿದ್ಯಾಸಾಗರ ಮುನಿ ಮಹಾರಾಜರ ಪರಮ ಶಿಷ್ಯರಾದ 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರ ಚಾತುರ್ಮಾಸ ಮಂಗಳ ಕಳಶ ಸ್ಥಾಪನೆ ಸಮಾರಂಭ, ಸಾನ್ನಿಧ್ಯ : ಜೈನ ಮಠ, ಶ್ರೀ ಕ್ಷೇತ್ರ, ಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಶ್ರೀ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸಭಾ ಭವನ, ಚಂದ್ರಗುಪ್ತ ರಸ್ತೆ, ಮಧ್ಯಾಹ್ನ 2ಕ್ಕೆ.

■ **ಕಲಾಸೌರಭ :** ರಾಗಮಾಲಾ ಸೌರಭ, ವಿದುಷಿ ಡಾ.ಆರ್.ಎನ್. ಶ್ರೀಲತಾ ಅವರು ಶಹನಾ ರಾಗದ ಅಧ್ಯಯನ ಶಿಬಿರ, ಸ್ಥಳ: ಕಲಾಸೌರಭ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘ :** ವಿಶ್ವಬ್ರಹ್ಮ ಕ್ರಿಕೆಟ್ ಟೂರ್ನಮೆಂಟ್ ಬಹುಮಾನ ವಿತರಣೆ, ಉಪಸ್ಥಿತರು : ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್, ಡಿಸಿಪಿ ಬಿಂದುಮಣಿ ಆರ್.ಎನ್., ಸಂಘದ ಗೌರವಾಧ್ಯಕ್ಷ ರವಿಪ್ರಕಾಶ್, ಸಂಘದ ಅಧ್ಯಕ್ಷ ಗೋಲ್ಡನ್ ಟಿ. ಸುರೇಶ್, ಯುವರಾಜು, ರಾಜೇಂದ್ರ ನಗರೆ, ವಿವೇಕ್, ಸಂಘದ ಗೌರವಾಧ್ಯಕ್ಷ ರಾಘವೇಂದ್ರ ಶೇಠ್, ಎಂ.ಎಸ್. ಉಮಾಪತಿ, ಎಂ.ಮಹೇಶ್, ವಿಶ್ವನಾಥ ಆಚಾರ್ಯ, ಸ್ಥಳ : ವಿ.ವಿ. ಮೈದಾನ, ಸಂಜೆ 4ಕ್ಕೆ.

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಸುಬ್ರಹ್ಮಣ್ಯ ಚಿಟ್ಟಾಣಿ ಯಕ್ಷ ಸ್ನೇಹ ಬಳಗ :** ಆಷಾಢ ಯಕ್ಷ ವೈಭವ, ಪಾಂಚಜನ್ಯ ಯಕ್ಷಗಾನ ನಾಟಕ, ಸ್ಥಳ: ಯೋಗ ಸಂಸ್ಕೃತಿ ಕಲಾ ಭವನ, ಸಂಜೆ 5 ರಿಂದ.

■ **ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ :** ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ, ಉಪಸ್ಥಿತರು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಂಡ್ಯದ ಜಿಲ್ಲಾಧಿಕಾರಿ ಡಾ.ಕುಮಾರ್, ಟ್ರಸ್ಟ್ ಅಧ್ಯಕ್ಷ ಕೆ.ವಿ. ಶ್ರೀಧರ್, ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ, ಬೆಂಗಳೂರಿನ ಖ್ಯಾತ ಗಾಯಕಿ ಕುಮಾರಿ ಭಾಗ್ಯಶ್ರೀ ಗೌಡ ಮತ್ತು ತಂಡದವರಿಂದ ಗಾಯನ ಕಾರ್ಯಕ್ರಮ, ಸ್ಥಳ:ವಿಜಯನಗರದ ರೈಲ್ವೆ ಬಡಾವಣೆಯ ರಂಗಮಂದಿರ, ಸಂಜೆ 5ಕ್ಕೆ.

■ **ಯೇಸುವಿನ ಪವಿತ್ರ ಹೃದಯದ ದೇವಾಲಯ :** ವಾರ್ಷಿಕ ಮಹೋತ್ಸವ, ಸಂಜೆ 5.30ಕ್ಕೆ ವಿಶೇಷ ಪ್ರಬೋಧನೆಯ ಬಲಿಪೂಜೆ–ಆರಾಧನೆ, ಪ್ರೇಷಿತ ಆಡಳಿತ ಅಧಿಕಾರಿ, ನಿವೃತ್ತ ಮಹಾಧರ್ಮಾಧ್ಯಕ್ಷರಾದ ಡಾ. ಬರ್ನಾಡ್ ಮೊರಸ್, ಸ್ಥಳ: ಯೇಸುವಿನ ಪವಿತ್ರ ಹೃದಯದ ದೇವಾಲಯ, ಯಾದವಗಿರಿ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಲೋಕಕಲ್ಯಾಣಕ್ಕಾಗಿ ಶ್ರೀಮದ್ ಭಾಗವತ್ ಪ್ರವಚನ, ವಿದ್ವಾನ್ ಶ್ರೀ ಗಣೇಶ್ ಶರ್ಮಾ (ಮೈಸೂರು) ಅವರಿಂದ. ಸ್ಥಳ: ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30 ರಿಂದ.

■ **ಚಿನ್ಮಯ ಮಿಷನ್ :** ಮಿಷನ್‌ನ ಕರ್ನಾಟಕದ ಮುಖ್ಯಸ್ಥರಾದ ಸ್ವಾಮಿ ಬ್ರಹ್ಮಾನಂದ ಅವರಿಂದ 'ನಿತ್ಯ ಜೀವನಕ್ಕೆ ಗೀತೆಯ ಸಂದೇಶ' ಕುರಿತು ಪ್ರವಚನ, ಸ್ಥಳ: ಮೈಸೂರಿನ ಫೋರ್ಟ್ ಮೊಹಲ್ಲಾದ ಶೃಂಗೇರಿ ಶ್ರೀ ಶಂಕರ ಮಠದ ಆವರಣ, ಸಂಜೆ 6.30 ರಿಂದ.

■ **ರಂಗಾಯಣ :** ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ–2025, ರಂಗವಲ್ಲಿ ತಂಡದಿಂದ ಪರಮೇಶಿ ಪ್ರೇಮ ಪ್ರಸಂಗ ನಾಟಕ ಪ್ರದರ್ಶನ, ರಚನೆ : ಶ್ರೀನಿವಾಸ ಪ್ರಭು, ನಿರ್ದೇಶನ : ರವಿಪ್ರಸಾದ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ

■ **ಅನುಭೂತಿ ಸಂಸ್ಥೆ, ಇವೆಂಟ್ ಟ್ರೀ, ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ :** ಮಾಯಾ ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ್, ಸ್ಥಳ: ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದ ಆವರಣ, ವಿಜಯನಗರ, ಸಂಜೆ 6.30ಕ್ಕೆ.

■ **ರೋಟರಿ ಜಯಪ್ರಕಾಶನಗರ, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ :** ಉಚಿತ ಕಣ್ಣಿನ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸೆ ಶಿಬಿರ, ಸ್ಥಳ: ಜೆ.ಪಿ. ನಗರ ಸ್ಪೋರ್ಟ್ಸ್ ಕ್ಲಬ್ ಆವರಣ, ಬೆಳಗ್ಗೆ 8 ರಿಂದ.

■ **ಯಕ್ಷರಂಗ ಮೈಸೂರು :** ಮೈಸೂರಿನ ಯಕ್ಷರಂಗ ಕಲಾವಿದರಿಂದ ಚಂದ್ರಹಾಸ, ಮೂಡಲಪಾಯ ಯಕ್ಷಗಾನ ಬಯಲಾಟ, ರಚನೆ : ಕುವೆಂಪು, ನಿರ್ದೇಶನ : ಡಿ. ತಿಪ್ಪಣ್ಣ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ಎಂ.ಕುಮಾರಸ್ವಾಮಿ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಸರ್ಕೋಮ– ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 9.40 ನಮ್ಮ ಆರೋಗ್ಯ ಅಧಿಕ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚುತ್ತಿರುವಿಕೆಗೆ ಕಾರಣಗಳು ಮತ್ತು ಚಿಕಿತ್ಸೆ ಕುರಿತು ಕನ್ಸಲ್ಟಂಟ್ ಫಿಸಿಷಿಯನ್ ಮತ್ತು ಡಯಾಬಿಟಾಲಜಿಸ್ಟ್ ಡಾ.ಪಿ. ಹರಿದಾಸ್ ಉಪಾಧ್ಯ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ –ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ, ನೇರ್ ಫೋನ್–ಇನ್ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ: ಎಸ್.ಟಿ.ಜಿ. ಪಬ್ಲಿಕ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಸಂಧ್ಯಾ ಎಂ.ಎ., 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ ಕಾಲೇಜು ರಂಗ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ –ತಾಳಮದ್ದಲೆ, ಪ್ರಸಂಗ–ಸೀತಾ ಪರಿತ್ಯಾಗ, ಪ್ರಸ್ತುತಿ–ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾ ಪೋಷಿತ ಯಕ್ಷಗಾನ ಮಂಡಲಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51ಕೃಷಿರಂಗ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಟಿ.ವಿ. ವಿದ್ಯಾಶಂಕರ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ರಾಷ್ಟ್ರೀಯ ನಾಟಕ – 'ರುಪಾಯಿ ನಿನ್ನ ತಿಂದಿತ್ತಾ', ಮೂಲ ಹಿಂದಿ: ಭಗವತಿಚರಣ್ ವರ್ಮ, ನಾಟಕ ರೂಪಾಂತರ: ವಿನೋದ್ ಕುಮಾರ್, ಕನ್ನಡ ಅನುವಾದ: ಡಾ.ಹೆಚ್.ಎಂ.ಕುಮಾರಸ್ವಾಮಿ, ನಿರ್ದೇಶನ ಹಾಗೂ ನಿರ್ಮಾಣ: ಜಿ.ಶಾಂತಕುಮಾರ್, (ಪಾತ್ರವರ್ಗದಲ್ಲಿ: ಉಮೇಶ್.ಎಸ್.ಎಸ್, ಆರ್.ಲೋಕೇಶ್ವರಿ, ಶ್ರೀದೇವಿ ನಚಿಕೇತ್, ಬಿ.ಜಿ.ಕವಿತಾ, ದಿಗ್ವಿಜಯ್.ಬಿ, ಜಿ.ಶಾಂತಕುಮಾರ್), 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಸುಮಿತ್ರ .ಎನ್, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ – ರಾಜೇಂದ್ರ ಸೇಜುವಾರ್ ಅವರ ಖ್ಯಾಲ್ ಗಾಯನ


ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯರಾದ
ಶ್ರೀ ಕೆ.ವಿವೇಕಾನಂದ
ರವರಿಗೆ
ಜನ್ಮದಿನದ ಶುಭಾಶಯಗಳು
VISMAYA
8050302424
ಶುಭಕೋರುವವರು : ಶ್ರೀ ಕೆ.ವಿವೇಕಾನಂದ ರವರ ಸ್ನೇಹ ಬಳಗ

ನಕ್ಕರೆ ಅದೇ ಸ್ವರ್ಗ

ಅಪ್ಪ : ಲೋ... ಮಗನೇ ಯಾರಿಗೂ ಹೆದರಬೇಡ. ನೀನು ಸಿಂಹದ ಮರಿ ಕಣೋ...

ಮಗ : ಹೌದಪ್ಪಾ... ಟೀಚರ್ ಹಾಗೇ ಹೇಳ್ತಾರೆ. ನೀನು ಯಾವುದೋ ಪ್ರಾಣಿಗೆ ಹುಟ್ಟಿರಬೇಕು. ಅಂತ...!!

ಮೈಸೂರು ಮಿತ್ರ

ಭಾನುವಾರ, 20 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಯಾರಾದರೂ ನಿಮ್ಮ ಬಳಿ ಬಂದು ತನ್ನ ಸಮಸ್ಯೆಯನ್ನು ನಿಮ್ಮೆದುರು ವ್ಯಕ್ತಪಡಿಸುತ್ತಾನೆಂದರೆ, ದೇವರಲ್ಲಿರುವಂತಹ ಪೂರ್ಣ ವಿಶ್ವಾಸ ಅವನಿಗೆ ನಿಮ್ಮ ಮೇಲಿದೆಯೆಂದು ಅರ್ಥ..!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪುಸ್ತಕವನ್ನು ಅದರ ಹೊದಿಕೆಯಿಂದ ಅಳೆಯಬಾರದು

ನಿಮ್ಮ ಪತ್ರಗಳು

ಕೆಬಿಜಿಯವರಿಗೆ ನುಡಿ ನಮನ

■ ನೀವು ನಮ್ಮ ಮಿತ್ರನ ವರದಿಗಾರ..!



ಮಾನ್ಯರೆ,

ಮೂರ್ನಾಲ್ಕು ವರ್ಷಗಳ ಹಿಂದೆ ಅದೊಂದು ದಿನ ಸುತ್ತೂರು ಶ್ರೀ ಕ್ಷೇತ್ರ ದರ್ಶನಕ್ಕಾಗಿ ಕೆ.ಬಿ.ಗಣಪತಿಯವರು ಕುಟುಂಬ ಸಮೇತರಾಗಿ ಆಗಮಿಸಿದ್ದರು. ಶ್ರೀ ಕ್ಷೇತ್ರ ದರ್ಶನ ಮಾಡಿಸಿದ ನಂತರ ನಮ್ಮ ಜೆಎಸ್‌ಎಸ್ ವಸತಿ ಶಾಲೆಯ ಮಕ್ಕಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಅವರ ವೇದಿಕೆ ಕಾರ್ಯಕ್ರಮದ ಚಿತ್ರ ಮತ್ತು ವರದಿಯನ್ನು ಆ ಕೂಡಲೇ ಸಿದ್ಧಪಡಿಸಿ, ಅವರಿಗೇ ತೋರಿಸಿದೆ. ನನ್ನ ವರದಿ ಓದಿದ ಕೆಬಿಜಿಯವರು ನೀವು ತೆಗೆದಿರುವ ಚಿತ್ರ ಹಾಗೂ ಬರೆದಿರುವ ವರದಿ ತುಂಬಾ ಚೆನ್ನಾಗಿದೆ. ಇದರಲ್ಲಿ ಯಾವುದೇ ತಿದ್ದುಪಡಿ ಮಾಡುವ ಅವಶ್ಯಕತೆಯೇ ಕಾಣುತ್ತಿಲ್ಲ. ಈ ವರದಿಗೆ ನಿಮ್ಮದೇ ಹೆಸರು ಹಾಕಿ. ನಾಳಿನ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ. ನೀವು ಇನ್ನು ಮುಂದೆ ನಮ್ಮ ವರದಿಗಾರರಾಗಿ, ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮಗಳ ಚಿತ್ರಸಹಿತ ವರದಿಗಳನ್ನು ನೇರವಾಗಿ ನನಗೇ ಮೇಲ್ ಮಾಡಿ' ಎಂದರು. ಅವರ ಪ್ರೋತ್ಸಾಹದಾಯಕ ನುಡಿಗಳನ್ನು ಕೇಳಿದ ನನಗೆ ಯಾವುದೋ ದೊಡ್ಡ ಪ್ರಶಸ್ತಿ ಪಡೆದಷ್ಟು ಪರಮಾನಂದವಾಯಿತು. ಅವರ ಬೆನ್ನು ತಟ್ಟುವ ಇಂತಹ ಗುಣಗಳಿಂದಾಗಿ ನನ್ನಂತ ಅದೆಷ್ಟೋ ಮಂದಿಯ ಹೃದಯದಲ್ಲಿ ಸಾವಿರದ ನೆನಪುಗಳನ್ನು ಬಿಟ್ಟು ಹೋಗಿದ್ದಾರೆ.

–ಮ.ಗು.ಬಸವಣ್ಣ, ಜೆಎಸ್‌ಎಸ್ ಬಡಾವಣೆ, ಮೈಸೂರು

■ ಮಿತ್ರ ಪ್ರೇಮಿ, ಅಜಾತಶತ್ರು ಕೆಬಿಜಿ

ಮಾನ್ಯರೆ,

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ ಅಗಲಿಕೆಯಿಂದ ಪತ್ರಿಕೋದ್ಯಮದ ಮತ್ತೊಂದು ಪ್ರಮುಖ ಕೊಂಡಿ ಕಳಚಿದಂತಾಗಿದೆ. ಅವರು ಬಹಳ ಸರಳ ವ್ಯಕ್ತಿತ್ವದವರಾಗಿದ್ದರು. ಮೈಸೂರಿನಲ್ಲಿ ವೈದ್ಯರ ಅತ್ಯಂತ ಜನಪ್ರಿಯ ಮನರಂಜನಾ ಕಾರ್ಯಕ್ರಮ ಗೀತ್ ಗಾತಾ ಚಲ್‌ನಲ್ಲಿ ಕೆಬಿಜಿ ಅವರ ಉಪಸ್ಥಿತಿ ಕಾರ್ಯಕ್ರಮಕ್ಕೆ ಒಂದು ಕಳೆ ಕಟ್ಟುತ್ತಿತ್ತು. ಅವರು ಕಡೇವರೆಗೂ ಕಾರ್ಯಕ್ರಮವನ್ನು ಬಹಳ ಉತ್ಸಾಹದಿಂದ ವೀಕ್ಷಿಸಿ ಅಲ್ಲಿರುವ ವೈದ್ಯರಿಗೆ ಸ್ಫೂರ್ತಿ ತಂದುಕೊಡುತ್ತಿದ್ದರು. ಭಾರತೀಯ ವಿದ್ಯಾಭವನದಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಆ ಸಂಸ್ಥೆಗೂ ಆಧಾರಸ್ತಂಭವಾಗಿದ್ದರು. ಇನ್ನು ರೋಟರಿ ಮೈಸೂರಲ್ಲಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿ ಕಿರಿಯ ಸದಸ್ಯರಿಗೆ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡುತ್ತಿದ್ದುದು ಇನ್ನು ಕಣ್ಣಿಗೆ ಕಟ್ಟಿದಂತಿದೆ. ದಿಢೀರನೇ ಕೆಬಿಜಿ ಅವರು ಅಗಲುತ್ತಾರೆಂದು ಯಾರೂ ಊಹಿಸಿರಲಿಲ್ಲ. ಅವರು ಆರೋಗ್ಯವನ್ನು ಚೆನ್ನಾಗಿಯೇ ಕಾಪಾಡಿಕೊಂಡು ಬಂದಿದ್ದರು. ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ಭಗವಂತ ದಯಪಾಲಿಸಲಿ. **–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು**

■ ನೆನಪು–ನೋವು ಶ್ರದ್ಧಾಂಜಲಿ

ಮಾನ್ಯರೆ,

ತುಮಕೂರಿನಲ್ಲಿ 12 ವರುಷ ಪತ್ರಿಕೋದ್ಯಮ ಕ್ಷೇತ್ರದಲ್ಲಿ ನನಗೆ ಆಗಿದ್ದ ಅನುಭವದ ಆಧಾರದ ಮೇಲೆ ದಿವಂಗತ ಡಾ.ಕೆ.ಬಿ.ಗಣಪತಿ ಅವರು 'ಮೈಸೂರು ಮಿತ್ರ' ಪತ್ರಿಕೆ ಸಹ ಸಂಪಾದಕ ಹುದ್ದೆ ನೀಡಿ ಪ್ರೋತ್ಸಾಹಿಸಿದರು. ಅದೊಂದು ಸಂದರ್ಭದಲ್ಲಿ 'Seven days at Tibet' ಚಿತ್ರದ ನಾಯಕಿಯನ್ನು ಸಂದರ್ಶನ ಮಾಡಲು ಕೊಡಗಿನ 'ಬಯಲುಕುಪ್ಪೆ'ಗೆ ಕಳುಹಿಸಿದಾಗ ನನಗೆ Smart dress code ಬಗ್ಗೆ ಹೇಳಿ, ಆಕೆಗೆ ಏನಾದರೂ ಉತ್ತರ ಕೊಡಲು ತಾಕೀತು ಮಾಡಿ, ಯಾವ ಯಾವ ಪ್ರಶ್ನೆ ಕೇಳಬೇಕು, ಹೇಗೆ ಕೇಳಬೇಕು ಎಂದೆಲ್ಲಾ ಮಾರ್ಗದರ್ಶನ ಮಾಡಿ ಕಳಿಸಿದ್ದು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಹೀಗೆ ಪತ್ರಿಕೋದ್ಯಮ ಕ್ಷೇತ್ರಕ್ಕೆ ಹೇಳಿ ಮಾಡಿಸಿದ ವ್ಯಕ್ತಿತ್ವ ಅವರದಾಗಿತ್ತು. ದಿವಂಗತರ ನೆನಪಿನೊಂದಿಗೆ ಕಳೆದು ಕೊಂಡ ನೋವಿನೊಂದಿಗೆ ಶ್ರದ್ಧಾಂಜಲಿ ಅರ್ಪಿಸುವೆ? **–ಕುಂದಣ ನಾಗೇಂದ್ರ, ಮೈಸೂರು**

■ ಪತ್ರಿಕಾರಂಗಕ್ಕೆ ಕೆಬಿಜಿಯವರ ಸೇವೆ ಅವಿಸ್ಮರಣೀಯ

ಮಾನ್ಯರೆ,

'ಮೈಸೂರು ಮಿತ್ರ ಹಾಗೂ 'ಸ್ಟಾರ್ ಆಫ್ ಮೈಸೂರ್'ನ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ ನಿಧನದಿಂದ ಪತ್ರಿಕಾ ಕ್ಷೇತ್ರಕ್ಕೆ ಅಪಾರ ನಷ್ಟವಾಗಿದೆ. ಕಳೆದ 5 ದಶಕಗಳಿಂದ ಪತ್ರಿಕಾರಂಗಕ್ಕೆ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯ. ತಮ್ಮ ವಿಶಿಷ್ಟವಾದ ಲೇಖನ–ವರದಿಗಳ ಮೂಲಕ ಎರಡೂ ಪತ್ರಿಕೆಗಳನ್ನು ಉತ್ತುಂಗದ ಶಿಖರಕ್ಕೆ ಕೊಂಡೊಯ್ಯುವ ಮೂಲಕ ಓದುಗರ ಅವಿಭಾಜ್ಯ ಅಂಗವಾಗೇ ಹೊರಹೊಮ್ಮಿದ್ದವು. ತಾವು ನಂಬಿದ್ದ ಪತ್ರಿಕಾ ಸಿದ್ಧಾಂತವನ್ನು ಪ್ರತಿಪಾದಿಸಿಕೊಂಡು ಬಂದಿದ್ದ ಕೆಬಿಜಿಯವರು ನೇರ–ನಿಷ್ಠುರ ಬರಹಗಳ ಮೂಲಕ ಜನಪ್ರಿಯರಾಗಿದ್ದವರು. ಅವರ 'ಭೂ ಮಂತ್ರ' ಹಾಗೂ 'ಅಬ್ರಕಡಬ್ರ' ಅಂಕಣಗಳು ಸಮಸ್ಯೆಗಳ ನಿವಾರಣೆಗಾಗಿ ಸರ್ಕಾರದ ಮೇಲೆ ಪ್ರಭಾವ ಬೀರುವಂತಹ ವ್ಯವಸ್ಥೆಯ ವಿರುದ್ಧದ ಲೇಖನಗಳಾಗಿದ್ದವು. ಕೆಬಿಜಿಯವರು ನಿಧನರಾದಾಗ ಅವರ ಅಂತ್ಯಸಂಸ್ಕಾರದ ವೇಳೆ ಸರ್ಕಾರಿ ಗೌರವ ಸಲ್ಲಿಸಿದಿರುವುದು ಮಾತ್ರ ನಿಜಕ್ಕೂ ಬೇಸರದ ಸಂಗತಿ.

–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.

■ ಡಾಕೆ.ಬಿ.ಗಣಪತಿಯವರಿಗೆ ನಮನ

'ಮೈಸೂರ ಮಿತ್ರ' ಸಂಪಾದಕರು.
ಓದುಗರಿಗೆ ನೀವು ಪ್ರಾಧ್ಯಾಪಕರು,
ಬೆಳಿಗ್ಗೆ ಎದ್ದ ಕ್ಷಣ ಓದುಗರನಾ
'ಮೈಸೂರು ಮಿತ್ರ'ನಾಗಿಸಿದ್ದು ನೀವು
ಮುಚ್ಚಿಟ್ಟ ನುಡಿಗಳಿಗೆ
ಬಿಚ್ಚಿನುಡಿಯನಾಗಿಸಿದ್ದೀರಿ,
ಪದಗಳ ಮೂಲಕ ಸಮಸ್ಯೆಗಳಿಗೆ
ಫಲಶ್ರುತಿ ದೊರಕಿಸಿ ಕೊಟ್ಟಿರಿ,

ಪತ್ರಿಕಾ ರಂಗದಲಿ 50 ವರ್ಷದ ರೂವಾರಿ
ಹೊರಟು ಹೋದಿರಿ ಮಾತಿಲ್ಲದ
ನಿಶ್ಯಬ್ದ ದಾರಿಯಲ್ಲಿ,
ನಿಮ್ಮ ಮಾತುಗಳು ನಿಮ್ಮ ಪತ್ರಿಕಾ
ಪುಟದ ಬರವಣಿಗೆಯಲ್ಲಿ,
ಓದುಗರನ ನೆನಪಿನಿಂದ ನೆನಪಿಸಿಕೊಳ್ಳುತ್ತಾ
ನಿಮಗೆ ಅರ್ಪಿಸಿವೆವು ನಮನಃ

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 96639 96390

ಹಳ್ಳಿ ಹಕ್ಕಿ ಹಾಡು



ವಾರಂಟಿ ಇಲ್ಲದ ಗ್ಯಾರಂಟಿಗಳಿಂದ ಶೂನ್ಯಾಭಿವೃದ್ಧಿ

ಸ್ವಾತಂತ್ರ್ಯಾನಂತರದ ಭಾರತ, ರೈತರು ಹಾಗೂ ಆರ್ಥಿಕವಾಗಿ ಹಿಂದುಳಿದಂತಹ ಸಮುದಾಯಗಳಿಗೆ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೊಟ್ಟಿದೆ. ಹೀಗೆ ನೀಡಿದಂತಹ ಯಾವ ಕಾರ್ಯಕ್ರಮಗಳೂ ಉಚಿತವಾಗಿ ಅಲ್ಲ. ರಾಷ್ಟ್ರ ಮಟ್ಟದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ರಾಜ್ಯದಲ್ಲಿ ದೇವರಾಜ ಅರಸರ ಸರ್ಕಾರಗಳು ಬಡವರನ್ನು ಬಡತನದಿಂದ ಮುಕ್ತಿ ಮಾಡಲು ಜಾರಿಗೆ ತಂದಂತಹ ಹಲವಾರು ಕಾರ್ಯಕ್ರಮಗಳು ಯಶಸ್ವಿಯಾಗಿವೆ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಮೇಲೆತ್ತಿವೆ. ಕೇಂದ್ರದಿಂದ ಇಷ್ಟು, ರಾಜ್ಯದಿಂದ ಇಷ್ಟು, ಫಲಾನುಭವಿಗಳಿಂದ ಇಷ್ಟು ಎಂದು ಎಲ್ಲರನ್ನೂ ಸಹಭಾಗಿಗಳನ್ನಾಗಿ ಮಾಡಿ ಯಶಸ್ವಿಯಾಗಿವೆ.



ಬಡ ಗೇಣಿದಾರ ರೈತನಿಗೆ ನೀನು ಮತ್ತು ನಿನ್ನ ಕುಟುಂಬ ಉಳುಮೆ ಮಾಡುವ ಭೂಮಿ ನಿನ್ನದೇ ಎಂದು ಭೂಸುಧಾರಣೆಯ ಮೂಲಕ ಕೊಟ್ಟ ಭೂಮಿಗೂ ಎಕರೆಗೆ ಇಂತಿಷ್ಟು ಕಿಸ್ತು ಕಟ್ಟಬೇಕು ಮತ್ತು ಸರ್ಕಾರದ ದರಖಾಸ್ತು ಭೂಮಿ ಹಂಚಿಕೆಯಲ್ಲೂ ಎಕರೆಗೆ ಇಂತಿಷ್ಟು ದರ ಎಂದು ನಿಗದಿ ಮಾಡಿ ಅವನ ಜವಾಬ್ದಾರಿಯನ್ನು ಜಾಸ್ತಿ ಮಾಡಿವೆ.

ಮಹಾತ್ಮ ಗಾಂಧಿಯವರು ಹೇಳಿದ್ದು ಸಹ ಅಂತ್ಯೋದಯದಿಂದ ಸರ್ವೋದಯಕ್ಕೆ ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳು ಸಾಗಲಿ ಎಂದಿದ್ದಾರೆ. ಆದರೆ ಇಂದಿನ ನಮ್ಮ ರಾಜ್ಯ ಸರ್ಕಾರ ಇದನ್ನು ತಲೆಕೆಳಗು ಮಾಡಿದೆ. ಗ್ಯಾರಂಟಿ ಯೋಜನೆಗಳು ಪ್ರಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮಂತ್ರಿ ಮಹದೇವಪ್ಪನವರನ್ನು ಉದ್ದೇಶಿಸಿ ಹೇಳಿದ ಮಾತು; "ಮಹದೇವಪ್ಪ ನಿನ್ನ ಹೆಂಡ್ತಿಗೂ ಎರಡು ಸಾವಿರ, ನನ್ನ ಹೆಂಡ್ತಿಗೂ ತಿಂಗಳಿಗೆ ಎರಡು ಸಾವಿರ ಫ್ರೀ ಎಂದರು. ಆದರೆ ಸಿದ್ದರಾಮಯ್ಯನವರು ಇಲ್ಲಿ ಅಂತ್ಯೋದಯವನ್ನು ಬಿಟ್ಟು ಸರ್ವೋದಯವನ್ನು ಸಾರಿದರು. ಈ ಗ್ಯಾರಂಟಿ ಯೋಜನೆ, ಸಂಪುಟದ ಯಾವುದೇ ಸಚಿವರಿಗೂ ಹಿಡಿಸಲಿಲ್ಲ. ಆದರೆ ಮುಖ್ಯಮಂತ್ರಿ ಮುಂದೆ ಮಾತನಾಡುವ, ವಿರೋಧಿಸುವ ಗಂಡೆದೆ ಅವರಲ್ಲಿಲ್ಲ. ಮಾತನಾಡಿದರೆ ನನ್ನನ್ನು ಸಂಪುಟದಿಂದ ಕೈಬಿಟ್ಟರೆ ಎಂದುಕೊಂಡು ಸುಮ್ಮನಾಗಿದ್ದಾರೆ. ಇದು ಎಂದಾದರೂ ಸಿಡಿಯುತ್ತದೆ.

ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸರಿಂದ ಹಿಡಿದು ಯಾವುದೇ ಮಂತ್ರಿಗಳು ತಾವು ಭಾಗವಹಿಸಿದ್ದಂತಹ ಸಾರ್ವಜನಿಕ ಸಭೆ ಮುಗಿದ ನಂತರ ದಡದಡನೆ ವೇದಿಕೆಯಿಂದ ಕೆಳಗಿಳಿದು ಸಭೆಯ ಕೊನೆಯಲ್ಲಿ ಇರುತ್ತಿದ್ದ ಜನರ ಬಳಿ ಸಾಗಿ ಅವರ ಕಷ್ಟಗಳನ್ನು ಆಲಿಸುತ್ತಿದ್ದರು. ಇದರ ಸಂಕೇತ ಕಾಂಗ್ರೆಸ್ಸಿನ ತತ್ವ ಕಟ್ಟ ಕಡೆಯ ಮನುಷ್ಯನನ್ನು ತಲುಪಬೇಕೆನ್ನುವುದೇ ಆಗಿತ್ತು.

> “ ಯಾವುದೇ ವಿವೇಚನೆ ಇಲ್ಲದೆ ಜನರಿಂದ ತೆರಿಗೆ ರೂಪದಲ್ಲಿ ಸಂಗ್ರಹವಾದ ಸರ್ಕಾರದ ಹಣವನ್ನು ನಿಮ್ಮ ತೆವಲಿಗಾಗಿ ಖರ್ಚು ಮಾಡುತ್ತಿರುವುದು ಯಾವ ನ್ಯಾಯ? ಅದೂ ಸಾಲ ಮಾಡಿ ತುಪ್ಪ ತಿಂದಂತೆ! ಸಾಲ ತೀರಿಸುವವರು ಈ ರಾಜ್ಯದ ಜನರೇ ಹೊರತು ನೀವುಗಳಲ್ಲ. ಈಗಾಗಲೇ ಜನರಲ್ಲಿ ಅಸಮಾಧಾನ ಶುರುವಾಗಿದೆ. ಜನರು ಜನತಂತ್ರ ವ್ಯವಸ್ಥೆಯಲ್ಲಿ ನಿಮ್ಮ ಬುದ್ಧಿಗೇಡಿ ಕಾರ್ಯಕ್ರಮಗಳಿಂದ ದಂಗೆ ಏಳುವ ಮೊದಲು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರಿ ಮಾಡಿ.

ಕಟ್ಟಾ ಕಾಂಗ್ರೆಸ್‌ನ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಜೊತೆಗೆ ಕೆಲವು ನಿಷ್ಠ ಕಾಂಗ್ರೆಸ್ಸಿಗ ಮಂತ್ರಿಗಳನ್ನು ಹೊರತುಪಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಾದಿಯಾಗಿ ಬಹುತೇಕ ಮಂತ್ರಿಗಳು ಕಾಂಗ್ರೆಸ್ಸಿನ ನೀತಿಯನ್ನು ಮರೆತಿದ್ದಾರೆ. ಕಾರಣ! ಅವರೆಲ್ಲಾ ಜನತಾ ಪರಿವಾರದಿಂದ ಕಾಂಗ್ರೆಸ್ಸಿಗೆ ಪಕ್ಷಾಂತರ ಮಾಡಿ ಬಂದವರು. ಅರ್ಥಾತ್ ವಲಸೆ ಬಂದವರು. ಅವರ ರಾಜಕೀಯ ಬದುಕಿನುದ್ದಕ್ಕೂ ಕಾಂಗ್ರೆಸ್ಸಿನ ನಾಯಕತ್ವವನ್ನು ಬಹಳವಾಗಿ ವಿರೋಧಿಸಿದ್ದವರು. ನಾವ್ಯಾರು ಬಡವರಿಗೆ ಕೊಡುವ ಸರಕಾರಿ ಕಾರ್ಯಕ್ರಮಗಳನ್ನು ವಿರೋಧಿಸಿದವರಲ್ಲ. ಆದರೆ, ಅವು ಅಂತ್ಯೋದಯವಲ್ಲದೆ ಸರ್ವೋದಯಕ್ಕಾಗಿ ಎಂದಾಗ ವಿರೋಧಿಸದೆ ವಿಧಿಯಿಲ್ಲ. ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾದ ಉಚಿತವಾಗಿ ಹೆಣ್ಣು ಮಕ್ಕಳಿಗೆ ಕೊಡುತ್ತಿರುವ ತಿಂಗಳಿಗೆ ಎರಡು ಸಾವಿರ ರೂಪಾಯಿಗಳ ಗೃಹಲಕ್ಷ್ಮಿ ಯೋಜನೆ ಸರ್ವೋದಯವಾಗಿದೆ. ಸರ್ಕಾರದ ಯೋಜನೆಗಳ ಮೊದಲು ಉಳಿದವರಿಗೆ ಕೊಟ್ಟು, ಕೆಳಗಿನವರಿಗೆ ಕೊಟ್ಟು ರಾಜ್ಯದ ಸಂಪನ್ಮೂಲ ಹೆಚ್ಚಾಗಿದ್ದರೆ ಅದನ್ನು ಉಳ್ಳವರಿಗೂ ಕೊಡಬಹುದು. ಆದರೆ ಈ ಯೋಜನೆ ಉಳ್ಳದವರು, ಉಳ್ಳವರು ಎಲ್ಲರಿಗೂ ಎಂದು ಸಿದ್ದರಾಮಯ್ಯ ಘೋಷಿಸಿ, ಕೊಡುತ್ತಿರುವುದು ನ್ಯಾಯ ಸಮ್ಮತವಲ್ಲ.



ಕಾರಣ, ಗ್ಯಾರಂಟಿ ಯೋಜನೆಗೆ ಸರ್ಕಾರದ ಹೇಳಿಕೆ ಮತ್ತು ಪ್ರಚಾರದ ಪ್ರಕಾರವೇ ಐವತ್ತಾರು ಸಾವಿರ ಕೋಟಿ ಖರ್ಚಾಗುತ್ತದೆ. ಸಾಲ ಮಾಡಿ ಎಲ್ಲಾ ಹೆಣ್ಣು ಮಕ್ಕಳಿಗೆ ಹೋಳಿಗೆ ಊಟ ಹಾಕುವುದು ಎಂದರೆ ಯಾವ ನ್ಯಾಯ? ಸಿದ್ದರಾಮಯ್ಯ ದಡ್ಡರಿರಬಹುದು ಆದರೆ ಜನರು, ತೆರಿಗೆದಾರರು ಬುದ್ಧಿವಂತರಿದ್ದಾರೆ. ಸರ್ಕಾರ ಸಾಲ ಮಾಡಿ ಜನರಿಗೆ ಸೌಲಭ್ಯ ಕೊಡುತ್ತಿರುವುದು ದುರಂತ. ಈ ಐವತ್ತಾರು ಸಾವಿರ ಕೋಟಿಯಿಂದ ರಾಜ್ಯದಲ್ಲಿ ತೆವಳುತ್ತಿರುವ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಿ ಅನ್ನದಾತನಿಗೆ, ಅನ್ನ ಉಂಬುವವರಿಗೆ ದೊಡ್ಡ ಸಹಾಯ ಮಾಡಬಹುದಾಗಿತ್ತು. ಈಗ ಒಂದು ವಾರದ ಹಿಂದೆ ನಾಡಿನ ನೀರಾವರಿ ಸಚಿವರಾದ ಡಿ.ಕೆ.ಶಿವಕುಮಾರ್ ಅವರು ಕೆಲವು ನೀರಾವರಿ ಯೋಜನೆಗಳನ್ನ ತಕ್ಷಣ ಮುಗಿಸಬೇಕಾಗಿದೆ. ಅದಕ್ಕಾಗಿ ನನಗೆ ಹನ್ನೆರಡು ಸಾವಿರ ಕೋಟಿ ರೂಪಾಯಿ ಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತಿದ್ದಾರೆ.

ಒಂದು ಉದಾಹರಣೆ ಕೊಡುವುದೇ ಆದರೆ ನಮ್ಮ ಕೃಷ್ಣರಾಜನಗರ ಮತ್ತು ಸಾಲಿಗ್ರಾಮ ತಾಲೂಕುಗಳಲ್ಲಿ ಈ ಗೃಹಲಕ್ಷ್ಮಿ ಯೋಜನೆ ಮೂಲಕ 68,250 ಹೆಣ್ಣು ಮಕ್ಕಳಿಗೆ ಈತನಕ ಒಟ್ಟು ರೂ.244.00 ಕೋಟಿಗೂ ಅಧಿಕ ಹಣ ಸಂದಾಯವಾಗಿದೆ. ಕೃಷ್ಣರಾಜನಗರ ತಾಲೂಕಿನ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವುದು ನಿಲ್ಲಿಸಿ ಸುಮಾರು 20 ವರ್ಷಗಳ ಮೇಲಾಗಿದ್ದು, ಈ ಹಣದಲ್ಲಿ ಅದನ್ನು ದುರಸ್ತಿ ಮಾಡಿ ಪ್ರಾರಂಭಿಸಬಹುದಾಗಿತ್ತು. ಇದರಿಂದ ನಾಲ್ಕು ತಾಲೂಕಿನ ಕಬ್ಬು ಬೆಳೆಗಾರರಿಗೆ, ಕಬ್ಬು ಕಡಿಯುವ ಕೃಷಿ ಕಾರ್ಮಿಕರಿಗೆ, ಕಬ್ಬು ಸಾಗಾಟದ ಲಾರಿ, ಟ್ರ್ಯಾಕ್ಟರ್, ಎತ್ತಿನಗಾಡಿ ಹೊಂದಿದಂತಹ ರೈತರಿಗೆ ಬಹಳಷ್ಟು ಅನುಕೂಲವಾಗುತ್ತಿತ್ತು. ಬಹಳಷ್ಟು ಕುಟುಂಬಗಳು ಇದರಿಂದ ಬದುಕು ಕಂಡುಕೊಳ್ಳುತ್ತಿದ್ದವು.

ಆದರೆ ದುರಹಂಕಾರದಿಂದ ಮೆರೆಯುವ, ಮೊರೆಯುವ ಸರ್ಕಾರಕ್ಕೆ ಇದೆಲ್ಲಾ ಏಕೆ ಅರ್ಥವಾಗುತ್ತಿಲ್ಲ. ಯಾವುದೇ ವಿವೇಚನೆ ಇಲ್ಲದೆ ಜನರಿಂದ ತೆರಿಗೆ ರೂಪದಲ್ಲಿ ಸಂಗ್ರಹವಾದ ಸರ್ಕಾರದ ಹಣವನ್ನು ನಿಮ್ಮ ತೆವಲಿಗಾಗಿ ಖರ್ಚು ಮಾಡುತ್ತಿರುವುದು ಯಾವ ನ್ಯಾಯ? ಅದೂ ಸಾಲ ಮಾಡಿ ತುಪ್ಪ ತಿಂದಂತೆ! ಸಾಲ ತೀರಿಸುವವರು ಈ ರಾಜ್ಯದ ಜನರೇ ಹೊರತು ನೀವುಗಳಲ್ಲ. ಈಗಾಗಲೇ ಜನರಲ್ಲಿ ಅಸಮಾಧಾನ ಶುರುವಾಗಿದೆ. ಜನರು ಜನತಂತ್ರ ವ್ಯವಸ್ಥೆಯಲ್ಲಿ ನಿಮ್ಮ ಬುದ್ಧಿಗೇಡಿ ಕಾರ್ಯಕ್ರಮಗಳಿಂದ ದಂಗೆ ಏಳುವ ಮೊದಲು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರಿ ಮಾಡಿ.

ಸರ್ಕಾರದ ಜನೋಪಯೋಗಿ ಕಾರ್ಯಕ್ರಮಗಳ ಮೂಲಕ ದುಡಿಯುವ ಕೈಗಳಿಗೆ ಕೆಲಸ ನೀಡಬೇಕು. ಈಗ ಐದು ತಿಂಗಳಾದರೂ ಗೃಹಲಕ್ಷ್ಮಿ ಹಣ ಮಹಿಳೆಯರಿಗೆ ಬಂದಿಲ್ಲ. ಕಾರಣವನ್ನ ಸರ್ಕಾರ ಏನೇ ಹೇಳಬಹುದು. ಆದರೆ ಸರ್ಕಾರದಲ್ಲಿ ಹಣವಿಲ್ಲ. ನಮ್ಮ ಮಹಿಳೆಯರಿಂದ ಮುಖ್ಯಮಂತ್ರಿಗಳಿಗೆ ಪಾಠ ಹೇಳಿಸಬೇಕು. ದುಡಿಮೆ ಇಲ್ಲದ ಸಂಸಾರ ಸಂಸಾರವಾಗಲಾರದು. ಹಿಂದೆ ಕಾಂಗ್ರೆಸ್ ಸರ್ಕಾರವೇ ತಂದಂತಹ ಸ್ವಸಹಾಯ ಗುಂಪುಗಳ ಬಳಿ ಕೇಳಿ ಮುಖ್ಯಮಂತ್ರಿಗಳೇ ಅವರೇ ನಿಮಗೆ ಅನುಭವದ ಪಾಠ ಹೇಳುತ್ತಾರೆ. ಅವರು ದುಡಿದು ಬದುಕುತ್ತಾರೆ.

ನಿಮ್ಮ ಪಂಚ ಗ್ಯಾರಂಟಿಗಳಲ್ಲಿ ಯುವಕರಿಗಾಗಿ ಘೋಷಿಸಿದ ಯುವನಿಧಿ ಯೋಜನೆ ಇದುವರೆವಿಗೂ ಜಾರಿಯಾಗಿಲ್ಲ. ನಿಮ್ಮ ಗ್ಯಾರಂಟಿಗಳಿಗೆ ಹಣ ಹೊಂದಿಸಲು ರಾಜ್ಯದ ಜನರಿಗೆ ಸಾರಿಗೆ ಖರ್ಚು, ಸಾರಾಯಿ ಖರ್ಚು, ವಿದ್ಯುಚ್ಛಕ್ತಿ ಖರ್ಚು, ಖರೀದಿಸುವ ಭೂಮಿಯ ಸ್ಟ್ಯಾಂಪ್ ಡ್ಯೂಟಿ ಶೇಕಡ 200 ಏರಿಕೆ, ಎಲ್ಲಾ ಖರ್ಚುಗಳ ಬಾಬ್ತುಗಳು ತೀವ್ರ ರೀತಿ ಏರಿಕೆಯಾಗಿವೆ. ಜನ ತೀವ್ರವಾಗಿ ಕಷ್ಟಕ್ಕೆ ಸಿಲುಕಿದ್ದಾರೆ. ಇದು ಹವಾ ನಿಯಂತ್ರಿತ ಕಾರಿನಲ್ಲಿ, ಹೆಲಿಕ್ಯಾಪ್ಟರ್‌ನಲ್ಲಿ, ಹವಾ ನಿಯಂತ್ರಿತ ಕಚೇರಿ ಮತ್ತು ಸರ್ಕಾರಿ ಮನೆಗಳಲ್ಲಿ ಕುಳಿತು ಮೆರೆಯುವ ನಿಮಗೆ, ನಿಮ್ಮ ಮಂತ್ರಿಗಳಿಗೆ, ದೊಡ್ಡ ದೊಡ್ಡ ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ.

ನಿಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರ ಅತಿಯಾಗಿದೆ ಎಂದು ಸರ್ಕಾರದ ಬಗ್ಗೆ ಜನರಾಡುತ್ತಿರುವ ಮಾತು ಕಂದಾಯ ಮಂತ್ರಿ ಕೃಷ್ಣಬೈರೇಗೌಡರು ಇತ್ತೀಚೆಗೆ ಸರ್ಕಾರಿ ಕಚೇರಿಗೆ ಭೇಟಿ ಕೊಟ್ಟಾಗ ತಮ್ಮ ಮಾತಿನಲ್ಲೇ ನಿಮ್ಮ ಭ್ರಷ್ಟಾಚಾರವನ್ನು ಸಾಬೀತು ಮಾಡಿದ್ದಾರೆ. ಮುಂದುವರೆದು ಮಂತ್ರಿಗಳು, 'ಕಚೇರಿಯಲ್ಲಿ ನಿಮ್ಮ ರೇಟ್ ಬೋರ್ಡ್ ಹಾಕಿ ಬಿಡಿ, ಸುಮ್ಮನೆ ಜನರನ್ನು ಏಕೆ ಅಲೆಸುತ್ತಿದ್ದೀರಾ?' ಎಂದು ಆಕ್ರೋಶದಿಂದ ಹೇಳಿದ್ದಾರೆ. ಸಾಕಲ್ಲವೇ ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಮುಖಕ್ಕೆ ಮಂಗಳಾರತಿ.

ಒಂದು ಬಾರಿ ಯಾವುದಾದರು ಹಳ್ಳಿಗೆ ಹೋಗಿ ಜನರೊಡನೆ ಮಾತನಾಡಿದರೆ ನಿಮಗೆ ವಸ್ತುಸ್ಥಿತಿ ತಿಳಿಯುತ್ತದೆ. ಇದೇ ನಿಮ್ಮ ಗ್ಯಾರಂಟಿಯಿಂದ ನೀವು ಮುಂದೆ ಎಲ್ಲವನ್ನು ಕಳೆದುಕೊಂಡು, ನಿಮ್ಮ ಸಂಪುಟ ಸಮೇತ ಮನೆಗೆ ಹೋಗುವುದು ಗ್ಯಾರಂಟಿ!

ಈ ಬದುಕೆಂಬ ಬವಣೆ...!



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಒಮ್ಮೊಮ್ಮೆ ಬದುಕು ತೀರಾ ವಿಚಿತ್ರ ಎಂದು ಅನ್ನಿಸಿಬಿಡುತ್ತದೆ. ಇದು ಒಂದು ಪಯಣ ಅಷ್ಟೆ, ನಮ್ಮ ನಿಲ್ದಾಣ ಬಂದಾಗ ಇಳಿದು ಹೋಗುತ್ತಿರಬೇಕಷ್ಟೆ ಎಂದು ಹೇಳಿದವರು ಇದ್ದಾರೆ. ನಾವೆಲ್ಲಾ ಸಹ ಪ್ರಯಾಣಿಕರಷ್ಟೆ, ನಾಕು ದಿನದ ಈ ಬದುಕಿನಲ್ಲಿ ಹೊಂದಿಕೊಂಡು ಇದ್ದು ಬಿಡೋಣ ಎಂದು ಹೇಳುವುದು ಬಲು ಸುಲಭವಾದರೂ ವಾಸ್ತವ ಅದೆಷ್ಟು ಭಿನ್ನ. ನಿಜ, ಈ ಬದುಕು ಶಾಶ್ವತ ಅಲ್ಲ ಹೌದು. ಅದು ಗೊತ್ತಿದ್ದರೂ ನಮಗೆ ಅದೆಷ್ಟು ಮೋಹಗಳನ್ನು ಆ ಮೇಲಿನವ ಗಂಟು ಹಾಕಿದ್ದಾನಲ್ಲ ! ಬರೀ ಮೋಹವೇ ಎಲ್ಲ ರಾಗ ದ್ವೇಷಗಳೂ ಈ ನಾಕು ದಿನದ ಬದುಕಿನಲ್ಲಿ ತಳುಕು ಹಾಕಿಕೊಂಡಿದೆಯಲ್ಲ ಎಂಬುದನ್ನು ಗಮನಿಸಿದಾಗ ಅಥವಾ ಅದನ್ನು ಕುರಿತು ಚಿಂತಿಸಿದಾಗ, ಇದನ್ನೆಲ್ಲ ಗಂಟು ಹಾಕಿದ ಆ ಪರಮಾತ್ಮನೇ ಇದರಿಂದ ಬಿಡುಗಡೆ ಹೊಂದುವ ದಾರಿಯನ್ನೂ ತೋರಿಸಬೇಕಷ್ಟೆ ಎಂದು ಅನಿಸದಿರದು.

ಈಗ ನಾನು ನಿಮ್ಮೊಡನೆ ಹಂಚಿಕೊಳ್ಳಲು ಹೊರಟಿದುದು, ನನ್ನ ಮನಸನ್ನು ತೀರಾ ಕಲಕಿದ ಘಟನೆ ಒಂದನ್ನು ಕುರಿತು. ಈ ಬದುಕಿನ ಏಕೈಕ ಸತ್ಯ ಎಂದರೆ ಸಾವು, ನಿಜ. ಹುಟ್ಟಿದ ಮೇಲೆ ಎಂದಾದರೂ ಒಂದು ದಿನ ಸಾಯಲೇಬೇಕು. ಅದೂ ನಿಜ. ಇದು ಎಲ್ಲರಿಗೂ ತಿಳಿದದ್ದೇ ಆದರೂ ಕೆಲವರ ಬದುಕಿನಲ್ಲಿ ಈ ಸಾವು ಅಕಾಲಿಕವಾಗಿ, ಧುತ್ತನೆ ಬಂದುಬಿಡುತ್ತದಲ್ಲ, ಆಗ, ಅದಕ್ಕೆ ಉತ್ತರಿಸುವವರು ಯಾರೂ ಕೆಲವೊಮ್ಮೆ ಒಬ್ಬೊಬ್ಬರ ಬದುಕಿನಲ್ಲಿ ವಿಧಿ ತೀರಾ ಕ್ರೂರವಾಗಿ ನಡೆದುಕೊಳ್ಳುತ್ತದಲ್ಲ, ಅದಕ್ಕೆ ಯಾರು ಹೊಣೆ? ಈ ಸಾವು ನ್ಯಾಯವೇ ಎಂದು ಯಾರಲ್ಲಿ ಅಲವತ್ತುಕೊಳ್ಳಬೇಕು. ಹೋದವರು ಏನಾಗುತ್ತಾರೋ, ಎಲ್ಲಿರುತ್ತಾರೋ, ಯಾವ ರೂಪದಲ್ಲಿರುತ್ತಾರೋ ಯಾರಿಗೂ ತಿಳಿಯದು. ಆದರೆ ಇಲ್ಲಿಯೇ ಉಳಿದುಕೊಂಡವರ ಗತಿಯನ್ನು ನೆನೆದರೆ, ಬದುಕು ಇಷ್ಟೊಂದು ಕ್ರೂರಿ ಏಕೆ ಆಗುತ್ತದೆ ಎಂದು ಅನಿಸಿಬಿಡುತ್ತದೆ.

ಆಕೆ ಹುಟ್ಟಿದ್ದು ಒಂದು ಸಾಧಾರಣ ಕುಟುಂಬದಲ್ಲಿ. ಅಪ್ಪ ಅಮ್ಮನಿಗೆ ಮೊದಲ ಕೂಸು ಅವಳು, ಕೊನೆಯದೂ ಅಹುದು. ಏಕೆಂದರೆ ತಾಯಿಯ ಮುಖ ಅವಳ ಮನದಲ್ಲಿ ಅಚ್ಚೊತ್ತುವ ಮೊದಲೇ ಅವಳನ್ನು ಕಳೆದುಕೊಂಡು ಆಗಿತ್ತು. ತಂದೆಗೆ ಸಂಸಾರದ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಂಡು ಗೊತ್ತೇ ಇರಲಿಲ್ಲ. ಹೀಗಾಗಿ ಅವಳು ಅವರಿವರ ಕರುಣೆಯ ಕೂಸಾಗಿ ಬೆಳೆವ ಅನಿವಾರ್ಯತೆ ತಾನೇತಾನಾಗಿ ಏರ್ಪಟ್ಟಿತ್ತು.

ಯಾರ ಪುಣ್ಯವೋ ಏನೋ ಅವಳ ಬದುಕು ಮೂರಾಬಟ್ಟೆ ಆಗದೆ, ನೆಂಟರಿಷ್ಟರ ಕೃಪಾಶ್ರಯ ಅವಳಿಗೆ ದೊರೆತು, ಬಾಲ್ಯ ಕಳೆಯುತಲಿತ್ತು. ತಾನು ಹೇಗಾದರೂ ಓದಿದರೆ ಮಾತ್ರ ಬದುಕಲು ಸಾಧ್ಯ ಎಂಬ ಒಂದು ಬಲವಾದ ನಂಬಿಕೆ ಅವಳನ್ನು ಕೈಹಿಡಿದು ನಡೆಯಿಸಿತು. ಯೋಚಿಸಿ, ಇತರರ ಆಶ್ರಯದಲ್ಲಿರುವ ಹೆಣ್ಣು ಮಗುವೊಂದು ಇಂತಹ ದಾರಿಯನ್ನು ಆಯ್ಕೆ ಮಾಡಿಕೊಳ್ಳುವುದು ಅದೆಷ್ಟು ಕಷ್ಟ ಎಂಬುದನ್ನು. ಯಾರ ಪುಣ್ಯವೋ ಅಥವಾ ಅವಳ ದೃಢ ಸಂಕಲ್ಪವೋ ಅಂತೂ ಹೇಗೋ ಅವಳು ಓದಿ, ತನ್ನ ಕಾಲಮೇಲೆ ತಾನು ನಿಲ್ಲಬಲ್ಲಂತಹ ಹಂತಕ್ಕೆ ಬಂದು ಮುಟ್ಟಿದಳು. ಅಲ್ಲಿಯವರೆಗಿನ ಬದುಕೇನೂ ಹೂವಿನ ಹಾಸಿಗೆ ಆಗಿರಲಿಲ್ಲ. ಬಂದ ಕಷ್ಟ ನಿಷ್ಠುರಗಳನ್ನು, ಅವಮಾನಗಳನ್ನು, ಉಪವಾಸ ವನವಾಸಗಳನ್ನು ಒಪ್ಪಿಕೊಳ್ಳುತ್ತಲೇ ತನ್ನ ಮನೋನಿರ್ಧಾರವನ್ನು ಮಾತ್ರ ಅಲುಗಾಡದಂತೆ ತನ್ನಲ್ಲೇ ಕಾಪಿಟ್ಟುಕೊಂಡೇ ಬೆಳೆದ ಹೆಣ್ಣು ಮಗಳಾಕೆ. ಸ್ವತಂತ್ರ ಬದುಕು ತನ್ನದಾದಾಗ ಆ ಸಂತೋಷವನ್ನು ಹಂಚಿಕೊಳ್ಳಲು ತನ್ನೊಡನೆ ತನ್ನವರು ಎಂಬುವವರು ಯಾರೂ ಇಲ್ಲವಲ್ಲ ಎಂದು ಅವಳ ಒಳಮನ ಮೌನವಾಗಿ ರೋದಿಸಿತ್ತು.



> “ ಹುಟ್ಟಿದ ಮೇಲೆ ಎಂದಾದರೂ ಒಂದು ದಿನ ಸಾಯಲೇಬೇಕು. ಅದೂ ನಿಜ. ಇದು ಎಲ್ಲರಿಗೂ ತಿಳಿದದ್ದೇ ಆದರೂ ಕೆಲವರ ಬದುಕಿನಲ್ಲಿ ಈ ಸಾವು ಅಕಾಲಿಕವಾಗಿ, ಧುತ್ತನೆ ಬಂದುಬಿಡುತ್ತದಲ್ಲ, ಆಗ, ಅದಕ್ಕೆ ಉತ್ತರಿಸುವವರು ಯಾರೂ ಕೆಲವೊಮ್ಮೆ ಒಬ್ಬೊಬ್ಬರ ಬದುಕಿನಲ್ಲಿ ವಿಧಿ ತೀರಾ ಕ್ರೂರವಾಗಿ ನಡೆದುಕೊಳ್ಳುತ್ತದಲ್ಲ, ಅದಕ್ಕೆ ಯಾರು ಹೊಣೆ? ಈ ಸಾವು ನ್ಯಾಯವೇ ಎಂದು ಯಾರಲ್ಲಿ ಅಲವತ್ತುಕೊಳ್ಳಬೇಕು. ಹೋದವರು ಏನಾಗುತ್ತಾರೋ, ಎಲ್ಲಿರುತ್ತಾರೋ, ಯಾವ ರೂಪದಲ್ಲಿರುತ್ತಾರೋ ಯಾರಿಗೂ ತಿಳಿಯದು. ಆದರೆ ಇಲ್ಲಿಯೇ ಉಳಿದುಕೊಂಡವರ ಗತಿಯನ್ನು ನೆನೆದರೆ, ಬದುಕು ಇಷ್ಟೊಂದು ಕ್ರೂರಿ ಏಕೆ ಆಗುತ್ತದೆ ಎಂದು ಅನಿಸಿಬಿಡುತ್ತದೆ.

ಅವಳು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಕೆಲವೇ ಮಾತುಗಳ, ಗಂಭೀರ ವ್ಯಕ್ತಿಯೊಬ್ಬ ಇವಳಲ್ಲಿ ಆಸಕ್ತಿ ತೋರಿದಾಗ, ಅವಳಿಗೂ ತನ್ನದು ಎಂಬ ಒಂದು ಜೀವ, ತನ್ನಂಥವರನ್ನೂ ಪ್ರೀತಿಸಬಲ್ಲಂತಹ ಒಬ್ಬ ವ್ಯಕ್ತಿ ಸಿಕ್ಕಲ್ಲಿ ಬಾಳು ಎಷ್ಟು ಸುಂದರ ಎಂದು ಅನಿಸಿದ್ದರೆ, ಅದರಲ್ಲಿ ಯಾವ ತಪ್ಪೂ ಇರಲಿಲ್ಲ. ಅವಳ ಬದುಕಿನಲ್ಲಿ ಅಂತಹ ವ್ಯಕ್ತಿಯ ಪ್ರವೇಶ ಆಗಿತ್ತು. ಅದುವರೆಗೆ ಸುಖ, ಸಂತೋಷ ಅಂದರೆ ಏನು ಎಂಬುದನ್ನೇ ಅರಿಯದಿದ್ದ ಅವಳು ಮೊದಲ ಬಾರಿಗೆ ಅದನ್ನು ಅನುಭವಿಸತೊಡಗಿದ್ದಳು. ಗಂಡನನ್ನು ತನ್ನ ಸರ್ವಸ್ವ ಎಂದೇ ಬಗೆದಿದ್ದ ಅವಳ ಮೊಗದಲ್ಲಿ ಸಂತೋಷ ಎಂಬುದು ಉಕ್ಕಿ ಹರಿಯಲಾರಂಭಿಸಿತ್ತು ಮದುವೆ ಆದ ಎರಡು ವರ್ಷದಲ್ಲಿ ಅವಳಿಗೆ ಒಂದು ಮಗುವೂ ಆದಾಗ ಅದು ಮತ್ತೂ ಹೆಚ್ಚಾಗಿತ್ತು. ಅವಳ ಕಾಲು ನೆಲದ ಮೇಲೆ ಇರಲೇ ಇಲ್ಲವೇನೋ ಎಂಬಂತೆ ಅವಳು ಸುಖ ಸಾಗರದಲ್ಲಿ ತೇಲತೊಡಗಿದ್ದಳು. ಒಲವಿನ ಗಂಡ, ಅಕ್ಕರೆಯ ಮಗು, ನನಗೆ ಇನ್ನೇನೂ ಬೇಕಿಲ್ಲ ಎಂದು ಅಂದುಕೊಂಡು ಕಾಣದ ಆ ದೇವನಿಗೆ ನಿತ್ಯವೂ ವಂದಿಸುತ್ತಿದ್ದಳು.

ಆ ಮಗು ಎಲ್ಲರಂತಿಲ್ಲ ಎಂಬುದು ಅವರಿಬ್ಬರ ಗಮನಕ್ಕೆ ಬಂದಾಗ ಕೂಡಲೇ ವೈದ್ಯರಲ್ಲಿ ಧಾವಿಸಿದರು. ಅದರ ಬೆಳವಣಿಗೆ ಇತರ ಮಗುವಿನಂತೆ ಇಲ್ಲ ಎಂಬುದನ್ನು ಅರಿತ ವೈದ್ಯರು ಅವರು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ವಿಷಯಗಳನ್ನು ಅವರಿಗೆ ಮನದಟ್ಟು ಮಾಡಿಸಿದರು. ಮಗು ಕಲಿಕೆಯಲ್ಲಿ ಇತರ ಮಕ್ಕಳಂತೆ ಬೇಗ ಮುಂದೆ ಹೋಗಲಾರ. ಅವನ ಆಟ ಪಾಠಗಳು ಮತ್ತು ಇತರ ಕೆಲಸಗಳೂ ಸಹ ನಿಧಾನ ಗತಿಯಲ್ಲಿಯೇ ಆಗುವುದು ಎಂಬ ಕಟು ಸತ್ಯವನ್ನು ಅವಳು ಜೀರ್ಣಿಸಿಕೊಂಡು, ಅದಕ್ಕಾಗಿ ಮಾನಸಿಕವಾಗಿ ಸಿದ್ಧಗೊಂಡಳು.

ಅಂತಹ ಮಕ್ಕಳಿಗಾಗಿಯೇ ಇರುವ ವಿಶೇಷ ಶಾಲೆಯಲ್ಲಿ ಅದರೊಡನೆ ತಾನೂ ಪಾಲ್ಗೊಂಡು ಅದನ್ನು ತಿದ್ದುವುದರಲ್ಲೇ ಸಾರ್ಥಕ್ಯವನ್ನು ಅನುಭವಿಸುತ್ತಿದ್ದಳು. ಮಗುವಿಗೆ ನಾಲ್ಕೈದು ವರ್ಷಗಳಾದಾಗ ಒಂದು ದಿನ ಎಂದಿನಂತೆ ಅವಳ ಗಂಡ ಕೆಲಸಕ್ಕೆ ಹೋದ. ಸಂಜೆ ಮನೆಗೆ ಬರುವ ಹೊತ್ತಿನಲ್ಲಿ ಮಳೆ ಆರಂಭವಾಗಿತ್ತು. ಹೆಂಡತಿಗೆ ಫೋನಾಯಿಸಿದ. ಮಳೆ ಇದ್ದರೆ ಹುಷಾರಾಗಿ ಬನ್ನಿ? ಎಂದಳು ಅವಳು. ಸರಿ. ಬರುತ್ತೇನೆ ಯೋಚಿಸಬೇಡ ಎಂದವ ಗಂಟೆ ಎಂಟಾದರೂ ಇನ್ನೂ ಬಂದಿರಲಿಲ್ಲ. ಅಡುಗೆ ಮುಗಿಸಿ, ಮಗುವನ್ನು ಮಲಗಿಸಿದವಳಿಗೆ ಕುಳಿತಲ್ಲೇ ಜೊಂಪು ಹತ್ತಿದಂತಾಗಿತ್ತು.

ಮೊಬೈಲ್ ರಿಂಗಣಿಸಿದಾಗ ಗಡಬಡಿಸಿ ಎಚ್ಚರವಾದವಳಿಗೆ ಅತ್ತಕಡೆಯಿಂದ ಯಾವುದೋ ಅಪರಿಚಿತ ಧ್ವನಿ, ಅವರು ನಿಮಗೆ ಏನಾಗಬೇಕು ಎಂದಾಗ ಅರ್ಥವಾಗದವಳಂತೆ ಅವರು ನನ್ನ ಗಂಡ. ಏಕೆ ಎಂದಿದ್ದಳು. ನೀವು ಕೂಡಲೇ ಇಂತಹ ಆಸ್ಪತ್ರೆಗೆ ಬನ್ನಿ, ಅವರಿಗೆ ಅಪಘಾತ ಆಗಿದೆ ಎಂದು ಆ ವ್ಯಕ್ತಿ ಫೋನ್ ಇಟ್ಟರು. ಒಂದು ಕ್ಷಣ ಏನು ಎತ್ತ ಎಂಬುದು ಅರ್ಥವಾಗದೆ ಕುಳಿತವಳು ಮತ್ತೆ ಎಚ್ಚೆತ್ತುಕೊಂಡು ಮಗುವನ್ನೂ ಕರೆದುಕೊಂಡು ಆಸ್ಪತ್ರೆಗೆ ದೌಡಾಯಿಸಿದಳು. ಅಲ್ಲಿ ತಲೆ ಒಡೆದು, ರಕ್ತಸಿಕ್ತವಾಗಿ ಮೆದುಳು ಹೊರಬಂದು ವಿಕಾರವಾಗಿ ಕಾಣುತ್ತಿದ್ದ ವ್ಯಕ್ತಿ ತನ್ನ ಗಂಡನೇ ಎಂಬುದನ್ನು ನಂಬಲಾಗದವಳಂತೆ ನಿಂತುಬಿಟ್ಟಳು. ಇದು ಹೇಗೆ ಸಾಧ್ಯ. ನಾನು ಸ್ವಲ್ಪ ಹೊತ್ತಿನಲ್ಲಿ ಮನೆಯಲ್ಲಿ ಇರುತ್ತೇನೆ ಎಂದು ಹೇಳಿದವ ಇಲ್ಲಿ ಹೀಗೆ ಈ ಅವಸ್ಥೆಯಲ್ಲಿ ಛೆ, ಇದು ಸತ್ಯ ಅಲ್ಲ. ನಾನೇನೋ ಕನಸು ಕಾಣುತ್ತಿರಬೇಕು ದೇವರೇ, ನನಗೆ ನೀನು ಇಂತಹ ಅನ್ಯಾಯ ಮಾಡಲು ಸಾಧ್ಯವಿಲ್ಲ ಅಲ್ಲವಾ, ಅವಳ ಮನ ಚೀರುತ್ತಿತ್ತು. ಕಟು ವಾಸ್ತವ ಅವಳ ಮುಂದೆ ಧುತ್ತನೆ ನಿಂತಿತ್ತು. ಮುಂದಿನ ಬದುಕು ಕೇವಲ ಒಂದು ಪ್ರಶ್ನೆಯಾಗಿ ತಕತಕನೆ ಕುಣಿಯುತ್ತಿರುವಂತೆ ಭಾಸವಾಯಿತು.

ಬದುಕು ಯಾರಿಗೂ ಕಾಯುವುದಿಲ್ಲವಲ್ಲ. ಮಗುವಿನ ಸಲುವಾಗಿಯಾದರೂ ಅವಳು ಜವಾಬ್ದಾರಿಯನ್ನು ಕೈಗೆತ್ತಿಕೊಳ್ಳಲೇಬೇಕಾಗಿತ್ತು. ವಿಧಿಯನ್ನು ಹಳಿಯುತ್ತಾ ಕೂತರೆ, ಹೊಟ್ಟೆ ಕೇಳಬೇಕಲ್ಲ ಮಗುವಿನ ಭವಿಷ್ಯ ಒಂದೇ ಅವಳ ಕಣ್ಣ ಮುಂದಿನ ಗುರಿ ಆಯಿತು. ಮಿಕ್ಕೆಲ್ಲದಕ್ಕೂ ಅವಳು ಕುರುಡಿ, ಕಿವುಡಿ ಆದಳು. ಮಗುವಿಗೆ ತಂದೆಯೂ ಆಗಿ, ಗಾಣದ ಎತ್ತಾದಳು. ಬದುಕೇ ನೀನೇಕೆ ಇಷ್ಟು ಕ್ರೂರಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 20 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 94 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4

ಮೈಸೂರಲ್ಲಿ ಸರ್ಕಾರದ ಸಾಧನೆ ಅನಾವರಣ

2,578 ಕೋಟಿ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ

● ಇದು ಶಕ್ತಿ ಪ್ರದರ್ಶನವಲ್ಲವೆಂದು ಸಿದ್ದರಾಮಯ್ಯ ಪುನರುಚ್ಚಾರ ● ಕಿಕ್ಕಿರಿದು ಸೇರಿದ್ದ ಜನಸ್ತೋಮ ● ಕುಡಿಯುವ ನೀರು, ತಣ್ಣನೆ ಮಜ್ಜಿಗೆ ವಿತರಣೆ ● ವೇದಿಕೆಗೆ ಹೈಟೆಕ್ ಸ್ಪರ್ಶ ● ರ್‍ಯಾಂಪ್‌ನಲ್ಲಿ ಹೆಜ್ಜೆ ಹಾಕಿದ ಖರ್ಗೆ, ಸಿದ್ದು, ಡಿಕೆಶಿ





ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಸರ್ಕಾರದ ಸಾಧನಾ ಸಮಾವೇಶವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಸೇರಿದಂತೆ ಹಲವರನ್ನು (ಎಡಚಿತ್ರ) ಕಾಣಬಹುದು. ಸಮಾವೇಶದಲ್ಲಿ ಭಾಗವಹಿಸಿದ್ದ ಜನಸ್ತೋಮವನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.19(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಿನಲ್ಲಿ ಶನಿವಾರ ಸರ್ಕಾರದ ಸಾಧನಾ ಸಮಾವೇಶ ನಡೆಯಿತು. ಮೈಸೂರು ನಗರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುತ್ತಿರುವ 2,578 ಕೋಟಿ ರೂಪಾಯಿಗಳ ನಾನಾ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಲಾಯಿತು.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸರ್ಕಾರದ ಸಾಧನಾ ಸಮಾವೇಶವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಹಲವು ಸಚಿವರು, ಶಾಸಕರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ವೇದಿಕೆಯಿಂದ ಸುಮಾರು 200 ಅಡಿವರೆಗೆ ಹಾಕಿದ್ದ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ನೆರೆದ ಜನಸ್ತೋಮದತ್ತ ಕೈ ಬೀಸಿದರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳ ಶಿಳ್ಳೆ, ಚಪ್ಪಾಳೆಗಳು ಮುಗಿಲು ಮುಟ್ಟಿತು. ಮೈಸೂರು ನಗರ ಮಾತ್ರವಲ್ಲದೆ ಜಿಲ್ಲೆಯ ಹಲವು ತಾಲೂಕುಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆ ಜಾರಿಗೊಳಿಸಲಾಗುತ್ತಿದ್ದು, ಇದರ ಫಲಾನುಭವಿಗಳಾದ ಗ್ರಾಮೀಣ ಪ್ರದೇಶದ ಸಾವಿರಾರು ಜನರು ಕಿಕ್ಕಿರಿದು ಜಮಾಯಿಸಿದ್ದರು. ಕೆಎಸ್‌ಆರ್‌ಟಿಸಿ ಬಸ್, ಖಾಸಗಿ ಬಸ್, ಟೆಂಪೋ ಸೇರಿದಂತೆ ಹಲವು ವಾಹನಗಳ ಮೂಲಕ ಜನ ಸಮಾವೇಶಕ್ಕೆ ಆಗಮಿಸಿದ್ದರು. ಹೀಗೆ ಬಂದಿದ್ದ ಜನರಿಗೆ ಬಾಟಲ್ ನೀರು ಹಾಗೂ ನಂದಿನಿ ಮಜ್ಜಿಗೆ ವಿತರಿಸಲಾಯಿತು. ಮಳೆಗಾಲದ ಕಾರಣ ಸಮಾವೇಶದಲ್ಲಿ ವಾಟರ್ ಪ್ರೂಫ್ ▶ 10ನೇ ಪುಟಕ್ಕೆ

ನನ್ನ ಶಕ್ತಿ ಪ್ರದರ್ಶನವಲ್ಲ; ಅಭಿವೃದ್ಧಿ ಶಕ್ತಿ ಪ್ರದರ್ಶನ!

ಮೈಸೂರು, ಜು.19(ಬಿಎಲ್‌ಯು)–ಗ್ಯಾರಂಟಿ ಯೋಜನೆಯಿಂದ ರಾಜ್ಯ ದಿವಾಳಿಯಾಗಿದೆ ಎಂಬ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಟೀಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ನೀಡುವುದರ ಜೊತೆಗೆ ರಾಜ್ಯ ಯಾವ ರೀತಿ ಅಭಿವೃದ್ಧಿ



ಯಾಗಿದೆ ಎಂದು ಸಾಬೀತು ಮಾಡಲು ನಾವು ಸಿದ್ಧರಿದ್ದು, ಬಹಿರಂಗ ಚರ್ಚೆಗೆ ಬನ್ನಿ ಎಂದು ಸವಾಲು ಹಾಕಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸರ್ಕಾರದ ಸಾಧನಾ ಸಮಾವೇಶದಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷಗಳನ್ನು ಈ ವೇಳೆ ತೀವ್ರ ತರಾಟೆಗೆ ತೆಗೆದುಕೊಂಡರು. ಇದು ಕಾಂಗ್ರೆಸ್ ಸಮಾವೇಶವಲ್ಲ, ಸರ್ಕಾರದ ಸಾಧನಾ ಸಮಾವೇಶವೆಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರನ್ನು ಆಹ್ವಾನಿಸಿ ಶಿಷ್ಟಾಚಾರ ಪಾಲಿಸಿದ್ದರೂ ವಿರೋಧ ಪಕ್ಷಗಳ ನಾಯಕರು ಸಮಾವೇಶವನ್ನು ಬಹಿಷ್ಕರಿಸಿದ್ದಾರೆ ಎಂದು ಕಿಡಿಕಾರಿದರು. ಗ್ಯಾರಂಟಿ ಯೋಜನೆಯಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ದಿವಾಳಿಯಾಗಿದೆ. ಖಜಾನೆ ಖಾಲಿಯಾಗಿದೆ ಎಂದು ಸುಳ್ಳು ಆರೋಪ ಮಾಡುತ್ತಿರುವ ಬಿಜೆಪಿ ಮತ್ತು ಜೆಡಿಎಸ್‌ನವರಿಗೆ ಈ ಸಮಾವೇಶ ತಕ್ಕ ಉತ್ತರವಾಗಿದೆ. ▶ 10ನೇ ಪುಟಕ್ಕೆ

ಜನರ ಋಣ ತೀರಿಸುವ ಕೆಲಸ ನಾವು ಮಾಡಿದ್ದೇವೆ

ಮೈಸೂರು,ಜು.19(ಎಂಟಿವೈ)–ಬಡವರ ಹಿತ ಕಾಪಾಡಿ, ರೈತರನ್ನು ಉಳಿಸಿ, ಮಹಿಳೆಯರಿಗೆ ಶಕ್ತಿ ತುಂಬಿರುವ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ಋಣ ತೀರಿಸುವ ಕೆಲಸ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಸಾಧನಾ ಸಮಾವೇಶ'ದಲ್ಲಿ ಮಾತನಾಡಿದ ಅವರು, ಕಳೆದ




ವಿಧಾನಸಭಾ ಚುನಾವಣೆಯಲ್ಲಿ ನಾನು 'ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ, ದಾನ–ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ' ಎಂದು ಹೇಳಿದ್ದೆ. ಇದೀಗ ದಾನ, ಧರ್ಮ ಮಾಡುವ ಕೈ ಅಧಿಕಾರದಲ್ಲಿರುವುದರಿಂದ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಐದು ಬೆರಳು ಸೇರಿ ಕೈ ಮುಷ್ಟಿಯಾಯಿತು. ಐದು ಗ್ಯಾರಂಟಿ ಸೇರಿ 'ಕೈ' ಗಟ್ಟಿಯಾಯಿತು. ಇದರಿಂದ ಜನರಿಗೆ ನೀಡಿದ್ದ ಭರವಸೆ ಈಡೇರಿಸಲು, ನುಡಿದಂತೆ ನಡೆಯಲು ಪಂಚ ಗ್ಯಾರಂಟಿ ಯೋಜನೆ ಜಾರಿಗೊಳಿಸಿ ರಾಜ್ಯದ ಜನರ ಋಣ ತೀರಿಸುವ ಕೆಲಸ ಮಾಡುತ್ತಿದ್ದೇವೆ ಎಂದರು. ಗ್ಯಾರಂಟಿ ಯೋಜನೆಯನ್ನು ಟೀಕಿಸುತ್ತಿದ್ದ ಬಿಜೆಪಿ, ಇದೀಗ ಬೇರೆ ಬೇರೆ ರಾಜ್ಯಗಳಲ್ಲಿ ನಮ್ಮ ಯೋಜನೆಯನ್ನು ಅನುಸರಿಸುತ್ತಿದೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಮಾದರಿ ಯೋಜನೆಯಾಗಿದೆ. ಗ್ಯಾರಂಟಿ ▶ 10ನೇ ಪುಟಕ್ಕೆ

ಸಂವಿಧಾನ ಬದಲಾವಣೆ ಮಾಡಲು ಬಿಟ್ಟರೆ ನೀವು ಸತ್ತಂತೆ

ಮೈಸೂರು,ಜು.19(ಬಿಎಲ್‌ಯು)–ಕೇಂದ್ರದ ಬಿಜೆಪಿ ಸರ್ಕಾರ ಸಂವಿಧಾನ ಬದಲಾವಣೆ ಮಾಡಲು ಬಿಟ್ಟರೆ ನೀವು ಸತ್ತಂತೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಸಿದ್ದಾರೆ.


ಸಾಧನಾ ಸಮಾವೇಶದಲ್ಲಿ ಮಾತನಾಡಿದ ಅವರು, ಸಂವಿಧಾನ ಬದಲಾವಣೆ ಮಾಡಲು ಈ ದೇಶದ ಜನರು ಬಿಡಲ್ಲ.



ಒಂದು ವೇಳೆ ಬಿಟ್ಟರೆ ನೀವು ಸತ್ತಂತೆ. ಈ ಹಿನ್ನೆಲೆಯಲ್ಲಿ ಡಾ.ಅಂಬೇಡ್ಕರ್ ಬರೆದಿರುವ ಸಂವಿಧಾನ ಬದಲಾವಣೆ ಮಾಡಲು ಬಿಡುವುದಿಲ್ಲ ಎಂದು ದೇಶಾದ್ಯಂತ ಘೋಷವಾಕ್ಯ ಮೊಳಗಿಸಬೇಕು ಎಂದರು. ಸಂವಿಧಾನವನ್ನು ಅಂಬೇಡ್ಕರ್ ಒಬ್ಬರೇ ಬರೆದಿದ್ದಾರೆಯೇ ಎಂದು ಕೆಲವರು ಗೇಲಿ ಮಾಡುತ್ತಾರೆ. ಅವರು ಸಂವಿಧಾನ ಬರೆದಿಲ್ಲ ಅಂದರೆ ನಿಮ್ಮ ತಾತ ಅಥವಾ ಆರ್‌ಎಸ್‌ಎಸ್‌ನವರು ಬರೆದಿದ್ದಾರೆಯೇ ಎಂದು ಮಲ್ಲಿಕಾರ್ಜುನ ಖರ್ಗೆ ಕೋಪದಿಂದ ಪ್ರಶ್ನಿಸಿದರು. ಭಾರತದ ಸಂವಿಧಾನವನ್ನು ಅಂಬೇಡ್ಕರ್ ಅವರೇ ಬರೆದಿದ್ದಾರೆ. ದಲಿತರು, ಬಡವರು, ಹಿಂದುಳಿದವರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಿರುವ ಸಂವಿಧಾನದಿಂದಲೇ ಮೋದಿ ಅವರು ಪ್ರಧಾನಮಂತ್ರಿಯಾಗಿದ್ದಾರೆ ಎಂದರು. ಬೆಳಿಗ್ಗೆ ಎದ್ದ ಕೂಡಲೇ ಸಂವಿಧಾನವನ್ನು ಯಾವ ರೀತಿ ಬದಲಾವಣೆ ಮಾಡುವುದು ▶ 10ನೇ ಪುಟಕ್ಕೆ

ಕೊಲೆ ಕೇಸಲ್ಲಿ ಭೈರತಿ ಬಸವರಾಜ್ ಪೊಲೀಸರ ಮುಂದೆ ಹಾಜರು

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಎ5 ಆರೋಪಿ ಆಗಿರುವ ಕೆ.ಆರ್.ಪುರಂ ಬಿಜೆಪಿ ಶಾಸಕ ಬೈರತಿ ಬಸವರಾಜ್ ಭಾರತಿನಗರ ಪೊಲೀಸ್ ಠಾಣೆಗೆ ಹಾಜರಾಗಿ, ಸತತ ಮೂರೂವರೆ



ಗಂಟೆಗಳ ಕಾಲ ವಿಚಾರಣೆ ಎದುರಿಸಿದರು. ಬಂಧನ ಭೀತಿಯಿಂದ' ಅವರು ಮಧ್ಯಾಹ್ನದವರೆಗೂ ವಿಚಾರಣೆಗೆ ಬಂದಿರಲಿಲ್ಲ. ಹೆಚ್ಚಿನ ಪೊಲೀಸ್ ಭದ್ರತೆಯೊಂದಿಗೆ ತನಿಖಾಧಿಕಾರಿ ಕಾದು ಕುಳಿತಿದ್ದರು. ಮಧ್ಯಾಹ್ನ 2.30ರ ಸುಮಾರಿಗೆ ಬಂದ ಭೈರತಿ ಬಸವರಾಜ್, ಸುಮಾರು ಮೂರೂವರೆ ಗಂಟೆಗಳ ಕಾಲ ತನಿಖಾಧಿಕಾರಿ ಗ್ರಿಲ್ ಮಾಡಿದರು. 100ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ತಿಳಿದುಬಂದಿದೆ.

ಭಾರತಿನಗರ ಠಾಣೆಯಿಂದ ಹೊರಬರುತ್ತಿದ್ದಂತೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೊಲೆ ಪ್ರಕರಣದಲ್ಲಿ ವಿಚಾರಣೆಗೆ ಕರೆದಿದ್ದರು. ಪೊಲೀಸರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೀನಿ. ಇದರಲ್ಲಿ ನನ್ನ ಪಾತ್ರ ಇಲ್ಲ ಎಂದು ಹೇಳಿದ್ದೇನೆ. ನನಗೂ ಕೊಲೆಗೂ ಸಂಬಂಧವಿಲ್ಲ. ಯಾವ ಜಗ್ಗನೂ ನನಗೆ ಗೊತ್ತಿಲ್ಲ. ಬುಧವಾರ ಮತ್ತೆ ವಿಚಾರಣೆಗೆ ಬರಬೇಕೆಂದು ಹೇಳಿದ್ದಾರೆ. ಬರುತ್ತೇನೆ. ತನಿಖೆಗೆ ಎಲ್ಲ ರೀತಿಯಿಂದಲೂ ಸಹಕಾರ ಕೊಡುತ್ತೇನೆ ಎಂದರು.

ಯುಜಿ ನೀಟ್: ಆಪ್ಷನ್ ಎಂಟ್ರಿ ಆರಂಭ, ಜು.22 ಕೊನೆ ದಿನ

ಬೆಂಗಳೂರು: ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಇಚ್ಛೆ/ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದ್ದು, ಜು.22ರಂದು ಸಂಜೆ 6 ಗಂಟೆವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಸೀಟ್ ಮ್ಯಾಟ್ರಿಕ್ಸ್ ಬಂದ ನಂತರ ಅದನ್ನು ಪರಿಶೀಲಿಸಿ, ಅಪ್ಲೋಡ್ ಮಾಡಿದ್ದು ಎಚ್ಚರಿಕೆಯಿಂದ ಆಪ್ಷನ್ಸ್ ದಾಖಲಿಸಲು ಅಭ್ಯರ್ಥಿಗಳಿಗೆ ಸಲಹೆ ನೀಡಿದ್ದಾರೆ. ಪ್ರಸಕ್ತ ಸಾಲಿನ ಶುಲ್ಕದ ವಿವರಗಳು ಇನ್ನೂ ಪ್ರಾಧಿಕಾರಕ್ಕೆ ಬಂದಿರದ ಕಾರಣ 2024–25ನೇ ಸಾಲಿನ ಶುಲ್ಕದ ವಿವರಗಳನ್ನೇ ಸದ್ಯಕ್ಕೆ ವೆಬ್ ಸೈಟ್‌ನಲ್ಲಿ ನೀಡಲಾಗಿದೆ. ಸರ್ಕಾರದಿಂದ ಪರಿಷ್ಕೃತ ಶುಲ್ಕ ಮಾಹಿತಿ ಬಂದ ನಂತರ ಅದನ್ನು ಅಪ್ಡೇಟ್ ಮಾಡಲಾಗುವುದು. ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ, ಯೋಗ ಮತ್ತು ನ್ಯಾಚುರೋಪತಿ ಕೋರ್ಸ್‌ಗಳ ಸೀಟ್ ಮ್ಯಾಟ್ರಿಕ್ಸ್ ಇನ್ನೂ ಸರ್ಕಾರದಿಂದ ಬಂದಿಲ್ಲ. ಬಂದ ನಂತರ ಆ ಕೋರ್ಸ್‌ಗಳಿಗೆ ಆಪ್ಷನ್ ಎಂಟ್ರಿಗೆ ಬಿಡಲಾಗುವುದು ಎಂದು ಹೇಳಿದರು.

ವೆಲ್‌ಕಂ ಮಾಡೋದು ಇಲ್ಲಿರೋರಿಗೆ... ಮನೆಯಲ್ಲಿ ಕೂತಿರೋರಿಗೆಲ್ಲ ವೆಲ್‌ಕಂ ಮಾಡೋಕ್ಕಾಗಲ್ಲ...!?

ಮೈಸೂರು,ಜು.19(ಎಂಕೆ)–ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸರ್ಕಾರದ ಸಾಧನಾ ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಚಾರದಲ್ಲಿ ಆಡಿದ ಮಾತು ಈ ಇಬ್ಬರ ನಡುವಿನ ಸಂಬಂಧ ಸರಿ ಇಲ್ವಾ ಎಂದು ನೆರೆದ ಜನರಲ್ಲಿ ಅನುಮಾನ ಮೂಡಿಸುವಂತಿತ್ತು. ಸಮಾವೇಶದ ಆರಂಭದಲ್ಲೇ ಭಾಷಣ ಮಾಡಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ಸಂಸದ ಸುನೀಲ್ ಬೋಸ್ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ಮಾತನಾಡಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಷಣ ಶುರು ಮಾಡುತ್ತಿದ್ದಂತೆ ವೇದಿಕೆಯಿಂದ ಕೆಳಗಿಳಿದು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಇತ್ತ ಸಿಎಂ ಸಿದ್ದರಾಮಯ್ಯ, ತಮ್ಮ ಭಾಷಣ ಆರಂಭಿಸಿದರು. ಅವರು, ಡಿಕೆಶಿ ಹೊರತುಪಡಿಸಿ ಎಲ್ಲಾ ನಾಯಕರ ಹೆಸರನ್ನು ಪ್ರಸ್ತಾಪಿಸಿದರು. ಈ ವೇಳೆ ವೇದಿಕೆಯಲ್ಲಿದ್ದ ತಾಂಡಾಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವನಾಯಕ, ಸಿಎಂ ಬಳಿ ಬಂದು ಡಿ.ಕೆ.ಶಿವಕುಮಾರ್ ಅವರ ಹೆಸರು ಹೇಳಲಿಲ್ಲ ಎಂದು ನೆನಪಿಸಿದರು. ಇದಕ್ಕೆ ಗರಂ ಆದ ಸಿಎಂ ಸಿದ್ದರಾಮಯ್ಯ 'ಎಲ್ಲಿ ಅವರು ಇಲ್ವಲ್ರಿ... ಅವರು ಹೊರಟೋದ್ರು.. ಕೂತ್ಕೊಳ್ಳಿ... ಲಾಯರ್ ನೀವು... ಡಿ.ಕೆ.ಶಿವಕುಮಾರ್ ಹೊರಟೋದ್ರು ಬೆಂಗಳೂರಿಗೆ... ಯಾವಾಗಲೂ ಇರೋರ ಹೆಸರೇಳಬೇಕೇ ಹೊರತು.. ಹೊರಟೋದವರ ಹೆಸರು ಹೇಳೋಕೆ ಆಗಲ್ಲ... ವೆಲ್‌ಕಂ ಮಾಡೋದು ಇಲ್ಲಿ ಇರೋರಿಗೆ... ಮನೆಯಲ್ಲಿ ಕೂತಿರೋರಿಗೆಲ್ಲ ವೆಲ್‌ಕಂ ಮಾಡೋಕೆ ಆಗಲ್ಲ... ನೀವು ವಕೀಲರು, ಅರ್ಥಮಾಡಿಕೊಳ್ಳಬೇಕು ಎಂದು ಗದರಿಸಿದರು. ಅಷ್ಟಕ್ಕೆ ಸುಮ್ಮನಾಗದೇ ಮಾತು ಮುಂದುವರೆಸಿದ ಮುಖ್ಯಮಂತ್ರಿಗಳು, ಅವರು... ಡಿ.ಕೆ.ಶಿವಕುಮಾರ್ ಹೆಸರೇಳಿ ಅಂತ ಹೇಳ್ತಾ ಇದ್ದಾರೆ... ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಗಳು ಅವರು ಬೆಂಗಳೂರಿಗೆ ಹೋಗ್ತೀನಿ ಅಂತ ಹೋದ್ರು... ಬೇರೆ ಕೆಲಸ ಇದೆ ಹೋಗ್ತೀನಿ ಅಂತ ಹೋದ್ರು.. ಆದ್ದರಿಂದ ಅವರ ಹೆಸರನ್ನ ಪ್ರಸ್ತಾಪ ಮಾಡಲಿಲ್ಲ ಎಂದು ರಾಗ ಎಳೆದದ್ದು ನೆರೆದಿದ್ದವರಲ್ಲಿ ನಾನಾ ಚರ್ಚೆ ಹುಟ್ಟು ಹಾಕಿತಲ್ಲದೆ, ಸಿಎಂ ಮತ್ತು ಡಿಸಿಎಂ ಸಂಬಂಧ ಸರಿ ಇಲ್ವಾ ಎಂಬ ಅನುಮಾನಕ್ಕೂ ನಾಂದಿಯಾಯ್ತು!

7 ವರ್ಷಗಳ ಬಳಿಕ ಮತ್ತೆ ಕನ್ನಡ ಧ್ವಜಕ್ಕೆ ಹಕ್ಕು ಮಂಡಿಸಿದ ಸರ್ಕಾರ

ಕೇಂದ್ರಕ್ಕೆ ಸಚಿವ ಶಿವರಾಜ್ ತಂಗಡಗಿ ಪತ್ರ

ಬೆಂಗಳೂರು,ಜು.19–ಏಳು ವರ್ಷಗಳ ಬಳಿಕ ರಾಜ್ಯ ಸರ್ಕಾರ ಕನ್ನಡ ಧ್ವಜಕ್ಕೆ ಮತ್ತೆ ಹಕ್ಕು ಮಂಡಿಸಿದ್ದು, ಹಳದಿ–ಕೆಂಪು ಬಾವುಟಕ್ಕೆ ಅಧಿಕೃತ ಮಾನ್ಯತೆ ಕೊಡುವಂತೆ ಕನ್ನಡ ಮತ್ತು ಸಂಸ್ಕೃತಿ



ಸಚಿವ ಶಿವರಾಜ್ ತಂಗಡಗಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಈ ವಿಚಾರವಾಗಿ ಚಿತ್ರದುರ್ಗದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಬರೀ ಹೆಸರಿಗೆ ಮಾತ್ರ ಇದೆ. ಈಗಿರುವ ಕನ್ನಡದ ಬಾವುಟ ಅಧಿಕೃತ ಅಲ್ಲ. ಅದೇ ಬಾವುಟ ಅಧಿಕೃತಗೊಳಿಸಿ ಎಂದು ಕೇಂದ್ರಕ್ಕೆ ಮನವಿ ಮಾಡಿದ್ದೇವೆ. ಕನ್ನಡ ಬಾವುಟಕ್ಕೆ ಒಪ್ಪಿಗೆ ಕೋರಿ ಕೇಂದ್ರಕ್ಕೆ ಪತ್ರ ಬರೆದಿದ್ದೇನೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ ಮಾತಾಡುತ್ತಾರೆ. ದಯಮಾಡಿ ಕೇಂದ್ರದಿಂದ ಕನ್ನಡ ಬಾವುಟಕ್ಕೆ ಒಪ್ಪಿಗೆ ಕೊಡಿಸಲಿ. ಶಾಸ್ತ್ರೀಯ ಸ್ಥಾನಮಾನ ವಿಚಾರದಲ್ಲಿ ಅನುದಾನ ಕೊಡಿಸಲಿ. ತಮಿಳುನಾಡಿಗೆ ಹೆಚ್ಚಿನ ಅನುದಾನ ನೀಡಲಾಗುತ್ತಿದೆ. ಆದರೆ ಕನ್ನಡಕ್ಕಿಲ್ಲ. ಜುಲೈ ಅಂತ್ಯದ ವೇಳೆಗೆ ನಿಯೋಗದ ಜತೆ ಕೇಂದ್ರದ ಮಂತ್ರಿಗಳನ್ನು ಭೇಟಿ ಮಾಡಿ ಅನುದಾನಕ್ಕೆ ಮನವಿ ಮಾಡುತ್ತೇವೆ ಎಂದು ಹೇಳಿದರು.

ಕನ್ನಡ ಧ್ವಜಕ್ಕೆ ಒತ್ತಾಯ ಇದೇ ಮೊದಲೇನಲ್ಲ

ಇನ್ನು ಕನ್ನಡ ಧ್ವಜಕ್ಕೆ ಕರ್ನಾಟಕ ಸರ್ಕಾರದ ಒತ್ತಾಯ ಇದೇ ಮೊದಲೇನಲ್ಲ. ಈ ಹಿಂದೆ ಅಂದರೆ 2017ರಲ್ಲೇ ಬಾವುಟಕ್ಕೆ ಅಧಿಕೃತ ಮಾನ್ಯತೆ ಕೋರಿ ಕೇಂದ್ರಕ್ಕೆ ಅಂದಿನ ಸಿದ್ದರಾಮಯ್ಯ ಸರ್ಕಾರ ಮನವಿ ಸಲ್ಲಿಸಿತ್ತು. ಇದೀಗ ಮತ್ತೊಮ್ಮೆ ಪತ್ರ ಬರೆಯುವ ಮೂಲಕ ಕೇಂದ್ರದ ಮೇಲೆ ಒತ್ತಡ ಹೇರಿದೆ.

ಕೆಬಿಜಿಯವರ ಅಗಲಿಕೆಗೆ ಪ್ರಧಾನಿ ಮೋದಿ ಸಂತಾಪ




ಡಾ.ಕೆ.ಬಿ.ಗಣಪತಿ

ಮೈಸೂರು,ಜು.19(ಪಿಎಂ)– 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರ (ಕೆಬಿಜಿ) ನಿಧನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಗಣಪತಿಯವರ ಧರ್ಮಪತ್ನಿ, ಕೆ.ಕೆ.ದೇವಮ್ಮ (ರ್‍ಯಾಲಿ ಗಣಪತಿ) ಅವರಿಗೆ ಪತ್ರ ಬರೆದಿರುವ ಪ್ರಧಾನಿಯವರು, ಗಣಪತಿಯವರ ನಿಧನ ಸುದ್ದಿ ಕೇಳಿ ಅತ್ಯಂತ ಬೇಸರ ಹಾಗೂ ದುಃಖವಾಯಿತು. ಅವರ ನಿಧನದಿಂದ ಉಂಟಾಗಿರುವ ನಷ್ಟವನ್ನು ಎಂದಿಗೂ ಭರಿಸಲು ಸಾಧ್ಯವಿಲ್ಲ. ಡಾ.ಕೆ.ಬಿ.ಗಣಪತಿ ಅವರು ತಮ್ಮ ಚಿಂತನಾಶೀಲ ದೃಷ್ಟಿಕೋನಗಳು ಹಾಗೂ ಸಾರ್ಥಕ ಕೆಲಸ–ಕಾರ್ಯಗಳಿಂದ ಸಮಾಜದ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರು ತಮ್ಮ ಬರಹಗಳ ಮೂಲಕ ಯುವಪೀಳಿಗೆಗೆ ಸ್ಫೂರ್ತಿ ನೀಡುವ ಪರಂಪರೆ ಹಾಕಿ ಕೊಟ್ಟಿದ್ದಾರೆ ಎಂದು ಸ್ಮರಿಸಿದ್ದಾರೆ.





प्रधान मंत्री
Prime Minister

New Delhi
आषाढ़ 24, शक संवत् 1947
July 15, 2025

Smt. Ralie Ganapathy Ji,

I received the news of the demise of Dr. K.B. Ganapathy Ji with a feeling of grief and sadness. Such a loss leaves a void that can never be filled.

A renowned journalist, Dr. K.B. Ganapathy Ji was widely respected for his thoughtful views and compelling work. Through his writings, he has left behind a legacy that will continue to inspire younger generations to tread the path shown by him.

During the course of his writing career spanning several decades, Dr. K.B. Ganapathy Ji excelled not just as a journalist, but also left behind an indelible mark as an author and an institution-builder.

He made a lasting contribution to the media landscape of Karnataka. The two newspapers that he founded – Star of Mysore in English and Mysuru Mithra in Kannada, reflect Dr. K.B. Ganapathy Ji's passion and commitment to enriching public discourse in Karnataka, particularly in the region around Mysuru and Kodagu.

The values that Dr. K.B. Ganapathy Ji instilled will continue to inspire the family. Memories of the times spent with him will provide you solace and comfort in this difficult hour.

He will be missed by family, friends and well-wishers, but he will always continue to reside in hearts.

My heartfelt condolences and thoughts are with you and the family. May you gather the strength and fortitude to endure this grievous loss.

Om Shanti!

(Narendra Modi)

Smt. Ralie Ganapathy
#375, 4-Estate 8-Main
9 Cross, KC Layout
Mysuru
Karnataka – 570011

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೆಬಿಜಿ ಅವರ ಕುಟುಂಬಕ್ಕೆ ಬರೆದಿರುವ ಶೋಕ ಸಂದೇಶ ಪತ್ರ.

ಹಲವು ದಶಕಗಳ ಕಾಲದ ತಮ್ಮ ಬರವಣಿಗೆಯ ವೃತ್ತಿ ಜೀವನದಲ್ಲಿ ಗಣಪತಿಯವರು ಕೇವಲ ಪತ್ರಕರ್ತರಾಗಿ ಮಾತ್ರವಲ್ಲದೆ, ಲೇಖಕರಾಗಿ, ಜೊತೆಗೆ ಸಂಸ್ಥೆ ಕಟ್ಟಿ ಬೆಳೆಸುವಲ್ಲಿಯೂ ಅಳಿಸಲಾಗದ ಛಾಪು ಮೂಡಿಸಿದ್ದಾರೆ. ಕರ್ನಾಟಕ ಮಾಧ್ಯಮ ಕ್ಷೇತ್ರಕ್ಕೆ ಅವರ ಕೊಡುಗೆ ಶಾಶ್ವತ. ಕೆ.ಬಿ.ಗಣಪತಿ ಅವರು ಸ್ಥಾಪಿಸಿದ ಇಂಗ್ಲಿಷ್‌ನ 'ಸ್ಟಾರ್ ಆಫ್ ಮೈಸೂರ್' ಹಾಗೂ ಕನ್ನಡದ 'ಮೈಸೂರು ಮಿತ್ರ' ಪತ್ರಿಕೆಗಳು ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಹಾಗೂ ಕೊಡಗು ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ಸಾರ್ವಜನಿಕರ ಚಿಂತನಾಶೀಲತೆಯನ್ನು



ಪ್ರಧಾನಮಂತ್ರಿ ನರೇಂದ್ರ ಮೋದಿ

ಶ್ರೀಮಂತಗೊಳಿಸುವಲ್ಲಿ ಸಫಲವಾಗಿವೆ.

ಡಾ.ಕೆ.ಬಿ.ಗಣಪತಿ ಅವರ ಮೌಲ್ಯಗಳು ಕುಟುಂಬಕ್ಕೆ ಸ್ಫೂರ್ತಿ ನೀಡುತ್ತಲೇ ಇರುತ್ತವೆ. ಅವರಿಲ್ಲದ ಈ ದುಃಖದ ಸಮಯದಲ್ಲಿ ಅವರೊಂದಿಗೆ ತಾವು (ರ್‍ಯಾಲಿ ಗಣಪತಿ) ಕಳೆದ ಸಮಯ ಹಾಗೂ ನೆನಪುಗಳು ಸಮಾಧಾನ ಹಾಗೂ ಸಾಂತ್ವನ ನೀಡುತ್ತವೆ ಎಂದು ಭಾವಿಸಿದ್ದೇನೆ.

ಕುಟುಂಬ ವರ್ಗ, ಬಂಧು–ಮಿತ್ರರು ಹಾಗೂ ಹಿತೈಷಿಗಳು ಅವರ ಅಗಲಿಕೆಯಿಂದ ದುಃಖಿತರಾಗಿದ್ದಾರೆ. ಆದರೆ ಅವರು ಸದಾ ಈ ಎಲ್ಲಾ ಪ್ರೀತಿಪಾತ್ರರ ಹೃದಯದಲ್ಲಿ ನೆಲೆ ನಿಂತಿರುತ್ತಾರೆ. ತಮಗೆ ಹಾಗೂ ತಮ್ಮ ಕುಟುಂಬ ಸದಸ್ಯರಿಗೆ ನನ್ನ ಹೃತ್ಪೂರ್ವಕ ಸಂತಾಪ ತಿಳಿಸಬಯಸುತ್ತೇನೆ. ಅವರ ನಿಧನದ ದುಃಖ ಭರಿಸುವ ಶಕ್ತಿ ಮತ್ತು ಸ್ಥೈರ್ಯವನ್ನು ದೇವರು ಕರುಣಿಸಲಿ. ಅವರ ಆತ್ಮಕ್ಕೆ ಶಾಂತಿ ದೊರಕಲಿ. ಓಂ ಶಾಂತಿ ಎಂದು ಪ್ರಧಾನಿ ಮೋದಿ ಪ್ರಾರ್ಥಿಸಿದ್ದಾರೆ.

ಸಂವಿಧಾನದ ಆಶಯದಂತೆ ಸರ್ಕಾರ ಕೆಲಸ ಮಾಡುತ್ತಿದೆ

ಸಚಿವ ಡಾ. ಹೆಚ್.ಸಿ.ಮಹದೇವಪ್ಪ



ಮೈಸೂರು, ಜು.19(ಎಂಟಿವೈ)– ಸಂವಿಧಾನದ ಆಶಯದಂತೆ ಎಲ್ಲರೂ ಗೌರವಯುತವಾಗಿ ಬಾಳಬೇಕೆಂಬ ಬಯಕೆಯೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆ ಯಾವುದೇ ಜಾತಿ, ಧರ್ಮ ಹಾಗೂ ರಾಜಕೀಯ ಪಕ್ಷದ ಕಾರ್ಯಕರ್ತರಿಗೆ ಮಾತ್ರ ಸೀಮಿತವಾಗಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರತಿಪಾದಿಸಿದರು.

ಸಾಧನಾ ಸಮಾವೇಶದಲ್ಲಿ ಮಾತನಾಡಿದ ಅವರು, ರಾಷ್ಟ್ರದ ಹಿತ, ಸರ್ವಜನರ, ಸಮುದಾಯಗಳ ಸಾಮರಸ್ಯ ಕಾಪಾಡುವ, ಸರ್ವಾಂಗೀಣ ಅಭಿವೃದ್ಧಿ ಬಯಸಿ, ಸಾಮಾಜಿಕ ನ್ಯಾಯಕ್ಕೆ, ಸಂವಿಧಾನದ ಆಶಯಗಳಿಗೆ ಪ್ರೇರಕವಾಗಿ ಸಿಎಂ ಸಿದ್ದರಾಮಯ್ಯ ಕಾರ್ಯ ನಿರ್ವಹಿಸಿ, ರಾಜ್ಯವನ್ನು ಅಭಿವೃದ್ಧಿಯಲ್ಲಿ ಮುಂಚೂಣಿಗೆ ಕೊಂಡೊಯ್ಯುತ್ತಿದ್ದಾರೆ. ನಮ್ಮೆಲ್ಲರನ್ನು ಒಂದುಗೂಡಿಸಿ ರಾಜ್ಯವನ್ನು ಅಭಿವೃದ್ಧಿ ಮಾಡುತ್ತಿದ್ದಾರೆ. ವಿಶೇಷವಾಗಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ಅಭಿವೃದ್ಧಿ ಪಥದಲ್ಲಿ ಮುಂಚೂಣಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದರು.

ಇದು ಅಭಿವೃದ್ಧಿ ಸಭೆ, ಯಾರದೋ ಅಸ್ತಿತ್ವಕ್ಕೆ, ಸವಾಲಿಗೆ ಕರೆದ ಸಭೆಯಲ್ಲ. 2023ರಲ್ಲಿ ಜನ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಿದ್ದಾರೆ. ಜನರ ಶಕ್ತಿ ಬಳಸಿ, ಜನರಿಗೆ ಶಕ್ತಿ ಯೋಜನೆ ಮೂಲಕ ಋಣ ತೀರಿಸುತ್ತಿದ್ದೇವೆ. ಸಂವಿಧಾನದ ಪ್ರಸ್ತಾವನೆಯನ್ನ ಪಠಿಸಿದ್ದೇವೆ. ಸ್ವಾತಂತ್ರ್ಯದ ಉದ್ದೇಶಕ್ಕೆ, ಸಂವಿಧಾನ ಆಶಯಕ್ಕೆ ತಕ್ಕಂತೆ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದರು.

100 ವರ್ಷದ ಹಿಂದೆ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಆ ಸಭೆಯಲ್ಲಿ ಮಹಾತ್ಮ ಗಾಂಧೀಜಿ ಅವರು ಅಧ್ಯಕ್ಷರಾಗಿದ್ದರು. ಅದರ ಸವಿನೆನಪಿಗಾಗಿ ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿ ತೆಗೆದುಕೊಂಡ ಐತಿಹಾಸಿಕ ನಿರ್ಣಯದಂತೆ ಮೈಸೂರಲ್ಲಿ ಸಾಧನಾ ಸಮಾವೇಶ ನಡೆಸಲಾಗುತ್ತಿದೆ. ಅಧಿಕಾರದಲ್ಲಿದ್ದಾಗ ಏನೂ ಮಾಡದೇ ಇರುವವರು, ಸಮಾವೇಶದ ಬಗ್ಗೆ ಟೀಕೆ ಮಾಡಿದ್ದಾರೆ. ಮೈಸೂರಲ್ಲಿ ಏನೂ ಮಾಡಿಲ್ಲ ಎನ್ನುತ್ತಾರೆ. ಅರಮನೆ ಸುತ್ತಮುತ್ತ, ಬನ್ನಿಮಂಟಪದ ಕಾಂಕ್ರಿಟ್ ರಸ್ತೆ, ಜಿಲ್ಲಾಸ್ಪತ್ರೆ, ವಿವಿಧ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ. ಇಂತಹ ಒಂದೇ ಒಂದು ಯೋಜನೆಯನ್ನು ಬಿಜೆಪಿ, ಜೆಡಿಎಸ್ ಮಾಡಿಲ್ಲ ಎಂದು ಕಿಡಿಕಾರಿದರು.

ಮುಂದಿನ ಮೂರು ವರ್ಷದೊಳಗೆ ಜನರಿಗೆ ಕೊಟ್ಟ ಎಲ್ಲಾ ಭರವಸೆ ಈಡೇರಿಸುತ್ತೇವೆ ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವ ಪಣ ತೊಡಲಾಗಿದೆ. ಜನರು ನಮಗೆ ಆಶೀರ್ವಾದ ಮಾಡಿದ್ದಾರೆ. ಅವರ ಋಣ ತೀರಿಸಲು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಖರ್ಗೆಗೆ ಆಸರೆಯಾದ ಡಿಕೆಶಿ, ಮಹದೇವಪ್ಪ

ಮೈಸೂರು, ಜು.19(ಎಂಕೆ)– ಮೈಸೂರಿನಲ್ಲಿ ನಡೆದ ಸಾಧನಾ ಸಮಾವೇಶದಲ್ಲಿ ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆಸರೆಯಾದರು.

ಬೃಹತ್ ವೇದಿಕೆಯ ರ್‍ಯಾಂಪ್ ಹತ್ತುವಾಗ, ಖರ್ಗೆಯವರ ಕೈ ಹಿಡಿದು ಕರೆದುಕೊಂಡು ಬಂದ ಡಿಸಿಎಂ ಡಿ.ಕೆ.ಶಿವಕುಮಾರ್, ನಿಗದಿಪಡಿಸಿದ್ದ ಆಸನದಲ್ಲಿ ಕೂರಿಸಿದರು. ಬಳಿಕ ವಿಶ್ರಾಂತಿ ಕೊಠಡಿ ಕಡೆಗೆ ತೆರಳುವಾಗ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಖರ್ಗೆಯವರ ಕೈ ಹಿಡಿದುಕೊಂಡು ಕರೆದುಕೊಂಡು ಹೋಗುವ ಮೂಲಕ ಆಸರೆಯಾದರು.

ಕರ್ತವ್ಯದ ವೇಳೆ ಸಾವಿಗೀಡಾದ ಸೆಸ್ಕಾಂ ಸಿಬ್ಬಂದಿ ಕುಟುಂಬಕ್ಕೆ 1.06 ಕೋಟಿ ರೂ. ಪರಿಹಾರ



ಕರ್ತವ್ಯದ ವೇಳೆ ವಿದ್ಯುತ್ ಅವಘಡದಿಂದ ಸಾವಿಗೀಡಾದ ಸೆಸ್ಕಾಂ ಸಿಬ್ಬಂದಿ ಮಹೇಶ್ ಜಿ.ಬಿ. ಕುಟುಂಬಸ್ಥರಿಗೆ 1.06 ಕೋಟಿ ರೂ.ಪರಿಹಾರ ಮೊತ್ತದ ಚೆಕ್ ಅನ್ನು ಸಿಎಂ ಸಿದ್ದರಾಮಯ್ಯ ಹಸ್ತಾಂತರಿಸಿದರು.

ಮೈಸೂರು, ಜು.19(ಎಂಕೆ)– ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ವಿದ್ಯುತ್ ಅವಘಡದಿಂದ ಸಾವಿಗೀಡಾದ ಸೆಸ್ಕಾಂ ಸಿಬ್ಬಂದಿ ಮಹೇಶ್ ಜಿ.ಬಿ. ಕುಟುಂಬಸ್ಥರಿಗೆ 1.06 ಕೋಟಿ ರೂ.ಪರಿಹಾರ ಮೊತ್ತದ ಚೆಕ್ ಅನ್ನು ಸಿಎಂ ಸಿದ್ದರಾಮಯ್ಯ ಹಸ್ತಾಂತರಿಸಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸಾಧನಾ ಸಮಾವೇಶದಲ್ಲಿ ಸೆಸ್ಕ್ ವ್ಯಾಪ್ತಿಯ ಪಾಂಡವಪುರ ಉಪ ವಿಭಾಗದಲ್ಲಿ ಕಿರಿಯ ಪವರ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ ಮಹೇಶ್ (27 ವರ್ಷ), 2024 ಡಿ.29 ರಂದು ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ವಿದ್ಯುತ್ ಅವಘಡ ಸಂಭವಿಸಿ ಸಾವಿಗೀಡಾಗಿದ್ದರು.

ಸೆಸ್ಕಾಂ ತನ್ನ ಸಿಬ್ಬಂದಿ ಶ್ರೇಯೋಭಿವೃದ್ಧಿಗಾಗಿ ಕೆನರಾ ಬ್ಯಾಂಕ್‌ನೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಂತೆ 1.06 ಕೋಟಿ ರೂ.ಮೊತ್ತದ ಪರಿಹಾರದ ಚೆಕ್ ಅನ್ನು ಮೃತ ಮಹೇಶ್ ಅವರ ತಂದೆ ಬೋರೇಗೌಡ ಅವರು ಸ್ವೀಕರಿಸಿದರು. ಇಂಧನ ಸಚಿವರಾದ ಕೆ.ಜೆ.ಜಾರ್ಜ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು, ಮೈಸೂರು ವಿಭಾಗದ ಅಧೀಕ್ಷಕ ಇಂಜಿನಿಯರ್ ಸುನೀಲ್ ಮತ್ತಿತರರಿದ್ದರು.

ಸರ್ಕಾರಿ ಕಾರ್ಯಕ್ರಮದಿಂದ ದಿಢೀರ್ ದೆಹಲಿಗೆ ಡಿ.ಕೆ.ಶಿವಕುಮಾರ್!



ಬೆಂಗಳೂರು, ಜು.19– ಮೈಸೂರಿನಲ್ಲಿ ನಡೆದ ಸರ್ಕಾರದ ಸಾಧನಾ ಸಮಾವೇಶ ಕಾರ್ಯಕ್ರಮದಿಂದ ಅರ್ಧಕ್ಕೇ ನಿರ್ಗಮಿಸಿದ ಡಿಸಿಎಂ ಡಿ.ಕೆ. ಶಿವಕುಮಾರ್ ದಿಢೀರ್ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ.

ವೈಯಕ್ತಿಕ ಕೆಲಸಕ್ಕಾಗಿ ದೆಹಲಿಗೆ ಪ್ರಯಾಣ ಎಂಬ ಮಾಹಿತಿ ಲಭ್ಯವಾಗಿದ್ದರೂ, ಮೈಸೂರಿನಲ್ಲಿ ನಡೆದ ಸರ್ಕಾರದ ಕಾರ್ಯಕ್ರಮದಿಂದ ಅರ್ಧಕ್ಕೇ ನಿರ್ಗಮಿಸಿ ತರಾತುರಿಯಲ್ಲಿ ದೆಹಲಿಗೆ ಹೊರಟಿದ್ದು ಕುತೂಹಲ ಮೂಡಿಸಿದೆ. ಕಳೆದ ಕೆಲವು ದಿನಗಳ ಹಿಂದಷ್ಟೇ ಡಿ.ಕೆ. ಶಿವಕುಮಾರ್ ದೆಹಲಿಗೆ ತೆರಳಿದ್ದರು. ಈಗ ಮತ್ತೆ ತರಾತುರಿಯಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಜುಲೈ 11 ಹಾಗೂ 12ರಂದು ಶಿರಡಿಗೆ ತೆರಳಿದ್ದ ಡಿಕೆಶಿ ದಿಢೀರ್ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ್ದರು. ಇದಾದ 8 ದಿನಗಳ ಅಂತರದಲ್ಲೇ ದೆಹಲಿಗೆ ತೆರಳಿರುವುದು ಕುತೂಹಲ ಮೂಡಿಸಿದೆ.

ಇಂದು ಮೈಸೂರಲ್ಲಿ ನೇತ್ರ ಉಚಿತ ತಪಾಸಣೆ

ಮೈಸೂರು, ಜು.19(ಜಿಎ)–ರೋಟರಿ ಜೆ.ಪಿ.ನಗರ, ರೋಟರಿ ಜೆಪಿನಗರ ಚಾರಿಟಬಲ್ ಟ್ರಸ್ಟ್, ರೋಟರಿ ಕ್ಲಬ್ ಆಫ್ ಕೃಷ್ಣರಾಜ, ಜೆಪಿನಗರ ಸ್ಪೋರ್ಟ್ಸ್ ಕ್ಲಬ್, ಲಯನ್ಸ್ ಕ್ಲಬ್ ಆಫ್ ಜೆಪಿ ನಗರ, ಸ್ನೇಹನಿಧಿ ಪತ್ತಿನ ಸಹಕಾರ ಸಂಘ ಹಾಗೂ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಜು.20ರಂದು ಕಣ್ಣಿನ ಉಚಿತ ತಪಾಸಣಾ ಹಾಗೂ ಶಸ್ತ್ರಚಿಕಿತ್ಸೆ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೋಟರಿ ಜೆ.ಪಿ.ನಗರ ಚಾರಿಟಬಲ್ ಟ್ರಸ್ಟ್‌ನ ಸದಸ್ಯ ರವಿಶಂಕರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 8ಗಂಟೆಯಿಂದ ಮಧ್ಯಾಹ್ನ 12.30ರವರೆಗೆ ಶಿಬಿರ ನಡೆಯಲಿದ್ದು, ಉತ್ತಮ ಕನ್ನಡಕಗಳನ್ನು ಕಡಿಮೆ ದರದಲ್ಲಿ ನೀಡಲಾಗುತ್ತದೆ ಎಂದರು. ಶಿಬಿರದಲ್ಲಿ ಕಣ್ಣಿನ ಪೊರೆ, ಗ್ಲಾಕೋಮ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಜು ಬರುವುದು, ಹತ್ತಿರ ಮತ್ತು ದೂರದೃಷ್ಟಿ ದೋಷ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ವಾರೆಕಣ್ಣು ಸೇರಿದಂತೆ ರಾತ್ರಿ ಕುರುಡುತನ ತಪಾಸಣೆ ಮಾಡಲಾಗುತ್ತದೆ ಎಂದು ಅವರು ವಿವರಿಸಿದರು.

ಮೇ ತಿಂಗಳಿನಿಂದ ಶಿಬಿರಗಳನ್ನು ಆಯೋಜಿಸುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಬಾರಿ ಜೆಪಿ ನಗರದ ಸುತ್ತಮುತ್ತಲಿನಲ್ಲಿರುವ ಗ್ರಾಮಾಂತರ ಪ್ರದೇಶದ ಜನರಿಗೆ ಮಾಹಿತಿ ನೀಡಲಾಗಿದೆ ಅವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಮೊದಲೇ ನೊಂದಣಿ ಮಾಡಿಕೊಳ್ಳಲು ದೂರವಾಣಿ ಸಂಖ್ಯೆ 9448413274 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಚೆಲುವಯ್ಯ, ಪ್ರಮೋದ್, ಡಿ.ಎಂ.ನಾಗರಾಜ್, ಜಿ.ವೆಂಕಟೇಶ್ ಉಪಸ್ಥಿತರಿದ್ದರು.

ಸಾಧನಾ ಸಮಾವೇಶದ ಎಫೆಕ್ಟ್: ಮೈಸೂರಿನ ಹಲವು ರಸ್ತೆಗಳಲ್ಲಿ ಟ್ರಾಫಿಕ್ ಜಾಮ್



ಮೈಸೂರಲ್ಲಿ ಶನಿವಾರ ನಡೆದ ಸರ್ಕಾರದ ಸಾಧನಾ ಸಮಾವೇಶ ಪರಿಣಾಮ ಹಲವು ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು

ಮೈಸೂರು, ಜು.19(ಎಂಟಿವೈ)– ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಸಾಧನಾ ಸಮಾವೇಶದಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ವಿವಿಧೆಡೆಯಿಂದ ನೂರಾರು ವಾಹನಗಳಲ್ಲಿ ಪಕ್ಷದ ಕಾರ್ಯಕರ್ತರು ಆಗಮಿಸಿದ ಹಿನ್ನೆಲೆಯಲ್ಲಿ ಮೈಸೂರಿನ ಹಲವು ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಯಶಸ್ವಿಯಾಗಿ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಾಧನಾ ಸಮಾವೇಶದಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಂದ ಕಾಂಗ್ರೆಸ್ ಕಾರ್ಯಕರ್ತರನ್ನು ಕರೆತರಲು ಸಾರಿಗೆ ಸಂಸ್ಥೆಯ 465 ಬಸ್ ಸೇರಿದಂತೆ 800ಕ್ಕೂ ಹೆಚ್ಚು ಬಸ್, 200ಕ್ಕೂ ಹೆಚ್ಚು ಮಿನಿ ಬಸ್ ವ್ಯವಸ್ಥೆ ಮಾಡಲಾಗಿತ್ತು.

ಬೆಳಗ್ಗೆ 10 ಗಂಟೆಯಿಂದಲೇ ಕಾಂಗ್ರೆಸ್ ಕಾರ್ಯಕರ್ತರನ್ನು ಹೊತ್ತು ಮೈಸೂರು ಪ್ರವೇಶಿಸಲಾರಂಭಿಸಿದ ವಾಹನಗಳು ಮಹಾರಾಜ ಕಾಲೇಜು ಮೈದಾನದತ್ತ ಧಾವಿಸಿದವು. 11 ಗಂಟೆಯಾಗುತ್ತಿದ್ದಂತೆ ಹುಣಸೂರು ರಸ್ತೆ, ಬೆಂಗಳೂರು ರಸ್ತೆ, ಕೆಆರ್‌ಎಸ್ ರಸ್ತೆ, ಬನ್ನೂರು, ಮಹದೇವಪುರ, ತಿ.ನರಸೀಪುರ, ನಂಜನಗೂಡು ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ಬೋಗಾದಿ ರಸ್ತೆ ಕಡೆಯಿಂದ ಬಂದ ಕಾರ್ಯಕರ್ತರಿದ್ದ ವಾಹನಗಳು ನಗರ ಪ್ರವೇಶಿಸಿದವು. ಇದರಿಂದ ಬಹುತೇಕ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಅದರಲ್ಲೂ ಸರಸ್ವತಿಪುರಂ, ಜಯನಗರ, ಕೃಷ್ಣಮೂರ್ತಿಪುರಂ, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಬಳಿ ಕಾಂಗ್ರೆಸ್ ಕಾರ್ಯಕರ್ತರಿದ್ದ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಟ್ರಾಫಿಕ್ ಜಾಮ್ ಸರಿಪಡಿಸಲು ಸಂಚಾರ ಪೊಲೀಸರು ಹಾಗೂ ಹೋಮ್‌ಗಾರ್ಡ್‌ಗಳು ಹೈರಾಣಾದರು.

ಸಮಾವೇಶ ಆರಂಭವಾದರೂ ಬರುತ್ತಲೇ ಇದ್ದ ಜನ: ಸಾಧನಾ ಸಮಾವೇಶ ಆರಂಭವಾದ ನಂತರವೂ ಹುಣಸೂರು, ಪಿರಿಯಾ ಪಟ್ಟಣ, ಕೆ.ಆರ್.ನಗರ ಸೇರಿದಂತೆ ವಿವಿಧೆಡೆಯಿಂದ ಕಾರ್ಯಕರ್ತರು ಬರುತ್ತಲೇ ಇದ್ದರು. ಇದರಿಂದ ಕೊನೆಯದಾಗಿ ಬಂದ ಜನ ಪೆಂಡಾಲ್ ಒಳಗೆ ಹೋಗಲಾರದೇ ರಸ್ತೆಯಲ್ಲಿಯೇ ನಿಂತುಕೊಂಡು ಭಾಷಣ ಕೇಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸಮಾವೇಶ ಬಿಟ್ಟು ಸಿಟಿ ರೌಂಡ್‌ಗೆ ತೆರಳಿದ ಕಾರ್ಯಕರ್ತರು

ಮೈಸೂರು, ಜು.19(ಎಂಟಿವೈ)– ಸಾಧನಾ ಸಮಾವೇಶಕ್ಕಾಗಿ ವಿವಿಧೆಡೆಯಿಂದ ಬಂದಿದ್ದ ಕಾರ್ಯಕರ್ತರಲ್ಲಿ ಬಹುತೇಕರು ಸಮಾವೇಶಕ್ಕೆ ಚಕ್ಕರ್ ಹೊಡೆದು ನಗರ ಪ್ರದಕ್ಷಿಣೆ ಹಾಕಿದರು. ವಾಹನದಿಂದ ಮಹಾರಾಜ ಕಾಲೇಜು ಮೈದಾನ ಬಳಿ ಇಳಿಯುತ್ತಿದ್ದಂತೆಯೇ ವೇದಿಕೆಯತ್ತ ಮುಖ ಮಾಡದೆ ಕೆಲವರು ಸಿಟಿ ಸುತ್ತಲು ಹೋದರು. ಹಾಗಾಗಿ ದೇವರಾಜ ಅರಸ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಅರಮನೆ ಸುತ್ತ ಸಮಾವೇಶಕ್ಕೆ ಬಂದಿದ್ದ ಕಾರ್ಯಕರ್ತರು ಹೆಚ್ಚಾಗಿ ಗುಂಪು ಗುಂಪಾಗಿ ಓಡಾಡುತ್ತಿದ್ದ ದೃಶ್ಯ ಕಂಡುಬಂದಿತು. ಮೈಸೂರಿಗೆ ಬಂದ ಸಂಭ್ರಮದಲ್ಲಿ ಕೆಲವರು ಬಟ್ಟೆ ಸೇರಿದಂತೆ ವಿವಿಧ ವಸ್ತುಗಳ ಖರೀದಿಯಲ್ಲಿ ತೊಡಗಿದ್ದರು. ಸಮಾವೇಶ ಮಧ್ಯಾಹ್ನ 3 ಗಂಟೆವರೆಗೂ ನಡೆದ ಹಿನ್ನೆಲೆಯಲ್ಲಿ ಸಿಟಿ ಸುತ್ತಿದ ಬಳಿಕ ತಾವು ಬಂದಿದ್ದ ಬಸ್‌ನತ್ತ ನಿಗದಿತ ಸಮಯದೊಳಗೆ ಹಾಜರಾಗಿ, ಊರು ಸೇರುವ ಬಸ್ ಹತ್ತಿದರು.

ಬಾರ್‌ಗಳಿಗೂ ಮುಗಿಬಿದ್ದ ಕಾರ್ಯಕರ್ತರು!



ಚಾಮರಾಜ ಜೋಡಿ ರಸ್ತೆಯಲ್ಲಿರುವ ಬಾರ್ ಮುಂದೆ ಜನಜಂಗುಳಿ

ಮೈಸೂರು, ಜು.19(ಎಂಟಿವೈ)– ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸಾಧನಾ ಸಮಾವೇಶಕ್ಕೆ ವಿವಿಧೆಡೆಯಿಂದ ಬಂದವರಲ್ಲಿ ಹಲವರು ಬಾರ್‌ಗಳಿಗೆ ಭೇಟಿ ನೀಡಿದರು!

ಚಾಮರಾಜ ಜೋಡಿ ರಸ್ತೆಯಲ್ಲಿರುವ ಹಲವು ಬಾರ್‌ಗಳ ಮುಂದೆ ಜನ ಸರದಿ ಸಾಲಿನಲ್ಲಿ ನಿಂತು ಇಷ್ಟದ 'ಮಾಲು' ಖರೀದಿಸಿ, ಪಾದಚಾರಿ ಮಾರ್ಗದಲ್ಲೇ ಕುಳಿತು ಕುಡಿಯುತ್ತಿದ್ದ ದೃಶ್ಯ ಕಂಡುಬಂತು. ಮೈಸೂರಿಗೆ ಬಂದ ಸಂಭ್ರಮದಲ್ಲಿ ಸ್ನೇಹಿತರೊಂದಿಗೆ ಸಣ್ಣ ಪಾರ್ಟಿ ಮಾಡಿ ಸಂಭ್ರಮಿಸಿದರು. ಹಾಗಾಗಿ ಇಂದು ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ಅನೇಕ ಬಾರ್‌ಗಳಲ್ಲಿ ಭರ್ಜರಿ ವ್ಯಾಪಾರ ನಡೆಯಿತು.

ಸಾಮಾನ್ಯ ದಿನಕ್ಕಿಂತ ಇಂದು ಹೆಚ್ಚಿನ ಸಂಖ್ಯೆಯ ಗ್ರಾಹಕರನ್ನು ಕಂಡ ಬಾರ್ ಮಾಲೀಕರು, ಅವರ ಬೇಡಿಕೆಯ ಎಣ್ಣೆ ನೀಡಲು ಪರದಾಡಿದರು. ಬಂದ ಬಸ್ ಮಿಸ್ಸಾಗಬಹುದೆಂಬ ತರಾತುರಿಯಲ್ಲಿದ್ದ ಕಾರ್ಯಕರ್ತರು ಬಾರ್ ಮಾಲೀಕರು ಹಾಗೂ ಸಿಬ್ಬಂದಿಗೆ ಬೇಗ ನೀಡುವಂತೆ ದುಂಬಾಲು ಬೀಳುತ್ತಿದ್ದರು.

ಮಾಂಸಾಹಾರಿ ಹೋಟೆಲ್‌ನಲ್ಲೂ ರಶ್: ಎಣ್ಣೆ ಹೊಡೆದ ನಂತರ ಸಮೀಪದ ಮಾಂಸಾಹಾರಿ ಹೋಟೆಲ್‌ಗಳಿಗೂ ಜನ ಲಗ್ಗೆ ಇಟ್ಟರು. ಮೈಸೂರಿನ ಹಲವು ನಾನ್‌ವೆಜ್ ಫಾಸ್ಟ್‌ಫುಡ್, ಹೋಟೆಲ್‌ಗಳಿಗೂ ಹೋಗಿ ತಮಗೆ ಇಷ್ಟವಾದ ಆಹಾರ ಸವಿದರು.

ಮೈಸೂರು ಮಹಾರಾಜರ ಆಳ್ವಿಕೆ ನಂತರ ಹೆಚ್ಚು ಅಭಿವೃದ್ಧಿ ಸಿದ್ದರಾಮಯ್ಯರ ಆಡಳಿತದಲ್ಲೇ

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್



ಮೈಸೂರು, ಜು.19(ಎಂಕೆ)– ಮೈಸೂರು ಮಹಾರಾಜರ ಕಾಲದಲ್ಲಿ ಆದ ಅಭಿವೃದ್ಧಿ ಬಿಟ್ಟರೆ, ಸ್ವಾತಂತ್ರ್ಯ ನಂತರ ಅತೀ ಹೆಚ್ಚು ಅಭಿವೃದ್ಧಿ ಕೆಲಸಗಳಾಗಿರುವುದು ಸಿದ್ದರಾಮಯ್ಯರ ಆಡಳಿತದಲ್ಲೇ ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಸಮರ್ಥಿಸಿಕೊಂಡರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಸಾಧನಾ ಸಮಾವೇಶದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗಲೂ, ಈಗಲೂ ಮೈಸೂರು, ಚಾ.ನಗರ ಸೇರಿದಂತೆ ಅಕ್ಕ–ಪಕ್ಕದ ಜಿಲ್ಲೆಗಳ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಪಂಚ ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರ್ಕಾರ ಪಾಪರ್ ಆಗಿದೆ. ಸರ್ಕಾರದ್ದು ಶೂನ್ಯ ಸಾಧನೆ ಎಂದು ಅಪಪ್ರಚಾರ ಮಾಡುತ್ತಿರುವ ಬಿಜೆಪಿ–ಜೆಡಿಎಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕು ಎನ್ನುವುದು ಬಿಟ್ಟರೆ, ಜನಪರ ಕೆಲಸ ಮಾಡಬೇಕು. ಸಹಾಯ ಮಾಡಬೇಕು. ಬಡವರ, ರೈತರ, ಹಿಂದುಳಿದವರ, ಅಲ್ಪಸಂಖ್ಯಾತರ ಕಷ್ಟ ಬಗೆಹರಿಸಬೇಕು ಎಂಬ ಯಾವುದೇ ಉದ್ದೇಶ ಇಲ್ಲ ಎಂದು ದೂರಿದರು.

ರಾಜ್ಯ ಸರ್ಕಾರ ರಾಜ್ಯದ ಜನತೆಗೆ ಏನೇನು ಬೇಕಾಗಿದೆಯೋ ಅದನ್ನೆಲ್ಲಾ ಒದಗಿಸುವ ಮೂಲಕ ಅಭಿವೃದ್ಧಿ ದಿಕ್ಕಿನಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನೆಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದೆ ಎಂಬುದನ್ನು ಜನರ ಮುಂದಿಡುವ ಕಾರ್ಯಕ್ರಮ ಇದಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಇಂತಹ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ಚುನಾವಣೆಗೂ ಮುನ್ನ ಹೇಳಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ, ಅಭಿವೃದ್ಧಿ ಕೆಲಸವನ್ನೂ ಮಾಡಿದ್ದೇವೆ. ಗ್ಯಾರಂಟಿ ಮೂಲಕ ಜನರ ಕಷ್ಟಗಳನ್ನು ಸಂಪೂರ್ಣ ಬಗೆಹರಿಸಿದ್ದೇವೆ ಎಂದು ಹೇಳಲ್ಲ. ಆದರೆ, ಜನರ ಕಷ್ಟದಲ್ಲಿ ಭಾಗಿಯಾಗಿ ಅವರ ಕಷ್ಟ ಕಡಿಮೆ ಮಾಡಿದ್ದೇವೆ. ಜನರು ಸಹ ಸರ್ಕಾರದ ಸಾಧನೆಯನ್ನು ಮೆಚ್ಚಿಕೊಂಡಿದ್ದಾರೆ ಎಂದರು.

ಸುಳ್ಳು ಪ್ರಚಾರಕ್ಕೆ ಕಿವಿಗೊಡಬೇಡಿ: ಮುಂದೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿ ಬಿಡುತ್ತಾರೆ ಎಂಬ ಸುಳ್ಳು ಪ್ರಚಾರಕ್ಕೆ ಕಿವಿಗೊಡಬೇಡಿ. ಸರ್ಕಾರ ಇರುವವರೆಗೂ ಗ್ಯಾರಂಟಿ ಯೋಜನೆಗಳು ನಿಲ್ಲಲ್ಲ. ಹಾಗೆಯೇ ಬರೀ ಮೈಸೂರು ಜಿಲ್ಲೆ ಮಾತ್ರ ಅಭಿವೃದ್ಧಿಯಾಗಿದೆ ಎಂದುಕೊಳ್ಳಬೇಡಿ. ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಆಗಬೇಕೋ ಅದೆಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸರ್ಕಾರಿ ನೌಕರರ ಹಳೇ ಪಿಂಚಣಿ ಯೋಜನೆ ಜಾರಿ ಸಂಬಂಧ ಸೂಕ್ತ ನಿರ್ಧಾರ

- ಸಮಿತಿಗೆ ಶೀಘ್ರ ವರದಿ ನೀಡಲು ಹೇಳುವೆ ; ಮುಖ್ಯಮಂತ್ರಿ ಸಿದ್ದರಾಮಯ್ಯ
- ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಶನಿವಾರ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಚಿತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಇತರರಿದ್ದಾರೆ.

ಮೈಸೂರು,ಜು.19(ಪಿಎಂ)– ರಾಜ್ಯ ಸರ್ಕಾರಿ ನೌಕರರಿಗೆ ಹಳೇ ಪಿಂಚಣಿ ಯೋಜನೆ (ಓಪಿಎಸ್) ಜಾರಿಗೊಳಿಸುವ ಸಂಬಂಧ ಸಮಿತಿ ರಚಿಸಿದ್ದು, ಶೀಘ್ರದಲ್ಲಿ ವರದಿ ನೀಡುವಂತೆ ಸಮಿತಿಗೆ ತಿಳಿಸುತ್ತೇನೆ. ಬಳಿಕ ನಿಮ್ಮೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ನಮ್ಮ ಸರ್ಕಾರ ಮುಕ್ತ ಮನಸ್ಸಿನಿಂದ ಇರಲಿದೆ ಎಂದು ಹೇಳಿದರು.

ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ರಾಜ್ಯ ಸರ್ಕಾರಿ ನೌಕರರ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಮಕ್ಕಳಿಗೆ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಹಾಗೂ ಪ್ರತಿಭಾ ಪುರಸ್ಕಾರ ನೀಡಿ ಅವರು ಮಾತನಾಡಿದರು.

ಹಳೇ ಪಿಂಚಣಿ ಯೋಜನೆಯಿಂದ ಹೊರಗಿರುವ ರಾಜ್ಯ ಸರ್ಕಾರಿ ನೌಕರರಿಗೆ ಸದರಿ ಯೋಜನೆ ಜಾರಿಗೊಳಿಸುವ ಸಂಬಂಧ ಸಮಿತಿ ರಚಿಸಲಾಗಿದೆ. ಶೀಘ್ರ ವರದಿ ಕೊಡಲು ಸಮಿತಿಗೆ ಹೇಳುತ್ತೇನೆ. ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ನಾವು ಮಾಡಿದ್ದಲ್ಲ. ಶಿಕ್ಷಕರ ಸಂಬಂಧ ಸಿ ಅಂಡ್ ಆರ್ ನಿಯಮಾವಳಿ ಸಂಬಂಧವೂ ನಿಮ್ಮೊಂದಿಗೆ, ಮುಖ್ಯ ಕಾರ್ಯದರ್ಶಿಗಳ ಜೊತೆ ಚರ್ಚಿಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಸಮಸ್ಯೆ ಪರಿಹಾರಕ್ಕೆ ಚರ್ಚೆ ಅಗತ್ಯ ಎಂದರು.

ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆ ಈಡೇರಿಸಲು ಸರ್ಕಾರ ತೆರೆದ ಮನಸ್ಸಿನಿಂದ ಇರುತ್ತದೆ. 2018ರಲ್ಲಿ 6ನೇ ವೇತನ ಆಯೋಗ ಜಾರಿ ಮಾಡಿದ್ದು ನಾನೇ. ಆಗಲೂ ಮುಖ್ಯಮಂತ್ರಿ ಆಗಿದ್ದೆ. 7ನೇ ವೇತನ ಆಯೋಗ ಕುರಿತಂತೆ ನಿಮ್ಮಿಂದ ಒತ್ತಾಯ ಮಾಡಿಸಿಕೊಳ್ಳದೇ ಜಾರಿ ಮಾಡಿದ್ದೇವೆ. ಸುಧಾಕರ್ ರಾವ್ ಆಯೋಗವು ಶೇ.27.5ರಷ್ಟು ಹೆಚ್ಚಳಕ್ಕೆ ಶಿಫಾರಸ್ಸು ಮಾಡಿತ್ತು. ಅದನ್ನು ಯಥಾವತ್ತಾಗಿ ಜಾರಿ ಮಾಡಿದ್ದೇವೆ. ನ್ಯಾಯಪರವಾದ ಬೇಡಿಕೆಗಳನ್ನು ಈಡೇರಿಸಲು ಸಿದ್ಧವಿದ್ದೇವೆ. ಕರ್ನಾಟಕ ಆರೋಗ್ಯ ಸಂಜೀವಿನಿ ಸಂಬಂಧ ಆದೇಶ ಹೊರಡಿಸಿದ್ದು, ನಮ್ಮ ಸರ್ಕಾರ ಮಾತು ಕೊಟ್ಟಂತೆಯೇ ನಡೆಯಲಿದೆ ಎಂದು ಹೇಳಿದರು.

ಪ್ರತಿಭೆ ಯಾರ ಸ್ವತ್ತೂ ಅಲ್ಲ: ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಹೇಳಿದಂತೆ ಪ್ರತಿಯೊಬ್ಬರು ಕನಸು ಕಟ್ಟಿಕೊಂಡು ಗುರಿ ತಲುಪಬೇಕು. ಪ್ರತಿಭೆ ಯಾರ ಸ್ವತ್ತೂ ಅಲ್ಲ. ಪ್ರತಿಭೆಯನ್ನು ಶ್ರಮ ವಹಿಸಿ ಸಂಪಾದಿಸಿಕೊಳ್ಳಬೇಕು. ಅವಕಾಶ ದೊರೆಯುವುದೂ ಮುಖ್ಯ. ಸಿಕ್ಕ ಅವಕಾಶ ಸದ್ಬಳಕೆ ಮಾಡಿಕೊಳ್ಳಬೇಕು. ಮಕ್ಕಳು ಪ್ರತಿಭಾವಂತರಾಗಲು ಶಾಲಾ ಶಿಕ್ಷಕರು ಎಷ್ಟು ಜವಾಬ್ದಾರರೋ ಅವರ ಪೋಷಕರು ಅಷ್ಟೇ ಜವಾಬ್ದಾರರಾಗುತ್ತಾರೆ. ಈ ನಿಟ್ಟಿನಲ್ಲಿ ಶಿಕ್ಷಕರು, ಪೋಷಕರು ಜವಾಬ್ದಾರಿ ವಹಿಸಿದರೆ ಎಲ್ಲಾ ಮಕ್ಕಳು ಪ್ರತಿಭಾವಂತರಾಗಲು ಸಾಧ್ಯ ಎಂದು ತಿಳಿಸಿದರು.

ಯಾವುದೇ ಕಾರಣಕ್ಕೂ ವಿಶೇಷವಾಗಿ ಸರ್ಕಾರಿ ನೌಕರರು ಜಾತಿ–ಧರ್ಮ ಮಾಡಬಾರದು. ನಮ್ಮ ಸಂವಿಧಾನದಲ್ಲಿ ಜಾತ್ಯಾತೀತ ತತ್ವ ಒಪ್ಪಿಕೊಂಡಿದ್ದೇವೆ. ನಮ್ಮ ಮೇಲೆ ಸಮಾಜದ ಋಣ ಇದೆ. ಅದನ್ನು ತೀರಿಸಿದರೆ ಮಾತ್ರವೇ ನಮ್ಮ ಬದುಕು ಸಾರ್ಥಕವಾಗಲಿದೆ. ಹುಟ್ಟು ಆಕಸ್ಮಿಕ, ಸಾವು ಗ್ಯಾರಂಟಿ. ಎಲ್ಲರೂ ಹುಟ್ಟಿದ ಮೇಲೆ ಸಾಯಲೇಬೇಕು. ಈ ನಡುವೆ ಜೀವನ ಸಾರ್ಥಕವಾಗಿರಬೇಕು. ಮಾನವೀಯ ಮೌಲ್ಯ ಬೆಳೆಸಿಕೊಳ್ಳಬೇಕು. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ನಾವು ವಿಶ್ವಮಾನವರಾಗಲು ಪ್ರಯತ್ನಿಸಬೇಕು ಎಂದರು.

ಮಕ್ಕಳಿಗೆ ಮೌಲ್ಯಗಳನ್ನು ಕಲಿಸಬೇಕು. ವೈಚಾರಿಕ, ವೈಜ್ಞಾನಿಕ ಮನೋಭಾವ ಬೆಳೆಸಬೇಕು. ಕಂದಾಚಾರ ಮೌಢ್ಯಗಳಿಂದ ದೂರವಿರುವಂತೆ ನೋಡಿಕೊಳ್ಳಬೇಕು. ಸಮಾಜದ ಬದುಕು ಹಸನಾಗಲು ಶಿಕ್ಷಕರು, ರೈತರು, ಸೈನಿಕರು ಕಾರಣ. ಅವರನ್ನು ಪ್ರತಿಯೊಬ್ಬರು ಗೌರವದಿಂದ ಕಾಣಬೇಕು. ನಾನು ನಮ್ಮ ಮುಖ್ಯಶಿಕ್ಷಕ ರಾಜಪ್ಪರನ್ನು ಸದಾ ಸ್ಮರಿಸುತ್ತೇನೆ ಅವರಿಂದ ವಿದ್ಯಾವಂತನಾಗಿ ಹಲವು ಉನ್ನತ ಸ್ಥಾನ ಅಲಂಕರಿಸಿ ಮುಖ್ಯಮಂತ್ರಿ ಆಗಲೂ ಸಾಧ್ಯವಾಯಿತು ಎಂದು ಸ್ಮರಿಸಿದರು.

ಸರ್ಕಾರಿ ನೌಕರರ ಸಮಸ್ಯೆಗಳನ್ನು ಬಗೆಹರಿಸುವುದು ಸರ್ಕಾರದ ಜವಾಬ್ದಾರಿ. ನೌಕರರು ಸರ್ಕಾರ ಕಾರ್ಯಕ್ರಮಗಳನ್ನು ಕರಾರುವಕ್ಕಾಗಿ ಜನತೆಗೆ ತಲುಪಿಸಬೇಕು. ನಾವು ಮತ್ತು ನೀವು ನಮ್ಮ ಸಮಾಜ ಸುಧಾರಣೆಗೆ ಕರ್ತವ್ಯ ಜವಾಬ್ದಾರಿ ಅರಿತು ಕೆಲಸ ಮಾಡೋಣ. ನಿಮ್ಮ ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಸಿದ್ದರಾಮಯ್ಯ ಆಶಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ, ನಾಲ್ಕು ಜಿಲ್ಲೆಗಳ ಸುಮಾರು 650 ಮಕ್ಕಳಿಗೆ ಇಂದು ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದರು ಹಾಗೂ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಶಾಸಕ ಡಿ.ರವಿಶಂಕರ್, ಮುಕ್ತ ವಿವಿ ಕುಲಪತಿ ಶರಣಪ್ಪ ವಿ.ಹಲಸೆ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದಿರುವ ಎ.ಎಸ್.ಪ್ರೀತಿ, ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಯುಪಿಐ ಸಂಬಂಧ ಲಂಚಕ್ಕೆ ಬೇಡಿಕೆಯಿಟ್ಟರೆ ಕೂಡಲೆ ಕರೆ ಮಾಡಿ: ಸಹಾಯವಾಣಿ ಬಿಡುಗಡೆ

ಬೆಂಗಳೂರು, ಜು.19– ವಾಣಿಜ್ಯ ತೆರಿಗೆ ಅಧಿಕಾರಿ–ಸಿಬ್ಬಂದಿ/ಬ್ರೋಕರ್‌ಗಳು ಯುಪಿಐಗೆ ಸಂಬಂಧಿಸಿದ ವಿಚಾರದಲ್ಲಿ ಲಂಚಕ್ಕಾಗಿ ಬೇಡಿಕೆ ಇಟ್ಟಲ್ಲಿ ತಕ್ಷಣ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸುವಂತೆ ವಾಣಿಜ್ಯ ತೆರಿಗೆ ಇಲಾಖೆ ಸಹಾಯವಾಣಿ ಬಿಡುಗಡೆ ಮಾಡಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ಮಾಡಿದ ವಾಣಿಜ್ಯ ತೆರಿಗೆ ಇಲಾಖೆ, ಕೆಲವು ಮಧ್ಯವರ್ತಿಗಳು ವರ್ತಕರಿಗೆ ಸಹಾಯ ಮಾಡುವ ನೆಪದಲ್ಲಿ ಹಣಕ್ಕೆ ಬೇಡಿಕೆ ಇಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇಲಾಖೆಯು ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ವಾಣಿಜ್ಯ ತೆರಿಗೆ ಇಲಾಖೆ ಬದ್ಧವಾಗಿರುತ್ತದೆ ಎಂದಿದೆ.

ವ್ಯಾಪಾರಸ್ಥರು ಇಂತಹ ಪ್ರಕರಣಗಳನ್ನು ತಕ್ಷಣ ವಾಣಿಜ್ಯ ತೆರಿಗೆ ಇಲಾಖೆಯ ಗಮನಕ್ಕೆ ತರಲು ಸಹಾಯವಾಣಿ ಸಂಖ್ಯೆ– 1800 425 6300 (ಸಮಯ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ರಜಾದಿನಗಳನ್ನು ಹೊರತುಪಡಿಸಿ) ಸಂಪರ್ಕಿಸುವಂತೆ ಬೆಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆ ಕೇಂದ್ರ ಕಚೇರಿ–1ರ ಅಪರ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯ ಉಚಿತ ತಪಾಸಣೆ

ಮೈಸೂರು, ಜು.19– ಮೈಸೂರಿನ ದಟ್ಟಗಳ್ಳಿ ಮೂರನೇ ಹಂತ, ನೇತಾಜಿ ವೃತ್ತದ ಬಳಿ ಇರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಭಾನುವಾರ(ಜು.20) ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕೀಲುಗಳ ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸಂಧಿವಾತ, ಕೆಳಬೆನ್ನು ನೋವು, ಹಿಮ್ಮಡಿ ನೋವು, ಗರ್ಭಕಂಠ, ಸೊಂಟ ನೋವು ಇನ್ನಿತರ ಸಮಸ್ಯೆಗಳಿರುವ ಯಾವುದೇ ವಯಸ್ಸಿನವರು ಶಿಬಿರದ ಪ್ರಯೋಜನ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 8277888527/525 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೆಬಿಜಿಯವರಿಗೆ ಶ್ರದ್ಧಾಂಜಲಿ



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಮೈಸೂರಿನ ಪತ್ರಿಕಾ ವಿತರಕರ ಸಂಘದ ವತಿಯಿಂದ ಚಿಕ್ಕ ಗಡಿಯಾರ ಮುಂಭಾಗ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಪ್ರಸರಣ ವಿಭಾಗದ ಮುಖ್ಯಸ್ಥರಾದ ಟಿ.ಎಸ್.ಗೋಪಿನಾಥ್, ವಿತರಕರಾದ ಬಿ.ಸುರೇಶ್, ಜೆ.ನಾಗೇಶ್ ಮೂರ್ತಿ, ಸುಂದರ್, ಪಿ.ಸುರೇಶ್, ಹೋಮದೇವ್, ಬಾಬು, ಜೆ.ಯೋಗೇಶ್, ಎ.ರವಿ, ಎಂ.ನಾಗರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವೈದ್ಯರಂತೆ ಶುಶ್ರೂಷಕರ ಸೇವೆಯೂ ಪ್ರಮುಖ

ಡಾ.ಎಲಿಜಬೆತ್ ವರ್ಕಿ ಅಭಿಪ್ರಾಯ



ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ನರ್ಸಿಂಗ್ ಕಾಲೇಜು ವತಿಯಿಂದ ಆಯೋಜಿಸಿದ್ದ ಬೇಸಿಕ್ ಬಿಎಸ್ಸಿ ನರ್ಸಿಂಗ್‌ನ 28ನೇ ಬ್ಯಾಚ್ ವಿದ್ಯಾರ್ಥಿಗಳ ಸಮರ್ಪಣಾ ಸಮಾರಂಭದಲ್ಲಿ ಕೇರಳದ ಬೇಬಿ ಮೆಮೊರಿಯಲ್ ಆಸ್ಪತ್ರೆಯ ಶುಶ್ರೂಷ ಸೇವೆಗಳ ವಿಭಾಗದ ಮುಖ್ಯಸ್ಥರಾದ ಡಾ.ಎಲಿಜಬೆತ್ ವರ್ಕಿ ಪಾಲ್ಗೊಂಡಿದ್ದರು.

ಮೈಸೂರು, ಜು.19(ಜಿಎ)– ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರ ವಿಸ್ತಾರವಾಗುತ್ತಿರುವುದರಿಂದ, ಜಾಗತಿಕವಾಗಿ ನರ್ಸಿಂಗ್ ವಿದ್ಯಾರ್ಥಿಗಳು ಬೇಡಿಕೆಯು ಹೆಚ್ಚಾಗುತ್ತಿದೆ. ರೋಗಿಗಳಿಗೆ ವೈದ್ಯರಂತೆ ಶುಶ್ರೂಷಕರು ಕೂಡ ಸೇವೆ ಸಲ್ಲಿಸಿ, ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಕೇರಳದ ಬೇಬಿ ಮೆಮೊರಿಯಲ್ ಆಸ್ಪತ್ರೆಯ ಶುಶ್ರೂಷ ಸೇವೆಗಳ ವಿಭಾಗದ ಮುಖ್ಯಸ್ಥರಾದ ಡಾ.ಎಲಿಜಬೆತ್ ವರ್ಕಿ ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ನರ್ಸಿಂಗ್ ಕಾಲೇಜು ವತಿಯಿಂದ ಆಯೋಜಿಸಿದ್ದ ಬೇಸಿಕ್ ಬಿಎಸ್ಸಿ ನರ್ಸಿಂಗ್‌ನ 28ನೇ ಬ್ಯಾಚ್ ವಿದ್ಯಾರ್ಥಿಗಳ ಸಮರ್ಪಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೋಗಿಗಳ ಆರೈಕೆ, ಆರೋಗ್ಯ, ಶಿಕ್ಷಣ ಮತ್ತು ಸಮುದಾಯದ ಯೋಗಕ್ಷೇಮದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರೆ, ವಯಸ್ಸಾದವರ ಜನಸಂಖ್ಯೆ, ದೀರ್ಘಕಾಲದ ಕಾಯಿಲೆಗಳ ಹೆಚ್ಚಳ ಮತ್ತು ಕೋವಿಡ್ –19 ಸಾಂಕ್ರಾಮಿಕ ರೋಗದಂತಹ ಜಾಗತಿಕ ಆರೋಗ್ಯ ಬಿಕ್ಕಟ್ಟಿನಿಂದ ಅರ್ಹ ಶುಶ್ರೂಷಕರ ಕೊರತೆಯನ್ನು ಎದುರಿಸುತ್ತಿದೆ ಎಂದು ಹೇಳಿದರು.

ನರ್ಸಿಂಗ್ ವಿದ್ಯಾರ್ಥಿಗಳು ಶಿಕ್ಷಣ ಮುಗಿದ ನಂತರ, ಸಹಾನುಭೂತಿ, ಬದ್ಧತೆ ಮತ್ತು ವೃತ್ತಿಪರತೆಯಿಂದ ಕರ್ತವ್ಯ ನಿರ್ವಹಿಸಬೇಕು.ಜಗತ್ತಿಗೆ ನುರಿತ ಮತ್ತು ಸಮರ್ಪಿತ ದಾದಿಯರ ತುರ್ತು ಅಗತ್ಯವಿದೆ. ನರ್ಸಿಂಗ್ ವಿದ್ಯಾರ್ಥಿಗಳು ಹಾಕುತ್ತಿರುವ ಹೆಜ್ಜೆ ಉದಾತ್ತ ಜವಾಬ್ದಾರಿ ಮತ್ತು ಜಾಗತಿಕ ಆರೋಗ್ಯ ರಕ್ಷಣೆಯ ಭವಿಷ್ಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು, ಆಸ್ಪತ್ರೆಯ ಶುಶ್ರೂಷ ಸೇವೆಗಳ ವಿಭಾಗದ ಮುಖ್ಯಸ್ಥೆ ಜಾನೆಟ್ ಮಥಿಯಾಸ್ ಮತ್ತಿತರರು ಉಪಸ್ಥಿತರಿದ್ದರು.

ಗುರುವಿನ ಆಶೀರ್ವಾದದಿಂದಷ್ಟೇ ಉನ್ನತ ಸ್ಥಾನಕ್ಕೇರಲು ಸಾಧ್ಯ



ಹಿರಿಯ ಅಥ್ಲೇಟಿಕ್ ತರಬೇತುದಾರರಾದ ಜಿ.ಆರ್.ಪ್ರಭಾಕರ್ ಮತ್ತು ಎನ್.ಜೀವೇಂದ್ರ ಕುಮಾರ್ ಅವರನ್ನು ಗೌರವಿಸಲಾಯಿತು.

ಮೈಸೂರು, ಜು.19(ವಿವಿಹೆಚ್)– ಗುರಿ, ಛಲ, ಗುರುವಿನ ಆಶೀರ್ವಾದ ಇದ್ದರೇ ಮಾತ್ರ ಜೀವನದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಲು ಸಾಧ್ಯವಾಗುತ್ತದೆ ಎಂದು ರಮೇಶ್ ಶೆಟ್ಟಿ ಹೇಳಿದರು.

ಸುವರ್ಣ ಬೆಳಕು ಫೌಂಡೇಶನ್ ಹಾಗೂ ಹಿಮಾಲಯ ಪ್ರತಿಷ್ಠಾನ ವತಿಯಿಂದ ನಗರದ ನಮೋ ಯೋಗ ಭವನದಲ್ಲಿ ಶನಿವಾರ ನಡೆದ ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಳಿಕ ಹಿರಿಯ ಅಥ್ಲೆಟಿಕ್ ತರಬೇತುದಾರರಾದ ಜಿ.ಆರ್.ಪ್ರಭಾಕರ್ ಮತ್ತು ಎನ್.ಜೀವೇಂದ್ರ ಕುಮಾರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಕ್ರೀಡಾಪಟು ಕೆ.ಟಿ.ಬಲರಾಮೇಗೌಡ, ಕೆಂಪಲಿಂಗರಾಜು, ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಅನಂತ್, ಬೆಳಕು ಫೌಂಡೇಶನ್‌ನ ಮಹೇಶ್, ಎಸ್.ಹರ್ಷವರ್ಧನ್, ನಾಗೇಂದ್ರ ಬಾಬು, ದೇವರಾಜು, ನಾಗೇಂದ್ರ, ಆರಾಧ್ಯ ಭಾಗಿಯಾಗಿದ್ದರು.

ಬೆಂಗಳೂರು 5 ಭಾಗಗಳಾಗಿ ವಿಭಜನೆ, ಗ್ರೇಟರ್ ಬೆಂಗಳೂರು ಅಸ್ತಿತ್ವಕ್ಕೆ

ರಾಜ್ಯ ಸರ್ಕಾರದಿಂದ ಅಧಿಸೂಚನೆ

ಬೆಂಗಳೂರು, ಜು.19– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಐದು ಪಾಲಿಕೆಗಳಾಗಿ ವಿಭಜನೆಯಾಗಲಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬರಲಿದೆ. ಈ ಬಗ್ಗೆ ರಾಜ್ಯ ಸರ್ಕಾರ ರಾಜ್ಯ ಪತ್ರದಲ್ಲಿ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಈ ಬಾರಿಯ ಮಳೆಗಾಲದ ಅಧಿವೇಶನದಲ್ಲಿ ಗ್ರೇಟರ್ ಬೆಂಗಳೂರು ಬಿಲ್ ಪಾಸ್ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.


ಬೆಂಗಳೂರು ಪೂರ್ವ ನಗರಪಾಲಿಕೆ, ಬೆಂಗಳೂರು ಪಶ್ಚಿಮ ನಗರಪಾಲಿಕೆ, ಬೆಂಗಳೂರು ಉತ್ತರ ನಗರಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹಾಗೂ ಬೆಂಗಳೂರು ಕೇಂದ್ರ ನಗರಪಾಲಿಕೆಗಳಾಗಿ 5 ಪಾಲಿಕೆಗಳು ಅಸ್ತಿತ್ವಕ್ಕೆ ಬರಲಿವೆ. ಈ ಬಗ್ಗೆ ರಾಜ್ಯ ಸರ್ಕಾರ ರಾಜ್ಯಪತ್ರ ಹೊರಡಿಸಿದ್ದು, ಐದು ಪಾಲಿಕೆಗಳ ನಡುವಿನ ಗಡಿಗಳನ್ನು ನಿರ್ಧರಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂದರೆ ಬಿಬಿಎಂಪಿ ತನ್ನ ಅಸ್ತಿತ್ವ ಕಳೆದುಕೊಳ್ಳಲಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಂದರೆ ಜಿಬಿಎ ಅಸ್ತಿತ್ವಕ್ಕೆ ಬರಲಿದೆ. ಮುಂದಿನ ತಿಂಗಳು ಆ.11ರಂದು ಮಳೆಗಾಲದ ಅಧಿವೇಶನ ನಡೆಯಲಿದ್ದು, ಜಿಬಿಎ ಬಿಲ್ ಮಂಡನೆಗೆ ಸರ್ಕಾರ ನಿರ್ಧರಿಸಿದೆ. ಅಧಿವೇಶನದಲ್ಲಿ ಐದು ಮಹಾ ನಗರ ಪಾಲಿಕೆಗಳ ವಿಚಾರ ಚರ್ಚಿಸಲು ನಿರ್ಧರಿಸಿದ್ದು, ಅಧಿವೇಶನದಲ್ಲಿ ಬಿಲ್ ಪಾಸ್ ಮಾಡಲು ರಾಜ್ಯ ಸರ್ಕಾರದಿಂದ ತಯಾರಿ ಮಾಡಿಕೊಳ್ಳಲಾಗಿದೆ. ವಿಭಾಗಗಳ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಸಲಹೆ ನೀಡಲು ಪಾಲಿಕೆ ಸೂಚನೆ ನೀಡಿದೆ. ಸಾರ್ವಜನಿಕರ ಸಲಹೆ ಪಡೆಯುವಂತೆ ಬಿಬಿಎಂಪಿಗೆ ಸೂಚನೆ ನೀಡಿದೆ.

14 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ವ್ಯಾಕ್ಸಿನ್

ಬೆಂಗಳೂರು, ಜು.19– 14 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ವ್ಯಾಕ್ಸಿನ್ ನೀಡಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ. ಗರ್ಭಕಂಠದ ಕ್ಯಾನ್ಸರ್ ತಡೆಯಲು 14 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ವ್ಯಾಕ್ಸಿನ್ ನೀಡಲು ನಿರ್ಧರಿಸಿದ್ದು, ಗಣಿಬಾಧಿತ ಮತ್ತು ಕಲ್ಯಾಣ ಕರ್ನಾಟಕದ 20 ತಾಲೂಕುಗಳಲ್ಲಿ ಪ್ರಾಯೋಗಿಕವಾಗಿ ವ್ಯಾಕ್ಸಿನ್ ನೀಡಲು ನಿರ್ಧಾರ ಮಾಡಲಾಗಿದೆ.

ಗಣಿಗಾರಿಕೆಯಿಂದ ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿತ್ತು. 9 ಕೋಟಿ ವೆಚ್ಚದಲ್ಲಿ ಹೆಚ್‌ಪಿವಿ ವ್ಯಾಕ್ಸಿನ್ ನೀಡಲು ನಿರ್ಧರಿಸಲಾಗಿದೆ. ತುಮಕೂರು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಜಿಲ್ಲೆಗಳ 20 ತಾಲೂಕುಗಳಲ್ಲಿ 14 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ವ್ಯಾಕ್ಸಿನ್ ನೀಡುವಂತೆ ಸೂಚನೆ ನೀಡಲಾಗಿದೆ.



5ನೇ ವರ್ಷದ ಪುಣ್ಯಸ್ಮರಣೆ



ಪುಟ್ಟರಂಗಸ್ವಾಮಿ .ಡಿ
ನಿಧನ : 20-07-2020
(ನಿವೃತ್ತ ಡಿಪೋ ಮ್ಯಾನೇಜರ್, ಕೆ.ಎಸ್.ಆರ್.ಟಿ.ಸಿ.)
ಸದಾ ನೀವು ತೋರಿಸಿಕೊಟ್ಟ ಮಾರ್ಗದರ್ಶನದಲ್ಲೇ ನಡೆಯುತ್ತಿರುವ ಧರ್ಮಪತ್ನಿ ನಿರ್ಮಲಕುಮಾರಿ ಮಕ್ಕಳು: ಡಾ|| ಆಶಾ ಪಿ.–ಡಾ|| ಹರ್ಷವರ್ಧನ್, ದೀಪಕ್‌ಪಿ.–ನಿಖಿತ, ಮೊಮ್ಮಕ್ಕಳು : ಅರ್ಣವ್, ಆನ್ಯ ಕುಟುಂಬವರ್ಗ ಹಾಗೂ ಬಂಧು–ಮಿತ್ರರು ಮಲ್ಲಿಗೆಹಳ್ಳಿ, ಯಳಂದೂರು ತಾಲ್ಲೂಕು.

7ನೇ ವರ್ಷದ ಪುಣ್ಯಸ್ಮರಣೆ



ಪಿ.ಶಿವರುದ್ರಪ್ಪ
(ಮಾ|| ಮಂಜುಳ ಧ್ವನಿ ಮತ್ತು ಬೆಳಕು, ಫರ್ನಿಚರ್ಸ್)
ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಂಜುಳ ಧ್ವನಿ ಮತ್ತು ಬೆಳಕು, #100 ಅಡಿ ರಸ್ತೆ, ನೇತಾಜಿ ಸರ್ಕಲ್, ದಟ್ಟಗಳ್ಳಿ ಹಾಗೂ ಕುಟುಂಬವರ್ಗದವರು.

7ನೇ ವರ್ಷದ ಪುಣ್ಯಸ್ಮರಣೆ



ದಿ|| ಡಿ.ರಾಮಣ್ಣನವರು (ರಾಮು)
ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು : ಪತ್ನಿ ದಿ|| ಚಂದ್ರಮ್ಮ, ಮಕ್ಕಳು, ಸೊಸೆಯಂದಿರು ಅಳಿಯಂದಿರು ಮತ್ತು ಮೊಮ್ಮಕ್ಕಳು, ದೇವರಾಜ ಮೊಹಲ್ಲಾ, ಮೈಸೂರು

2ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿದೆ
ದುಃಖತಪ್ತರು: ನಂಜಪ್ಪ ನಾಗರತ್ನ ಮತ್ತು ಕುಟುಂಬ ವರ್ಗ, ಬೇವಿನ ಮರದ ಹಟ್ಟಿ, ಹೂವಿನ ಬೀದಿ, ಮೂಗೂರು ತಿ.ನರಸೀಪುರ ತಾ||
ಯಜಮಾನ್ ಶ್ರೀ ಮಹದೇವನಾಯ್ಕ
ನಿಧನ: 20.07.2023

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಸಿದ್ಧಾರ್ಥನಗರ, ನಜರ್‌ಬಾದ್ ಮೊಹಲ್ಲಾ, ನಿಖಿತ ಬೋಜೇಗೌಡ ಛತ್ರ, ಕೆ.ಸಿ. ಬಡಾವಣೆಯ ಮನೆ ನಂ. 56/2ರಲ್ಲಿ ವಾಸವಾಗಿರುವ ಲೇಟ್ ಕೆ.ಆರ್.ಪರಶುರಾಮ್‌ರಾವ್ ರವರ ಮಗನಾದ ಡಾ.ಪಿ.ನಾಗೇಶ್‌ರಾವ್ ಹಾಗೂ ಇವರ ಧರ್ಮಪತ್ನಿ ಶ್ರೀಮತಿ ವಿ.ಕೆ ಜಮುನ ಮತ್ತು ಮೈಸೂರು ಸಿಟಿ, ವಿಜಯನಗರ 3ನೇ ಹಂತ, 18ನೇ ಮೇನ್, 'ಶ್ರೀ' ಮನೆ ನಂ. 305ರ ಎಂಬ ನಾಮಾಂಕಿತ ಮನೆಯಲ್ಲಿ ವಾಸವಾಗಿರುವ ಡಾ.ಆರ್.ಎಸ್.ಉಮಾಕಾಂತರವರ ಧರ್ಮಪತ್ನಿಯಾದ ಶ್ರೀಮತಿ ಉಮಾ.ವಿ.ಈ ರವರುಗಳ ಇರಾದೆಯ ಮೇರೆಗೆ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಕೇರಳ ರಾಜ್ಯ, ತಿರುವನಂತಪುರಂ ಜಿಲ್ಲೆ, ನಯಾಟಿಂಕರ ತಾಲ್ಲೂಕು, ಮಾರನಲ್ಲೂರು ಗ್ರಾಮ, ನಡುವೀಡ್ ಹೌಸನಲ್ಲಿ ವಾಸವಾಗಿರುವ ಅಚ್ಚುತ್ ನಾಯರ್ ರವರ ಮಗನಾದ ಜಯಪ್ರಕಾಶ್ ರವರಿಂದ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಕ್ರಯಪತ್ರ ಬರೆಸಿಕೊಂಡು ನೋಂದಣಿ ಮಾಡಿಕೊಳ್ಳಲು ಸಿದ್ಧರಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಭಾದ್ಯತೆ, ವ್ಯಾಜ್ಯ, ಇದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ 7 ದಿನಗಳೊಳಗಾಗಿ ತಮ್ಮ ತಕರಾರನ್ನು ಲಿಖಿತ ಮೂಲಕ ಅಥವಾ ನಿಮ್ಮಲ್ಲಿರುವ ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳೊಡನೆ ನಮ್ಮ ವಿಳಾಸಕ್ಕೆ ತಿಳಿಯಪಡಿಸತಕ್ಕದ್ದು. ನಂತರ ಬರುವ ತಕರಾರು ನಮ್ಮ ಕಕ್ಷಿದಾರರನ್ನು ಯಾವುದೇ ರೀತಿಯಿಂದಲೂ ಬದ್ಧಪಡಿಸುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಂದೇಗಾಲ ಗ್ರಾಮದ ಸರ್ವೆ ನಂ. 57/1 ರ ವಿಸ್ತೀರ್ಣ 2 ಎಕರೆ 37 ಗುಂಟೆ ಖುಷ್ಕೀ ಜಮೀನು ಇದಕ್ಕೆ ಚಕ್ಕುಬಂದಿ:–
ಪೂರ್ವಕ್ಕೆ : ಲಾ.ಸ ನಂ 56 [ಪರಮೇಶ್ವರಪ್ಪರವರ ಜಮೀನು], ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಬ್ಲಾಕ್–2 ಪುಷ್ಪಲತಾ ರವರ ಜಮೀನು.

ದಿನಾಂಕ: 19–07–025

Sd/- J. SURESHA B.Com., LL.B.,
ADVOCATE, KAR 155/1993
#1, 1st Cross, 2nd Main Jayanagara, Mysuru - 570 014
Mob: 9448322896

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಕಂಡ ಅನುಸೂಚಿ ಸ್ವತ್ತನ್ನು ಅದರ ಮಾಲೀಕರು ಎಂದು ಪ್ರತಿನಿಧಿಸುತ್ತಿರುವ ಮೈಸೂರು ನಗರ, ರಾಜೀವನಗರ 2 ನೇ ಹಂತ 2 ನೇ ಅಡ್ಡರಸ್ತೆ ಮನೆ ನಂ EWS 1157 ರಲ್ಲಿ ವಾಸವಾಗಿರುವ, ರಫೀಕ್ ರವರ ಮಗನಾದ ಜಾವಿದ ಅಬ್ಬಾ ಅಲ್ವಿ ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಈ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದ ಹಾಗೇ ಯಾರಿಗಾದರೂ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾದ್ಯತೆಗಳು ಇದ್ದಲ್ಲಿ ಸಾರ್ವಜನಿಕರು ಈ ಸಾರ್ವಜನಿಕ ಪ್ರಕಟಣೆ ನೀಡಿದ ಹದಿನೈದು (15) ದಿನಗಳ ಒಳಗಾಗಿ ಈ ಕೆಳಕಾಣಿಸಿರುವ ವಕೀಲರ ಕಛೇರಿಗೆ ಅಂತಹ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾದ್ಯತೆಗಳನ್ನು ಪ್ರತಿಪಾದಿಸುವಂತಹ ದಾಖಲೆ ಸಮೇತವಾಗಿ ಲಿಖಿತವಾಗಿ ಹಾಗೂ ಖುದ್ದಾಗಿ ಸಂಪರ್ಕಿಸತಕ್ಕದ್ದು.

ಈ ಹದಿನೈದು ದಿನಗಳ ಒಳಗಾಗಿ ಅಂತಹ ಯಾವುದೇ ರೀತಿಯಾದ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾದ್ಯತೆಗಳನ್ನು ಪ್ರತಿಪಾದಿಸುವಂತಹ ಯಾವುದೇ ರೀತಿಯಾದಂತಹ ಹೇಳಿಕೆ ಅಥವಾ ದಾಖಲಾತಿಗಳು ಎದುರು ಬರದ ಪಕ್ಷದಲ್ಲಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಾರ್ವಜನಿಕರಿಂದ ಅಂತಹ ಯಾವುದೇ ರೀತಿಯಾದ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ತೆರಹದ ರೀತಿಯಾದ ಹಕ್ಕು ಮತ್ತು ಬಾದ್ಯತೆಗಳು ಇರುವುದಿಲ್ಲವೆಂದು ತಿಳಿದುಕೊಂಡು ನನ್ನ ಕಕ್ಷಿದಾರರು ಈ ಕೆಳಕಂಡ ಸ್ವತ್ತನ್ನು ಅದರ ಮೇಲ್ಕಾಣಿಸಿರುವ ಮಾಲೀಕರಿಂದ ಶುದ್ಧ ಕ್ರಯ ಪತ್ರವನ್ನು ಮಾಡಿಸಿಕೊಂಡು ಖಾತೆ ವರ್ಗಾಯಿಸಿಕೊಳ್ಳಲು ಮುಂದಾಗುತ್ತಾರೆ. ಈ ಸಾರ್ವಜನಿಕ ಪ್ರಕಟಣೆಯ ಹದಿನೈದು ದಿನಗಳ ನಂತರ ಬಂದಂತಹ ಯಾವುದೇ ತಂಟೆ ತಕರಾರುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಅನುಸೂಚಿ ಸ್ವತ್ತು

ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಹಂಗರಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 197/1 ರ ಖುಷ್ಕಿ ವಿಸ್ತೀರ್ಣ 1 ಎಕರೆ 20ಗುಂಟೆ ಗೆ ಸೇರಿದ ಜಮೀನಿನ ಚೆಕ್ಕು ಬಂದಿ ಈ ಮುಂದಿನಂತಿದೆ ಎಂದರೆ:– ಪೂರ್ವಕ್ಕೆ: ಸರ್ವೆ ನಂ 185 ರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ 198ರ ಜಮೀನು, ಉತ್ತರಕ್ಕೆ : ಸರ್ವೆ ನಂ 185 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ 197/2 ರ ಜಮೀನು.

ಸ್ಥಳ: ಮೈಸೂರು
ದಿ: 19–07–2025

Sd/- N.K. SOMANNA B.A.L., LL.B.,
Advocate
#35, Kuvempu Trust Building, Kalidasa Road, Jayalakshmipuram, Mysore-12, Mob: 9986685754

ಪುರಸಭೆ ಕಾರ್ಯಾಲಯ, ವಿರಾಜಪೇಟೆ

ಕೊಡಗು ಜಿಲ್ಲೆ – 571218
ದೂರವಾಣಿ ಸಂಖ್ಯೆ :– 08274-257332
ಇ–ಮೇಲ್: : itstaff_ulb_virajpet@yahoo.com
ವೆಬ್‌ಸೈಟ್ : www.virajpettown.mrc.gov.in
ಸುಂದರ ವಿರಾಜಪೇಟೆ ಸ್ವಚ್ಛ ಪಟ್ಟಣ

ಕ್ರ.ಸಂ.ನಂ.ಪು.ವಿ/ಎಸ್.ಎಫ್.ಸಿ.ವಿ.ಅ/ಟೆ–03/2025–26 ದಿನಾಂಕ: 19–07–2025

"ಟೆಂಡರ್ ಪ್ರಕಟಣೆ"

(ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2024–25ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದು ಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ Iರ ನಿಯಮಗಳಿಗನುಸಾರ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದು ಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : 21/07/2025 ರಿಂದ 04/08/2025 ಸಂಜೆ 17:30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 04/08/2025 ಸಂಜೆ 17:30 ಗಂಟೆವರೆಗೆ
3. ಟೆಂಡರ್ ತೆರೆಯುವ ದಿನಾಂಕ : 05/08/2025 ಬೆಳಿಗ್ಗೆ 11.30 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್: www.virajpet-town.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/–	ಸಹಿ/–	ಸಹಿ/–	ಸಹಿ/–
(ಶ್ರೀಮತಿ, ಎಂ.ಕೆ ದೇಚಮ್ಮನವರ)	(ಶ್ರೀಮತಿ. ಫಸಿಹಾ ತಬಸುಮ್)	(ಶ್ರೀ ಎಂ.ಕೆ ಅಬ್ದುಲ್ ಜಲೀಲ್)	(ಶ್ರೀ ನಾಚಪ್ಪ ಪಿ.ಕೆ)
ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಉಪಾಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ಕರ್ನಾಟಕ ಸರ್ಕಾರ

ಆಡಳಿತ ತರಬೇತಿ ಸಂಸ್ಥೆ

ಲಲಿತ ಮಹಲ್ ರಸ್ತೆ, ಮೈಸೂರು–570011

ಸಂಖ್ಯೆ: ATI/20/COMP/CR/2022-COMP-ATI ದಿನಾಂಕ: 19.07.2025

ಟೆಂಡರ್ ಪ್ರಕಟಣೆ

ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು ಇಲ್ಲಿಗೆ ಯು.ಪಿಎಸ್ ಮತ್ತು ಬ್ಯಾಟರಿಗಳನ್ನು ಸರಬರಾಜು ಮಾಡಿ ಅಳವಡಿಸಲು ಟೆಂಡರ್ ಆಹ್ವಾನಿಸಿದ್ದು, ನೋಂದಾಯಿತ, ಅರ್ಹ, ಉತ್ತಮ ಸೇವೆ ಒದಗಿಸುವ ಆಸಕ್ತ ಟೆಂಡರ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ **Website:htpp://kppp.karnataka.gov.in** ಮೂಲಕ ತಮ್ಮ ಬಿಡ್ಡನ್ನು ನಿಯಮಾನುಸಾರ ಅನ್ಲೈನ್ ಮೂಲಕ ಸಲ್ಲಿಸಬಹುದು.

ಕ್ರ.ಸಂ	ಸೇವಾ ವಿವರ	ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ
1	ಆಡಳಿತ ತರಬೇತಿ ಸಂಸ್ಥೆಗೆ ಯು.ಪಿಎಸ್ ಮತ್ತು ಬ್ಯಾಟರಿಗಳನ್ನು ಸರಬರಾಜು ಮಾಡಿ ಅಳವಡಿಸಲು	ರೂ. 5,70,675/–	ರೂ. 11,414/–

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ **ದಿನಾಂಕ 21.07.2025 ಬೆಳಗ್ಗೆ 11.30** ರಿಂದ ವೀಕ್ಷಿಸಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:05.08.2025 ಸಂಜೆ 05.30 ಘಂಟೆವರೆಗೆ** ಟೆಂಡರ್ ತೆರೆಯುವ **ದಿನಾಂಕ:07.08.2025 ರ ಬೆಳಗ್ಗೆ 11.30 ಘಂಟೆಗೆ**. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/–
ಜಂಟಿ ನಿರ್ದೇಶಕರು (ಆಡಳಿತ)

ವಾಸಾಸಂಇ/ಮೈಸೂರು/671/ಎಸ್‌ಎಸ್‌ಸಿ/2025–26

ಚಿಕ್ಕಮ್ಮನ ಮೇಲೆ ಹಲ್ಲೆ ನಡೆಸಿ ಪರಾರಿ



ಮಡಿಕೇರಿ/ಗೋಣಿಕೊಪ್ಪ, ಜು.19– ನಡೆದಾಡಲು ರಸ್ತೆ ವಿಚಾರವಾಗಿ ತನ್ನ ಚಿಕ್ಕಮ್ಮನನ್ನೇ ಗುದ್ದಲಿಯಿಂದ ಹೊಡೆದು ಗಾಯಗೊಳಿಸಿದ ಘಟನೆ ಪೊನ್ನಂಪೇಟೆ ತಾಲೂಕಿನ ಬೆಸಗೂರು ಗ್ರಾಮದಲ್ಲಿ ನಡೆದಿದೆ. ಅರಮಣಮಾಡ ಬಾಗು(56) ಎಂಬುವರೇ ಹಲ್ಲೆಗೊಳಗಾದ ಮಹಿಳೆಯಾಗಿದ್ದು, ಅರಮಣಮಾಡ ಸಚಿನ್(42) ಎಂಬಾತ ಹಲ್ಲೆ ಮಾಡಿ ಪರಾರಿಯಾಗಿದ್ದಾನೆ.

ಅರಮಣಮಾಡ ಬಾಗು ಮತ್ತು ಅವರ ಪತಿಯ ಅಣ್ಣನ ಮಗ ಸಚಿನ್ ನಡುವೆ ಗದ್ದೆ ರಸ್ತೆಯಲ್ಲಿ ಓಡಾಡುವ ವಿಚಾರವಾಗಿ ವೈಷಮ್ಯ ಇತ್ತು ಎನ್ನಲಾಗಿದೆ ಇದೇ ವಿಚಾರವಾಗಿ ನಿನ್ನೆ ಬಾಗು ಅವರ ಪತಿಯ ಅಣ್ಣನ ಪುತ್ರ ಸಚಿನ್ ನಡುವೆ ಜಗಳವಾಗಿದ್ದು, ಚಿಕ್ಕಮ್ಮ ಬಾಗು ಅವರ ಎದೆ ಮೇಲೆ ಕುಳಿತು ಗುದ್ದಲಿಯಿಂದ ಹಲ್ಲೆ ಮಾಡಿ, ತಲೆ, ಕೈ–ಕಾಲುಗಳಿಗೆ ಗಾಯಗಳಾಗಿದ್ದು ಘಟನೆ ಬಳಿಕ ಆರೋಪಿ ಪರಾರಿಯಾಗಿದ್ದಾನೆ. ಈಕೆಯ ಪುತ್ರ ಭಾರತೀಯ ಸೇನೆಯಲ್ಲಿದ್ದು, ಬೆಂಗಳೂರು ಸೇನಾ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ, ಈ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಮಳೆ ಕಡಿಮೆ ಎಂದು ಮೈಮರೆಯಬೇಡಿ:ಡಿಸಿ

ಮಡಿಕೇರಿ, ಜು.19–ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿದೆ ಎಂದು ಮೈಮರೆಯದೆ ಆಗಸ್ಟ್ ಅಂತ್ಯದವರೆಗೂ ಮುನ್ನೆಚ್ಚರ ವಹಿಸುವಂತೆ ನೋಡಲ್ ಅಧಿಕಾರಿಗಳು ಹಾಗೂ ವಿವಿಧ ಹಂತದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಆದೇಶ ನೀಡಿದ್ದಾರೆ.

ಪ್ರಸಕ್ತ ವರ್ಷ ಮೇ ಕೊನೆ ವಾರ ಹಾಗೂ ಜೂನ್ ತಿಂಗಳಲ್ಲಿ ಹೆಚ್ಚಿನ ಮಳೆಯಾಗಿದ್ದು, ಜುಲೈನಲ್ಲಿ ಸಾಧಾರಣಾ ಮಳೆಯಾಗಿದೆ. ಆ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಯಾರೂ ಸಹ ಉದಾಸೀನತೆ ತೋರದೆ ತಮ್ಮ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು ಎಂದು ಅವರು ವಿಡಿಯೋ ಸಂವಾದ ಮೂಲಕ ಎಚ್ಚರಿಸಿದರು.

ಅಂಗನವಾಡಿ, ಶಾಲಾ ಕಟ್ಟಡಗಳು, ಕಾಲೇಜು ಕಟ್ಟಡಗಳ ಬಗ್ಗೆ ಹೆಚ್ಚಿನ ನಿಗಾವಹಿಸಬೇಕು. ಮರ ಬಿದ್ದು ಸರ್ಕಾರಿ ಕಟ್ಟಡಗಳಿಗೆ ಹಾನಿ ಉಂಟಾಗದಂತೆ ಗಮನಹರಿಸಬೇಕು. ಬೀಳುವ ಹಂತದ ಮರ ಇದ್ದಲ್ಲಿ ಅರಣ್ಯ ಇಲಾಖೆಗೆ ಮುಂಚಿತವಾಗಿ ಮಾಹಿತಿ ನೀಡುವಂತಾಗಬೇಕು ಮಳೆ ಕಡಿಮೆ ಇದೆ ಎಂದು ಭಾವಿಸಬಾರದು. ಭಾರತೀಯ ಹವಾಮಾನ ಇಲಾಖೆ ಕಾಲ ಕಾಲಕ್ಕೆ ಮಾಹಿತಿ ನೀಡಲಿದೆ ಎಂದರು.



ವೆಂಕಟ್‌ರಾಜಾ

ಲೋಕೋಪಯೋಗಿ ಮತ್ತು ಪಂಚಾಯತ್ ರಾಜ್ ಇಲಾಖೆ ಎಂಜಿನಿಯರ್‌ಗಳು ರಸ್ತೆ ಗುಂಡಿ ಮುಚ್ಚುವ ಕೆಲಸ ಮಾಡಬೇಕು. ಆಯಾಯ ಸ್ಥಳೀಯ ವ್ಯಾಪ್ತಿಯಲ್ಲಿ ಮಳೆ ಹಾನಿ ಸಂಬಂಧ ತಹಶೀಲ್ದಾರರಿಗೆ ಮಾಹಿತಿ ನೀಡುವಂತಾಗಬೇಕು. ಜೊತೆಗೆ ತಹಶೀಲ್ದಾರರು ಸಹ ಸ್ಥಳ ಪರಿಶೀಲಿಸಬೇಕು ಎಂದು ಸೂಚಿಸಿದರು.

ಆನೆಚೌಕೂರು, ಮಾಲ್ದಾರೆ ಸೇರಿದಂತೆ ವಿವಿಧ ಕಡೆಗಳಲ್ಲಿ ಅರಣ್ಯ ಚೆಕ್‌ಪೋಸ್ಟ್‌ನ್ನು ತೆರೆಯುವಂತಾಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹೇಳಿ ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸ್ ಇಲಾಖೆಯವರು ಇದ್ದು, ಅರಣ್ಯ ಇಲಾಖೆಯವರು ಸಹ ಚೆಕ್‌ಪೋಸ್ಟ್ ಆರಂಭಿಸಿದರೆ, ಸಹಕಾರಿ ಆಗಲಿದೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಎಂಜಿನಿಯರ್‌ಗಳು ಹೆಚ್ಚುವರಿ ಕಂಬಗಳನ್ನು ಅಳವಡಿಸುವುದು, ವಿದ್ಯುತ್ ಪರಿವರ್ತಕಗಳನ್ನು ಅಗತ್ಯವಿರುವ ಕಡೆ ಅಳವಡಿಸುವ ಕಡೆ ಗಮನಹರಿಸಬೇಕು ಎಂದು ಹೇಳಿದರು. ವಿಡಿಯೋ ಸಂವಾದದಲ್ಲಿ ತಹಶೀಲ್ದಾರರು, ತಾ.ಪಂ.ಇಒಗಳು, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಸೆಸ್ಕ್ ಎಂಜಿನಿಯರ್ ರಾಮಚಂದ್ರ, ವಿವಿಧ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಮಾದಾಪುರದಲ್ಲಿ ಸಿಎನ್‌ಸಿಯಿಂದ ಮಾನವ ಸರಪಳಿ ಜನಜಾಗೃತಿ

ಮಡಿಕೇರಿ,ಜು.19–ರಾಷ್ಟ್ರೀಯ ಜನಗಣತಿಯೊಂದಿಗೆ ಜನಾಂಗವಾರು ಮಾಹಿತಿ ಕಲೆಹಾಕುವ ಸಂದರ್ಭ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಾದಾಪುರದಲ್ಲಿ 8ನೇ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ ಕೊಡವಲ್ಯಾಂಡ್‌ಗೆ ಮಾರಕವಾಗಿರುವ ಭೂಪರಿವರ್ತನೆಯನ್ನು ತಕ್ಷಣ ನಿಲ್ಲಿಸಬೇಕೆಂದು ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ, ಸ್ವಯಂ ಆಡಳಿತ, ಆಂತರಿಕ ಸ್ವಯಂ ನಿರ್ಣಯ ಹಕ್ಕು ಮತ್ತು ಎಸ್‌ಟಿ ವರ್ಗೀಕರಣವು ಸೇರಿದಂತೆ 2026ರ ರಾಷ್ಟ್ರೀಯ ಜನಗಣತಿಯೊಂದಿಗೆ ಜನಾಂಗವಾರು ಮಾಹಿತಿ ಕಲೆಹಾಕುವ ಸಂದರ್ಭ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕು ಎಂದು ಆಗ್ರಹಿಸಿದರು. ಜನಗಣತಿಯ ಸಂದರ್ಭ ಪ್ರತ್ಯೇಕ ಕಾಲಮ್ ಮತ್ತು ಕೋಡ್ ಸೇರಿಸುವುದರಿಂದ ಕೊಡವ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ಸರ್ವ ಕೊಡವರು ಅರಿತುಕೊಳ್ಳ ಬೇಕು. ಕೊಡವರ ಸಾಂವಿಧಾನಿಕ ಹಕ್ಕುಗಳಿಗಾಗಿ ಸಿಎನ್‌ಸಿ ನಡೆಸುವ ಶಾಂತಿಯುತ ಹೋರಾಟಕ್ಕೆ ಕೈಜೋಡಿಸಬೇಕೆಂದು ಕರೆ ನೀಡಿದರು.

2018ರಲ್ಲಿ ಕೊಡವಲ್ಯಾಂಡ್‌ನಲ್ಲಿ ವ್ಯಾಪಕ ಜಲಸ್ಫೋಟ ಮತ್ತು ಭೂಸ್ಫೋಟ ಸಂಭವಿಸಿ ಸಾವುನೋವು, ಕಷ್ಟನಷ್ಟಗಳು ಎದುರಾಗಿದ್ದರೂ ಜಿಲ್ಲಾಡಳಿತ ಎಗ್ಗಿಲ್ಲದೆ ಭೂಪರಿವರ್ತನೆಗೆ ಅವಕಾಶ ನೀಡುತ್ತಿದೆ. ಹೊರಗಿನ ಬಂಡವಾಳ ಶಾಹಿಗಳು ಕಪ್ಪು ಹಣವನ್ನು ಬಳಸಿ ಭೂ ಖರೀದಿಯಲ್ಲಿ ತೊಡಗಿದ್ದಾರೆ. ದೊಡ್ಡ ದೊಡ್ಡ ರೆಸಾರ್ಟ್‌ಗಳು ತಲೆ ಎತ್ತುತ್ತಿದ್ದು, ಮುಂದಿನ ದಿನಗಳಲ್ಲಿ ದೊಡ್ಡ ಅನಾಹುತವೇ ಎದುರಾಗುವ ಸಾಧ್ಯತೆಗಳಿದೆ ಎಂದು ನಾಚಪ್ಪ ಆರೋಪಿಸಿದರು.



ಮಾದಾಪುರದಲ್ಲಿ ಸಿಎನ್‌ಸಿ ಮಾನವ ಸರಪಳಿ ಮೂಲಕ ಜನಜಾಗೃತಿ ಮೂಡಿಸಿತು.

ಕಾರ್ಯಕ್ರಮದಲ್ಲಿ ಸೂರ್ಯ–ಚಂದ್ರ, ಭೂದೇವಿ, ಪ್ರಕೃತಿದೇವಿ, ಜಲದೇವಿ, ವನದೇವಿ, ಸಂವಿಧಾನ, ಗುರು ಕಾರೋಣ ಹೆಸರಿನಲ್ಲಿ ಸಿಎನ್‌ಸಿಯ ಕೊಡವಲ್ಯಾಂಡ್ ಹೋರಾಟದೊಂದಿಗೆ ತಮ್ಮನ್ನು ಸಮರ್ಪಿಸಿಕೊಳ್ಳುವ ಪ್ರತಿಜ್ಞೆ ಸ್ವೀಕರಿಸಿದರು.

ಗೋಡೆಗೆ ಅಪ್ಪಳಿಸಿದ ಕಾರು, ತೀವ್ರ ಜಖಂ

ಮಡಿಕೇರಿ, ಜು.19–ಚಾಲಕನ ನಿಯಂತ್ರಣ ಕಳೆದುಕೊಂಡ ಕಾರೊಂದು ತಿರುವು ರಸ್ತೆಯಲ್ಲಿ ಮನೆಯೊಂದರ ಗೋಡೆಗೆ ಅಪ್ಪಳಿಸಿ ತೀವ್ರವಾಗಿ ಜಖಂಗೊಂಡಿರುವದ ಘಟನೆ ಹೊದುಕೇರಿಯಲ್ಲಿ ನಡೆದಿದೆ.

ಈ ಅಪಘಾತದಲ್ಲಿ ಕಾರು ತೀವ್ರ ಜಖಂಗೊಂಡಿತಾದರೂ ಮಹಿಳೆ ಸೇರಿದಂತೆ ಕಾರಿನಲ್ಲಿದ್ದವರೆಲ್ಲಾ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬೆಂಗಳೂರಿನಿಂದ ಕೇರಳದ ವಯನಾಡಿಗೆ ತೆರಳುತ್ತಿದ್ದ ಈ ಕಾರು ಹುದಿಕೇರಿ ಮುಖ್ಯ ರಸ್ತೆಯ 7ನೇ ಮೈಲಿ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡು ಕಾರು ಗೋಡೆಗೆ ಅಪ್ಪಳಿಸಿ ಮಗುಚಿ ಬಿದ್ದಿದೆ. ಇದರಿಂದ ಅಲ್ಲಿನ ನಿವಾಸಿ ಮಲ್ಲಂಡ ಯತೀಶ್ ಎಂಬವರ ಮನೆಯ ಗೋಡೆಗೆ ಹಾನಿಯಾಗಿದ್ದರೆ, ಬೆಂಗಳೂರು ಮೂಲದ ಡಿ.ಬಾಲಜಿ ಎಂಬವರಿಗೆ ಸೇರಿದ ಕಾರು ಜಖಂಗೊಂಡಿದೆ.

ಬೆಂಗಳೂರಿನಿಂದ ಹುಣಸೂರು, ಗೋಣಿಕೊಪ್ಪ, ಪೊನ್ನಂಪೇಟೆ, ಹುದಿಕೇರಿ, ಶ್ರೀಮಂಗಲ, ಕುಟ್ಟ ಮಾರ್ಗವಾಗಿ ಕೇರಳದ ವಯನಾಡು ಕಡೆಗೆ ಪ್ರಯಾಣಿಸುತ್ತಿದ್ದ ಕಾರಿನಲ್ಲಿದ್ದ ಹಿರನ್ ಮಹಿ ಎಂಬ ಮಹಿಳೆ ಸೇರಿದಂತೆ ರಾಹುಲ್ ಶ್ರೀನಿಧಿ, ಹಾಗೂ ಸಮೀರ್ ಕುಲಕರ್ಣಿ, ಎಂಬವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತಕ್ಕೊಳಗಾದ ಕಾರನ್ನು



ಕ್ರೇನ್ ಹಾಗೂ ಗ್ರಾಮಸ್ಥರ ಸಹಾಯದಿಂದ ಮೇಲೆತ್ತಲಾಯಿತು. ಈ ಭಾಗದಲ್ಲಿ ಪ್ರವಾಸಿ ತಾಣಗಳಾದ ಟಿ–ಎಸ್ಟೇಟ್, ಮೃತ್ಯುಂಜಯ ದೇವಾಲಯ, ಇರ್ಪು ಫಾಲ್ಸ್ ಹಾಗೂ ಕೇರಳಕ್ಕೆ ತೆರಳುವ ಮುಖ್ಯ ರಸ್ತೆ ಇರುವುದರಿಂದ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಹೆಚ್ಚಿದೆ. ಇದೇ ಸ್ಥಳದಲ್ಲಿ ಹಲವು ಅಪಘಾತ ಘಟನೆಗಳು ಮರುಕಳಿಸುತ್ತಿವೆ. ಶ್ರೀಮಂಗಲ ಪೊಲೀಸ್ ಠಾಣಾಧಿಕಾರಿ ರವೀಂದ್ರ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹುದಿಕೇರಿ ಗ್ರಾಪಂ ಸದಸ್ಯ ಕಿರಿಯಮಾಡ ಮಿಲನ್ ಗಣಪತಿ, ಪೊನ್ನಂಪೇಟೆಯಿಂದ ಕುಟ್ಟಕ್ಕೆ ತೆರಳುವ ರಾಜ್ಯ ಹೆದ್ದಾರಿಯ ಹುದಿಕೇರಿ 7ನೇ ಮೈಲ್ ಹತ್ತಿರ ರಸ್ತೆ ತಿರುವುಗಳಿಂದ ಕೂಡಿದೆ 5 ವರ್ಷಗಳಿಂದ ಹಲವಾರು ಅಪಘಾತವಾಗಿದ್ದು, ವಾಹನಗಳು ಮಲ್ಲಂಡ ಯತೀಶ್ ಅವರ ಮನೆಗೆ ಅಪ್ಪಳಿಸಿವೆ. ಪಂಚಾಯಿತಿಗೆ ಪತ್ರ ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದ್ದಾರೆ.

ಹೈಸೊಡ್ಲೂರಲ್ಲಿ ಹುಲಿ ದಾಳಿಗೆ ಹಸು ಬಲಿ

ಗೋಣಿಕೊಪ್ಪ: ಪೊನ್ನಂಪೇಟೆ ತಾಲೂಕಿನ ಹೈಸೊಡ್ಲೂರು ಗ್ರಾಮದಲ್ಲಿ ಹುಲಿ ದಾಳಿಗೆ ಮೇಯುತ್ತಿದ್ದ ಹಸುವೊಂದು ಬಲಿಯಾಗಿದೆ. ಗ್ರಾಮದ ಬೆಳೆಗಾರ ಕಳ್ಳೆಂಗಡ ಜಿ.ಗಗನ್ ಅವರಿಗೆ ಸೇರಿದ ಹಸು, ಶನಿವಾರ ಗದ್ದೆಯ ಬಯಲಿನಲ್ಲಿ ಮೇಯಲು ಕಟ್ಟಿದ್ದ ಸಂದರ್ಭ ಹುಲಿ ದಾಳಿ ನಡೆಸಿದ್ದು, ಕೆಲವು ಭಾಗವನ್ನು ತಿಂದಿದೆ. ಕಟ್ಟಿದ್ದ ಹಸುವನ್ನು ಕೊಟ್ಟಿಗೆಗೆ ಕರೆತರಲು ತೆರಳಿದಾಗ ಹಸು ಕಾಣೆಯಾಗಿದ್ದು, ತುಸು ದೂರದಲ್ಲಿ ಹಸು ಸತ್ತಿರುವುದು ಗೋಚರಿಸಿದೆ. ಹುಲಿ ದಾಳಿಯಿಂದ ಹುಲಿ ಗ್ರಾಮದಲ್ಲೇ ಇರುವಿಕೆಯಿಂದ ಗ್ರಾಮಸ್ಥರಲ್ಲಿ ಆತಂಕ ಮೂಡಿದೆ. ತೋಟಗಳಿಗೆ ತೆರಳಲು ಕಾರ್ಮಿಕರು, ಬೆಳೆಗಾರರು ಆತಂಕ ವ್ಯಕ್ತಪಡಿಸುವಂತಾಗಿದೆ. ಶನಿವಾರ ಸಂಜೆ ಹುಲಿ ಸೆರೆಗೆ ಅರಣ್ಯ ಇಲಾಖೆಯಿಂದ ಸಾಕಾನೆ ಸಹಿತ ಸಿಬ್ಬಂದಿಗಳ ತಂಡ ಕಾರ್ಯಚರಣೆಗೆ ಸ್ಥಳಕ್ಕೆ ಆಗಮಿಸಿದೆ.

ಮಂಡ್ಯ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತವಾಗಿಸೋಣ

ಮಂಡ್ಯದಲ್ಲಿ ಜನರನ್ನು ಆಕರ್ಷಿಸಿದ ಬಾಲ್ಯ ವಿವಾಹ ಮುಕ್ತ ಬೃಹತ್ ಜಾಥಾ

ಮಂಡ್ಯ: ಮಂಡ್ಯ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತವಾಗಿಸಲು ವಿವಿಧ ಇಲಾಖೆಗಳು ಹಾಗೂ ಅಧಿಕಾರಿಗಳೊಂದಿಗೆ ಸಾರ್ವಜನಿಕರು ಕೈ ಜೋಡಿಸಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಸುಬ್ರಮಣ್ಯ ತಿಳಿಸಿದರು.

ಶನಿವಾರ ನಗರದ ಜಿಲ್ಲಾ ನ್ಯಾಯಾಂಗ ಕಚೇರಿಯ ಮುಂಭಾಗ ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಮಂಡ್ಯ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿ ಮಾಡುವ ಬೃಹತ್ ಜಾಥಾ ವಾಕಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ವಾಕಥಾನ್ ಮುಕ್ತಾಯವಾದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.



ಮಂಡ್ಯದಲ್ಲಿ ಶನಿವಾರ ನಡೆದ ಬೃಹತ್ ಜಾಥಾ

ಬಾಲ್ಯ ವಿವಾಹ ತಡೆಗಟ್ಟಲು ಮೊದಲು ಹೆಣ್ಣು ಮಕ್ಕಳು ಬಾಲ್ಯ ವಿವಾಹದ ದುಷ್ಪರಿಣಾಮಗಳು, ಕಾನೂನುಗಳ ಬಗ್ಗೆ ತಿಳಿದುಕೊಂಡು ಬಾಲ್ಯ ವಿವಾಹವನ್ನು ವಿರೋಧಿಸುವ ಪ್ರವೃತ್ತಿ ಬೆಳಸಿಕೊಳ್ಳಬೇಕು. ಬಾಲ್ಯ ವಿವಾಹದ ಪ್ರಕರಣ ಎದುರಾದಲ್ಲಿ ಅಥವಾ ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ–1098 ಅಥವಾ 112 ಗೆ ಕರೆ ಮಾಡಿದರೆ ತಕ್ಷಣ ಅಧಿಕಾರಿಗಳು ಬಾಲ್ಯ ವಿವಾಹ ನಿಲ್ಲಿಸಿ ತಪ್ಪಿತಸ್ಥ ರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆ. ಅನಕ್ಷರತೆ ಹಾಗೂ ಬಡತನದಿಂದ ಈ ಹಿಂದೆ ಬಾಲ್ಯ ವಿವಾಹಗಳು ನಡೆಯುತ್ತಿತ್ತು, ಇಂದು ಎಲ್ಲರೂ ಅಕ್ಷರಸ್ಥರಾಗಿದ್ದಾರೆ. ಇಂದು ಸಹ ಬಾಲ್ಯ ವಿವಾಹ ನಡೆಯುತ್ತದೆ ಎಂದರೆ ಇಂತಹ ಸಾಮಾಜಿಕ ಪಿಡುಗನ್ನು ತಡೆಗಟ್ಟಲು ಎಲ್ಲರೂ ಜಾಗೃತರಾಗಿ ಹೋರಾಟ ನಡೆಸಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ ಸ್ವಾತಂತ್ರ್ಯದ ಪೂರ್ವದಲ್ಲಿ ಸಮಾಜದಲ್ಲಿ ಬಡತನ, ಅನಕ್ಷರತೆ, ಮೂಢನಂಬಿಕೆ ಹೆಚ್ಚಿದ್ದ ಕಾರಣ ಬಾಲ್ಯವಿವಾಹಗಳು ನಡೆಯುತ್ತಿತ್ತು ಆದರೆ ಇಂದಿನ ಆಧುನಿಕ ಸಮಾಜದಲ್ಲಿ ಶಿಕ್ಷಣ, ತಂತ್ರಜ್ಞಾನ, ವೈಚಾರಿಕತೆಯಲ್ಲಿ ಮುಂದೆ ಬಂದಿದ್ದೇವೆ ಆದರೂ ನಮ್ಮ ಸುತ್ತಮುತ್ತಲೂ ಬಾಲ್ಯ ವಿವಾಹದಂತಹ ಪ್ರಕರಣಗಳು ಕಂಡು ಬರುತ್ತಿದೆ ಎಂದರೆ ಎಲ್ಲರೂ ತಲೆ ತಗ್ಗಿಸಿ ನಿಲ್ಲಬೇಕಾಗುತ್ತದೆ. ಬಾಲ್ಯ ವಿವಾಹ ಸಮಾಜಕ್ಕೆ ಅಂಟಿಕೊಂಡಿರುವ ಕಳಂಕ. ಇದನ್ನು ತೊಡೆದು ಹಾಕಲು ಇಲಾಖೆಗಳೊಂದಿಗೆ ಸಾರ್ವಜನಿಕರು ಜೊತೆಗೆ ನಿಲ್ಲಬೇಕು ಎಂದು ಮನವಿ ಮಾಡಿದರು.

ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಆನಂದ್.ಎಂ ಅವರು ಮಾತನಾಡಿ ಬಾಲ್ಯ ವಿವಾಹ ತಡೆಗಟ್ಟಿದ ನಂತರ ಹೆಣ್ಣು ಮಗು ಶಾಲೆಯ ಕಡೆಗೆ ಹೆಜ್ಜೆ ಹಾಕಬೇಕು. ಹೆಣ್ಣು ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗದಂತೆ ನೋಡಿಕೊಳ್ಳಿ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಬಕಾರಿ ಉಪ ಆಯುಕ್ತ ನಾಗಶಯನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ರಾಜಮೂರ್ತಿ, ನಗರಸಭೆ ಪೌರಾಯುಕ್ತೆ ಪಂಪಶ್ರೀ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಲುವಯ್ಯ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶ್ರೀನಿವಾಸ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಷ್ಮಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಡಿಸಿಎಂ ಡಿಕೆಶಿ ಬೆಂಗಾವಲು ವಾಹನ ಪಲ್ಟಿ: ಇಬ್ಬರಿಗೆ ಗಾಯ

ಮಂಡ್ಯ, ಜು.19– ಜಿಲ್ಲೆಯ ಶ್ರೀರಂಗಪಟ್ಟಣದ ಗೌಡಹಳ್ಳಿ ಬಳಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬೆಂಗಾವಲು ವಾಹನ ಶನಿವಾರ ಸಂಜೆ ಅಪಘಾತಕ್ಕೀಡಾಗಿದೆ.

ಮೈಸೂರಿನಲ್ಲಿ ಆಯೋಜಿಸಲಾಗಿದ್ದ ಸರ್ಕಾರದ 2 ವರ್ಷಗಳ ಸಾಧನಾ ಸಮಾವೇಶದಲ್ಲಿ ಭಾಗವಹಿಸಿ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದಾಗ ಬೆಂಗಾವಲು ವಾಹನ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ವಾಹನದಲ್ಲಿದ್ದ ಇಬ್ಬರು ಸಿಬ್ಬಂದಿಗೆ ಗಾಯಗಳಾಗಿವೆ. ಡಿ.ಕೆ.ಶಿವಕುಮಾರ್ ಅವರಿದ್ದ ಕಾರು ಹಿಂದೆ ಇದ್ದ ಕಾರಣ ಅವರಿಗೆ ತೊಂದರೆಯಾಗಿಲ್ಲ. ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಡಿಕೆ ಶಿವಕುಮಾರ್ ಬೆಂಗಳೂರಿಗೆ ಪ್ರಯಾಣ ಮುಂದುವರೆಸಿದರು.



ಶ್ರೀರಂಗಪಟ್ಟಣ ಸಮೀಪದ ಗೌಡಹಳ್ಳಿ, ಟಿಎಂ ಹೊಸೂರು ಬಳಿಯ ಬೆಂ–ಮೈ ಎಕ್ಸ್‌ಪ್ರೆಸ್ ಹೈವೆಯಲ್ಲಿ ಈ ಘಟನೆ ಸಂಭವಿಸಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಬಿತ್ತನೆ ಬೀಜ ವಿತರಣೆಯಲ್ಲಿ ತೊಂದರೆಯಾಗದಂತೆ ಎಚ್ಚರಿಕೆ ವಹಿಸಿ

ಮಂಡ್ಯ: ಮುಂಗಾರು ಹಂಗಾಮು ಪ್ರಾರಂಭವಾಗಿದ್ದು, ರೈತರ ಕೃಷಿ ಚಟುವಟಿಕೆಗಳು ಚುರುಕಾಗಿರುತ್ತದೆ. ರೈತರಿಗೆ ತೊಂದರೆಯಾಗದಂತೆ ಗುಣ ಮಟ್ಟದ ಬಿತ್ತನೆ ಬೀಜ, ಗೊಬ್ಬರ ಹಾಗೂ ಸಸ್ಯ ಸಂರಕ್ಷಣಾ ಔಷಧಿ ದೊರಕುವಂತೆ ವ್ಯವಸ್ಥೆ ಯಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಕೃಷಿ ಪರಿಕರಗಳ ಉಸ್ತುವಾರಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಭತ್ತ ಪ್ರಮುಖ ಬೆಳೆಯಾಗಿದ್ದು, ಸುಮಾರು 60000 ಹೆಕ್ಟೇರ್ ನಲ್ಲಿ ಬಿತ್ತನೆಯಾಗಲಿದೆ. ಜುಲೈ ಹಾಗೂ ಆಗಸ್ಟ್ ಮಾಹೆಯಲ್ಲಿ ರೈತ ಸಂಪರ್ಕ ಕೇಂದ್ರ, ಪಿ.ಎ.ಸಿ.ಎಸ್ ಹಾಗೂ ರೈತ ಉತ್ಪನ್ನ ಸಂಸ್ಥೆಗಳು ಪ್ರತಿ ದಿನ ಬೆಳಿಗ್ಗೆ 8.30 ಗಂಟೆಗೆ ಕೇಂದ್ರಗಳನ್ನು ತೆರೆಯಬೇಕು ರೈತರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದರು.

ಪ್ರತಿ ದಿನ ಲಭ್ಯವಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ದಾಸ್ತಾನು ವಿವರವನ್ನು ಅನಾವರಣ ಮಾಡಬೇಕು. ತಾಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ದಾಸ್ತಾನು ಬುಲೆಟನ್ ಅನ್ನು ಬಿಡುಗಡೆ ಮಾಡಬೇಕು ಇದರಿಂದ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ತೊಂದರೆ ಯಿಲ್ಲ ಎಂದು ಮನವರಿಕೆಯಾಗುತ್ತದೆ. ಕಳಪೆ ಗುಣಮಟ್ಟದ ಬಿತ್ತನೆ ಬೀಜ ಸೇರಿದಂತೆ ಯಾವುದೇ ಕೃಷಿ ಪರಿಕರ ಮಾರಾಟ ಮಾಡುತ್ತಿರುವುದು ಕಂಡುಬಂದಲ್ಲಿ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಣ್ಣು ಪರೀಕ್ಷಾ ವರದಿಯನ್ನು ಆದರಿಸಿ ಬೆಳೆಗಳನ್ನು ಬೆಳೆಯುವ ಬಗ್ಗೆ ರೈತರಿಗೆ ಅರಿವು ಮೂಡಿಸಬೇಕು ಹಾಗೂ ಕೃಷಿ ತಜ್ಞರ ಜೊತೆ ಸಂವಾದಗಳನ್ನು ನಡೆಸಬೇಕು.



ಸಭೆಯಲ್ಲಿ ಮಾತನಾಡುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ್.

ಸಭೆಯಲ್ಲಿ ಕೃಷಿ ಅಧಿಕಾರಿಗಳಾದ ಹರ್ಷ, ಮುನೇಗೌಡ, ಡಾ: ಭಾನು ಪ್ರಕಾಶ್ ಉಪಸ್ಥಿತರಿದ್ದರು.

ದಲಿತ ಯೋಧನ ಕುಟುಂಬಕ್ಕೆ ಅನ್ಯಾಯ: ಪ್ರತಿಭಟನೆ



ಕಿಕ್ಕೇರಿ, ಜು.19– ಪ್ರಭಾವಿ ರಾಜಕಾರಣಿಗಳ ಕೈವಾಡ ಹಾಗೂ ಕಂದಾಯ ಇಲಾಖೆಯ ಕೆಲ ಅಧಿಕಾರಿಗಳು ದಲಿತ ಯೋಧ ಕುಟುಂಬಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಕರ್ನಾಟಕ ದಲಿತ ಸಂಘಟನೆ ಹಾಗೂ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಸಮೀಪದ ಮಗನಹೊಸಹಳ್ಳಿ ಗ್ರಾಮದಲ್ಲಿನ ದಲಿತ ಬೋರಯ್ಯನಿಗೆ ಅನ್ಯಾಯವಾಗಿದೆ ಎಂದು ಸಂಘಟನೆಯವರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಛಲವಾದಿ ಮಹಾಸಭಾ ಅಧ್ಯಕ್ಷ ಹುಚನಹಳ್ಳಿ ನಟರಾಜು, ಮಾಂಬಳ್ಳಿ ಜಯರಾಮ್, ದಲಿತ ಸಂಘಟನೆ ಶಿವಮೊಗ್ಗ ಚಂದ್ರಪ್ಪ, ಲಕ್ಷ್ಮಿಪುರ ರಂಗಸ್ವಾಮಿ, ಚೌಡೇನಹಳ್ಳಿ ದೇವರಾಜು, ಗಿರೀಶ್, ಜಯರಾಂ, ಕತ್ತರಘಟ್ಟ ರಾಜೇಶ್ ಮತ್ತಿತರರಿದ್ದರು.

ಬಾಲ್ಯವಿವಾಹ ಮುಕ್ತ : ಜಿಲ್ಲೆಯಾದ್ಯಂತ ನಾಳೆ ಏಕಕಾಲದಲ್ಲಿ ಪ್ರತಿಜ್ಞಾ ವಿಧಿ ಸ್ವೀಕಾರ

ಚಾಮರಾಜನಗರ, ಜು.19– ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಜಿಲ್ಲಾಡಳಿತದ ವತಿಯಿಂದ ಪ್ರತಿಜ್ಞಾ ವಿಧಿ ಸ್ವೀಕರಿಸುವ ಬೃಹತ್ ಕಾರ್ಯಕ್ರಮವನ್ನು ಜು. 21 ರ ಬೆಳಿಗ್ಗೆ 9.30 ಗಂಟೆಗೆ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಏಕಕಾಲದಲ್ಲಿ ಹಮ್ಮಿಕೊಳ್ಳಲಾಗಿದೆ.

ನಗರದ ಜಿಲ್ಲಾಡಳಿತ ಭವನದ ಮುಂಭಾಗ, ಗುಂಡ್ಲುಪೇಟೆ ತಹಶೀಲ್ದಾರ್ ಕಚೇರಿ, ಕೊಳ್ಳೇಗಾಲ ತಹಶೀಲ್ದಾರ್ ಕಚೇರಿ, ಯಳಂದೂರು ತಾಲ್ಲೂಕು ಕಚೇರಿ ಸಭಾಂಗಣ ಹಾಗೂ ಹನೂರು ಪಟ್ಟಣದ ಪಿ.ಡಬ್ಲ್ಯೂ.ಡಿ. ಅತಿಥಿ ಗೃಹದಲ್ಲಿ ಪ್ರತಿಜ್ಞಾ ವಿಧಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಜಿಲ್ಲಾಡಳಿತದ ಮೂಲಕ ಬಾಲ್ಯವಿವಾಹ ಮುಕ್ತ ಜಿಲ್ಲೆ ಘೋಷಣೆಗೆ ರಾಜ್ಯದಲ್ಲಿಯೇ ಮಾದರಿಯಾಗುವಂತೆ ವಿವಿಧ ಚಟುವಟಿಕೆಗಳ ಮೂಲಕ ಪರಿಣಾಮಕಾರಿ ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಪತ್ರಿಕಾ ದಿನಾಚರಣೆ



ವಿ.ಗಂಗಾಧರ್, ಮಹೇಶ್ ಮಡಹಳ್ಳಿ, ಇರ್ಫಾನ್, ಎಂ.ಮರಿಸ್ವಾಮಿ, ಸುರೇಶ್‌ಅಜ್ಜೀಪುರ

ಚಾಮರಾಜನಗರ : ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಿಕಾ ದಿನಾಚರಣೆ ಸಮಾರಂಭವನ್ನು ಜು.20ರ ಬೆಳಿಗ್ಗೆ 10.30ಕ್ಕೆ ನಗರದ ವರ್ತಕರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸುವರು. ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ ಅಧ್ಯಕ್ಷತೆ ವಹಿಸುವರು. ಡಿ.ವಿ.ಗುಂಡಪ್ಪ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟ ರಂಗಶೆಟ್ಟಿ ಪುಷ್ಪಾರ್ಚನೆ ಮಾಡಲಿದ್ದಾರೆ. ಸಂಘದ ವಾರ್ಷಿಕ ಪ್ರಶಸ್ತಿ ಪುರಸ್ಕೃತರಾದ ವಿ.ಗಂಗಾಧರ್, ಮಹೇಶ್ ಮಡಹಳ್ಳಿ, ಇರ್ಫಾನ್, ಎಂ.ಮರಿ ಸ್ವಾಮಿ, ಸುರೇಶ್ ಅಜ್ಜೀಪುರ ಅವರಿಗೆ ಜಿಲ್ಲಾಧಿ ಕಾರಿ ಶಿಲ್ಪಾನಾಗ್ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

ಪತ್ರಿಕಾ ದಿನಾಚರಣೆ ಅಂಗವಾಗಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ಪತ್ರಕರ್ತರಿಗೆ ಮತ್ತು ಅವರ ಕುಟುಂಬದವರಿಗೆ ಬಹುಮಾನಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ವಿತರಿಸುವರು.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಪತ್ರಕರ್ತರ ಮಕ್ಕಳಿಗೆ ಸಂಘದ ಜಿಲ್ಲಾ ಉಸ್ತುವಾರಿ ಕೆರೆಗೋಡು ಸೋಮಶೇಖರ್ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಅತಿಥಿಗಳಾಗಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ವರ್ತಕರ ಸಂಘದ ಅಧ್ಯಕ್ಷ ಎನ್.ಶಂಕರ್ ಪಾಲ್ಗೊಳ್ಳಲಿದ್ದಾರೆ ಎಂದು ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯ ಚಾಮುಂಡಿ ಮೆರವಣಿಗೆ

ಗುಂಡ್ಲುಪೇಟೆ, ಜು.19 (ಸೋಮ್.ಜಿ)–ಪಟ್ಟಣದಲ್ಲಿರುವ ಶ್ರೀ ಭಾವಸಾರ ಕ್ಷತ್ರೀಯ ಮಂಡಳಿಯ ಆಯೋಜಿಸಿದ್ದ ಶ್ರೀ ಚಾಮುಂಡೇಶ್ವರಿ ದೇವಿಯ ಮೆರವಣಿಗೆಯು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಪಟ್ಟಣದ ಕೆಆರ್‌ಸಿ ರಸ್ತೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಚಾಮುಂಡಿ ಮಾತೆಯ ಆಷಾಢ ಮಾಸದ ಕೊನೆಯ ಶುಕ್ರವಾರದ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ನಂತರ ವಿದ್ಯುತ್ ದೀಪಾಲಂಕಾರ ಮತ್ತು ದೇವಾಲಯಕ್ಕೆ ತಳಿರು ತೋರಣಗಳ ಅಲಂಕಾರ ಮಾಡಿ ದೇವಿಯ ವಿಗ್ರಹವನ್ನು ಹೊತ್ತ ಬೆಳ್ಳಿಯ ರಥವನ್ನು ಮಂಗಳವಾದ್ಯ ಸೇರಿದಂತೆ ವಿವಿಧ ಕಲಾವೇಳಗಳೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು.

ದೇವಾಲಯದಲ್ಲಿ ಪ್ರಧಾನ ಅರ್ಚಕ ಸುಬ್ರಮಣ್ಯರವರಿಂದ ವಿಶೇಷ ಪೂಜೆ ಪ್ರಾರ್ಥನೆ ಹಾಗೂ ನೈವೇದ್ಯವನ್ನು ಅರ್ಪಣೆ ಮಾಡಲಾಯಿತು. ಪಟ್ಟಣದ ವಿವಿಧ ಬಡಾವಣೆಯ ಭಕ್ತರು ದೇವಿಯ ದರ್ಶನ ಮಾಡಿ ಪುನೀತರಾದರು. ಈ ವೇಳೆ ಭಾವಸಾರ ಕ್ಷತ್ರಿಯ ಮಂಡಳಿಯ ಪದಾಧಿಕಾರಿಗಳು, ಸಮುದಾಯದ ಹಿರಿಯರು, ಯುವಕರು, ಮಹಿಳೆಯರು ಭಾಗವಹಿಸಿದ್ದರು. ಸಹಸ್ರಾರು ಮಂದಿಗೆ ಪ್ರಸಾದ ವಿತರಣೆ ಮಾಡಲಾಯಿತು.





ಗುಂಡ್ಲುಪೇಟೆ ಪಟ್ಟಣದಲ್ಲಿ ಚಾಮುಂಡೇಶ್ವರಿ ದೇವಿಯ ಮೆರವಣಿಗೆ ನಡೆಯಿತು.

ಸಿ.ವೆಂಕಟೇಶ್ ಕಾಂಗ್ರೆಸ್ ಪದವೀಧರ ವಿಭಾಗದ ಅಧ್ಯಕ್ಷ




ಬಿಳಿಗಿರಿರಂಗನಬೆಟ್ಟದ ಸಿ. ವೆಂಕಟೇಶ್‌ರವರಿಗೆ ಕಾಂಗ್ರೆಸ್ ಪಕ್ಷದ ಪದವೀಧರ ವಿಭಾಗದ ಜಿಲ್ಲಾಧ್ಯಕ್ಷರಾಗಿ ನೇಮಕವಾಗಿರುವ ಆದೇಶ ಪ್ರತಿಯನ್ನು ರಾಜ್ಯಾಧ್ಯಕ್ಷ ಎ.ಎನ್.ನಟರಾಜ್‌ಗೌಡ ವಿತರಿಸಿದರು.

ಯಳಂದೂರು, ಜು.19– ಕಾಂಗ್ರೆಸ್ ಪದವೀಧರ ವಿಭಾಗದ ಜಿಲ್ಲಾಧ್ಯಕ್ಷರಾಗಿ ತಾಲೂಕಿನ ಬಿಳಿಗಿರಿರಂಗನಬೆಟ್ಟದ ನಿವಾಸಿ ಸಿ. ವೆಂಕಟೇಶ್‌ರನ್ನು ನೇಮಕಗೊಳಿಸಿ ರಾಜ್ಯಾಧ್ಯಕ್ಷ ಎ.ಎನ್.ನಟರಾಜ್ ಗೌಡ ಆದೇಶ ಪತ್ರವನ್ನು ವಿತರಿಸಿದರು.

ಸಂಸದ ಸುನೀಲ್ ಬೋಸ್ ಹಾಗೂ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಸಿ. ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್ ಕಾಡಾ ಅಧ್ಯಕ್ಷ ಮರಿಸ್ವಾಮಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ವಿ. ಚಂದ್ರು ರವರ ಸಹಕಾರದಿಂದ ಈ ಸ್ಥಾನ ನನಗೆ ಲಭಿಸಿದೆ. ಹಲವು ವರ್ಷಗಳಿಂದಲೂ ನಾನು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಈ ಪದವಿ ಲಭಿಸಿದ್ದಕ್ಕೆ ಎಲ್ಲರಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನಗೆ ನೀಡಿರುವ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ ಎಂದು ಸಿ. ವೆಂಕಟೇಶ್ ಆಶ್ವಾಸನೆ ನೀಡಿದರು.

ಬಸವರಾಜು ನಿಧನ



ಕೊಳ್ಳೇಗಾಲ: ಕುಣಗಳ್ಳಿ ಸ್ವಗ್ರಾಮದ ನಿವೃತ್ತ ಉಪನ್ಯಾಸಕ ಬಸವರಾಜು (78) ಶನಿವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ ಮೀನಾಕ್ಷಮ್ಮ, ಪುತ್ರ ವಿಜಯ್ ಕುಮಾರ್, ಪುತ್ರಿಯರಾದ ಪ್ರತಿಮಾ, ಅನುಶ್ರೀ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ನಿಧನಕ್ಕೆ ತಾಲೂಕು ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಮಲ್ಲೇಶ್, ಶಿಕ್ಷಕ ವಿನಯ್ ಕುಮಾರ್, ಕೆ.ಪಿ.ಪ್ರಕಾಶ್, ಚಂದ್ರು ಸಂತಾಪ ಸೂಚಿಸಿದ್ದಾರೆ. ತಾಲೂಕಿನ ಕುಣಗಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನಾಳೆ ಮಧ್ಯಾಹ್ನ 2 ಗಂಟೆಗೆ ಮೃತರ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಸ್ತೆ ಬದಿಯಲ್ಲಿ ನವಜಾತ ಹೆಣ್ಣು ಶಿಶು ಪತ್ತೆ



ಚಾಮರಾಜನಗರ: ತಾಲೂಕಿನ ಸಾಗಡೆ ಮತ್ತು ತಮ್ಮಡಹಳ್ಳಿ ಮಾರ್ಗ ಮಧ್ಯೆ ರಸ್ತೆ ಬದಿಯಲ್ಲಿ ಸುಮಾರು 10ರಿಂದ 15 ದಿನದ ನವಜಾತ ಹೆಣ್ಣು ಶಿಶುವೊಂದು ಪತ್ತೆಯಾಗಿದ್ದು, ಮಗುವನ್ನು ಪಂಚೆಯಲ್ಲಿ ಸುತ್ತಿಟ್ಟು ಬಿಸಾಡಿ ಹೋಗಿದ್ದಾರೆ.

ಸ್ಥಳೀಯರಾದ ಪರಮೇಶ್ ಎಂಬುವರು ದಾರಿ ಪಕ್ಕದಲ್ಲಿದ್ದ ಮಗುವನ್ನು ಕಂಡು ಕೂಡಲೇ ಸಾಗಡೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಆರೈಕೆ ಮಾಡಿಸಿದ್ದಾರೆ. ವಿಷಯ ತಿಳಿದ ಅಂಗನವಾಡಿ ಕಾರ್ಯಕರ್ತೆ ನಾಗಮಣಿ ಎಂಬುವರು ಮಗುವನ್ನು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಕರೆ ತಂದು ಮಗುವನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದಾರೆ. ನವಜಾತ ಶಿಶುವನ್ನು ರಸ್ತೆಯಲ್ಲಿ ಬಿಸಾಡಿ ಹೋದ ಘಟನೆ ತಿಳಿದು ಆಸ್ಪತ್ರೆಗಳಿಗೆ ಹತ್ತಾರು ಮಂದಿ ಭೇಟಿ ಕೊಟ್ಟು ಮರುಕ ವ್ಯಕ್ತಪಡಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಚಾಮರಾಜನಗರಕ್ಕೆ ಬರುತ್ತಿದ್ದಾಗ ಸಾಗಡೆ ಮತ್ತು ತಮ್ಮಡಹಳ್ಳಿ ಮಾರ್ಗ ಮಧ್ಯೆ ರಸ್ತೆಬದಿ ಚಿಕ್ಕ ಮಗುವಿರುವುದನ್ನು ಕಂಡ ಕೂಡಲೇ ಆಶಾ ಕಾರ್ಯಕರ್ತೆಗೆ ಫೋನ್ ಮಾಡಿ ಮಗುವನ್ನು ಎತ್ತಿಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿದೆವು. ನಂತರ ಅಲ್ಲಿಂದ ಆಂಬ್ಯುಲೆನ್ಸ್ ಮೂಲಕ ಜಿಲ್ಲಾಸ್ಪತ್ರೆಗೆ ಕರೆತಂದಿದ್ದೇವೆ ಎಂದಿದ್ದಾರೆ.

ನಾಗಮಣಿ ಮಾತನಾಡಿ, ಅಂಗನವಾಡಿಯಲ್ಲಿ ಇದ್ದಾಗ ರಸ್ತೆ ಬದಿ ಮಗು ಸಿಕ್ಕಿರುವುದಾಗಿ ಫೋನ್‌ನಲ್ಲಿ ಹೇಳಿದರು. ತಕ್ಷಣವೇ ಸಾಗಡೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಗುವನ್ನು ಕರೆದೊಯ್ದೆವು. ಮಗು ಸುಸ್ಥಿತಿಯಲ್ಲಿದ್ದರಿಂದ ಆಂಬುಲೆನ್ಸ್‌ನಲ್ಲಿ ಜಿಲ್ಲಾಸ್ಪತ್ರೆಗೆ ಕರೆತಂದಿದ್ದೇವೆ. ಈಗ ಮಗು ಆರೋಗ್ಯವಾಗಿದೆ ಎಂದು ಹೇಳಿದ್ದಾರೆ.



ಮಿರ್ಲೆ ಚಂದ್ರಶೇಖರ, ಲೇಖಕರು, ಮೊ: 9916129654

ಸೇವೆಗೆ ಮುನ್ನವೆ ಸರಿದ ಭಾರತದ ಮೊದಲ ಮಹಿಳಾ ವೈದ್ಯೆ

ಆನಂದಿಬಾಯಿ



ಈಗ ಪ್ರತಿಯೊಂದು ಕ್ಷೇತ್ರದಲ್ಲೂ ಪುರುಷರಿಗೆ ಸರಿಸಮನಾಗಿ, ಕೆಲವಲ್ಲಿ ಪುರುಷರಿಗಿಂತಲೂ ಚೆನ್ನಾಗಿಯೇ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಆದರೆ ಹಿಂದೆ ಭಾರತದಲ್ಲಿ ಮಹಿಳೆಯರು ಮನೆಯೊಳಗಿನ ಅಡುಗೆ ಕೆಲಸಕ್ಕೆ ಮಾತ್ರ ಸೀಮಿತ ಎಂಬುದಾಗಿತ್ತು ಮಹಿಳೆ ಎಂದರೆ ನಾಲ್ಕು ಗೋಡೆಗಳ ಒಳಗೆ ಬಂಧಿ.

ಈಗ ಸಂಖ್ಯೆಯಲ್ಲಿ ಪುರುಷರಿಗೆ ಸರಿಸಮನಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಬಹಳ ವರ್ಷಗಳೇನಿಲ್ಲ 1980ಕ್ಕಿಂತ ಹಿಂದೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳು ಇರಲೇ ಇಲ್ಲ. 1975ರ ಆಸುಪಾಸಿನಲ್ಲಿ ಇನ್ಫೋಸಿಸ್‌ನ ಶ್ರೀಮತಿ ಸುಧಾಮೂರ್ತಿಯವರು ಇಂಜಿನಿಯರಿಂಗ್ ಕಾಲೇಜಿನಲ್ಲಿ ಹುಡುಗರ ಮಧ್ಯ ಒಬ್ಬರೇ ವಿದ್ಯಾಭ್ಯಾಸ ಮಾಡಿದ್ದನ್ನು ಹೇಳಿಕೊಂಡಿದ್ದಾರೆ, ಆ ಕಾಲಕ್ಕೆ ಇದು ಅಚ್ಚರಿ ಸುದ್ದಿಯೇ ಆಗಿತ್ತು. ಹುಡುಗಿ ಒಬ್ಬಳು ಇಂಜಿನಿಯರಿಂಗ್ ಮಾಡುವುದೆಂದರೆ!, ಈಗ ಬಿಡಿ ಮನೆಗೊಬ್ಬರು ಇಂಜಿನಿಯರಿಂಗ್ ಹುಡುಗಿಯರನ್ನು ಕಾಣಬಹುದು.

ಪಾಶ್ಚಿಮಾತ್ಯ ಔಷಧ ಶಾಸ್ತ್ರದಲ್ಲಿ ಮೊದಲ ಮಹಿಳಾ ಸಾಧಕಿಯನ್ನು ಇಲ್ಲಿ ನೆನೆಯಲೇಬೇಕು. ಶ್ರೀಮತಿ ಆನಂದಿಬಾಯಿ ಗೋಪಾಲರಾವ್ ಜೋಶಿ(1865–1887) ಅವರು ಮೊದಲ ಮಹಿಳಾ ಪಾಶ್ಚಿಮಾತ್ಯ ವೈದ್ಯರಾಗಿ ಇತಿಹಾಸದ ಪುಟದಲ್ಲಿ ಸೇರಿದ್ದಾರೆ, 19ನೇ ಶತಮಾನದ ಕೊನೆಯ ಭಾಗದಲ್ಲಿ ಮಹಿಳೆಯರು ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಆನಂದಿಬಾಯಿ ಗೋಪಾಲ್‌ರವರು ಬ್ರಿಟಿಷ್ ಭಾರತದ ಆಗಿನ ಬಾಂಬೆ ಪ್ರೆಸಿಡೆನ್ಸಿಯಿಂದ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಎರಡು ವರ್ಷಗಳ ವೈದ್ಯಕೀಯ ಶಾಸ್ತ್ರವನ್ನು ಅಧ್ಯಯನ ಮಾಡಿ ಪದವಿ ಪಡೆದ ಮೊದಲ ಮಹಿಳೆಯಾಗಿದ್ದರು. ಹೆಸರಿನ ಪಕ್ಕ ಇರುವ ಗೋಪಾಲ್ ಎಂಬುದು ಅವರ ಗಂಡನ ಹೆಸರು.

ಆನಂದಿಬಾಯಿ ಜೋಶಿಯವರು ಮೂಲ ಹೆಸರು ಯಮುನಾ. 31 ಮಾರ್ಚ್ 1865ರಂದು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಒಂಬತ್ತು ಮಕ್ಕಳಲ್ಲಿ ಇವರು ಐದನೆಯವರು. ಅವರ ತಾಯಿಯ ಒತ್ತಡದಿಂದ ಆ ಕಾಲದ ಸಂಪ್ರದಾಯಗಳನ್ನು ಪಾಲಿಸಿ, ತಮ್ಮ ಒಂಬತ್ತನೇ ವಯಸ್ಸಿನಲ್ಲಿ ತಮಗಿಂತ ಇಪ್ಪತ್ತು ವರ್ಷ ಹಿರಿಯರಾದ ಹಾಗೂ ವಿದುರ ಗೋಪಾಲರಾವ್ ಜೋಶಿಯವರನ್ನು ಮದುವೆಯಾದರು. ಯಮುನಾರವರ ಮದುವೆಯ ನಂತರ ಪತಿ ಜೋಶಿಯವರು 'ಆನಂದಿ' ಎಂದು ಮರುನಾಮಕರಣ ಮಾಡಿದರು. ಗೋಪಾಲ್‌ರಾವ್ ಜೋಶಿಯವರು ಅಂಚೆ ಕಚೇರಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದರು. ಜೋಶಿಯವರು ಪ್ರಗತಿಪರ ಚಿಂತಕರು ಆಗಿದ್ದರಿಂದ ಮಹಿಳೆಯರಿಗೆ ಶಿಕ್ಷಣ ಕೊಡಿಸುವುದನ್ನು ಬೆಂಬಲಿಸಿದರು. ಆನಂದಿಬಾಯಿಯವರು ಭಾರತೀಯ ಸಮಾಜ ಸುಧಾರಕ, ಶಿಕ್ಷಣ ತಜ್ಞ ಮತ್ತು ಮಹಿಳಾ ಹಕ್ಕುಗಳ ವಕೀಲರಾಗಿದ್ದ ಪಂಡಿತ ರಮಾಬಾಯಿಯವರ ಸೋದರಸಂಬಂಧಿಯೂ ಆಗಿದ್ದರು.

ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ನಡೆದ ದುರ್ಘಟನೆಯೊಂದು ಅವರು ವೈದ್ಯೆಯಾಗುವಂತೆ ಪ್ರೇರೇಪಣೆ ಆಯಿತು. ಆನಂದಿಯವರ ಜೀವನದಲ್ಲಿ ಅದೊಂದು ಮಹತ್ತರವಾದ ತಿರುವು. ಚಿಕ್ಕ ವಯಸ್ಸಿನಲ್ಲೇ ಗಂಡು ಮಗುವಿಗೆ ಜನ್ಮ ನೀಡಿದರು, ಮಗು ವೈದ್ಯಕೀಯ ಆರೈಕೆಯ ಕೊರತೆಯಿಂದಾಗಿ ಹತ್ತು ದಿನಗಳು ಮಾತ್ರ ಬದುಕಿತ್ತು. ಇದರಿಂದ ತಾವು ಅನುಭವಿಸಿದ ನೋವು ಬೇರೆಯವರಿಗೆ ಆಗದಂತೆ ನನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ವೈದ್ಯಕೀಯ ಸೇವೆ ಮಾಡಬೇಕೆಂದು ನಿರ್ಧರಿಸಿದರು. ಗೋಪಾಲ್‌ರಾವ್ ಜೋಶಿಯವರು ಮಡದಿಗೆ ಒತ್ತಾಸೆಯಾಗಿ ನಿಂತು ಕಲ್ಕತ್ತಾಗೆ ತೆರಳಿದರು. ಅಲ್ಲಿ ಆನಂದಿಯವರು ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಯನ್ನು ಓದಲು ಮತ್ತು ಮಾತನಾಡಲು ಕಲಿತರು.

ಸಮಾಜದ ವಿರೋಧದ ನಡುವೆಯೂ ಹೆಂಡತಿಯು ವೈದ್ಯ ಶಾಸ್ತ್ರವನ್ನು ಅಧ್ಯಯನ ಮಾಡಲು ಪ್ರೋತ್ಸಾಹಿಸಿದರು. ಅಮೆರಿಕಾಕ್ಕೆ ತೆರಳುವ ಮೊದಲು ಆನಂದಿಬಾಯಿಯು ಸೆರಾಂಪೋರ್ ಕಾಲೇಜು ಸಭಾಂಗಣದಲ್ಲಿ ಸಮುದಾಯವನ್ನು ಉದ್ದೇಶಿಸಿ ಮಾತನಾಡುವಾಗ, ಅಮೆರಿಕಾಕ್ಕೆ ಹೋಗುವ ಮತ್ತು ವೈದ್ಯಕೀಯ ಪದವಿ ಪಡೆಯುವ ತಮ್ಮ ನಿರ್ಧಾರವನ್ನು ವಿವರಿಸಿದರು. ಭಾರತದಲ್ಲಿ ಮಹಿಳಾ ವೈದ್ಯರ ಅಗತ್ಯವನ್ನು ಸಭೆಯಲ್ಲಿ ಇದ್ದವರಿಗೆ ಬಿಡಿಸಿ ಹೇಳಿದರು. ಸಾಂಸ್ಕೃತಿಕ ಕಟ್ಟುಪಾಡುಗಳಿಂದ ನಿರ್ಬಂಧಿಸಲ್ಪಟ್ಟಿರುವ ಹಿಂದೂ ಮಹಿಳೆಯರು, ಪುರುಷ ವೈದ್ಯರಿಗಿಂತ ಮಹಿಳಾ ವೈದ್ಯರುಗಳಿಂದ ಚಿಕಿತ್ಸೆ ಪಡೆಯುವುದು ಹೆಚ್ಚು ಆರಾಮದಾಯಕವೆಂದು ಹಾಗೂ ಮಹಿಳೆಯರು ದವಾಖಾನೆಗೆ ನಿಸ್ಸಂಕೋಚವಾಗಿ ಬಂದು ಚಿಕಿತ್ಸೆ ಪಡೆಯುತ್ತಾರೆ ಎಂಬುದನ್ನು ಮನದಟ್ಟು ಮಾಡಿದರು.

1800–1900ರ ಕಾಲಘಟ್ಟದಲ್ಲಿ ಗಂಡಂದಿರು ತಮ್ಮ ಹೆಂಡತಿಯರ ಶಿಕ್ಷಣದ ಮೇಲೆ ಗಮನಹರಿಸುವುದು ಅಸಾಧ್ಯವಾಗಿತ್ತು, ಮಹಿಳೆಯರನ್ನು ಗೃಹ ಕಾರ್ಯಕ್ಕೆ ಸೀಮಿತವಾಗಿ ಇಟ್ಟಿದ್ದರು. ಆನಂದಿಬಾಯಿಯವರು ಶಿಕ್ಷಣದ ಕಲ್ಪನೆಯನ್ನು ಹೊಂದಿದ್ದರಿಂದ ವಿದ್ಯೆ ಕಲಿಯುವುದಕ್ಕೆ ಅನುಕೂಲವಾಯಿತು. ಆ ಕಾಲಕ್ಕೆ ಯಾರೊಬ್ಬ ಮಹಿಳೆಯು ವೈದ್ಯರಾಗಿರಲಿಲ್ಲ, ಜಗತ್ತಿನಲ್ಲಿ ತನ್ನದೇ ಛಾಪು ಮೂಡಿಸಬೇಕೆಂಬ ಹಂಬಲದಿಂದ ವೈದ್ಯಕೀಯವನ್ನು ಕಲಿಯಬೇಕೆಂದು ಪಣತೊಟ್ಟರು, ಅದಕ್ಕೆ ಪೂರಕವಾಗಿ ಪತಿಯು ಪ್ರೋತ್ಸಾಹ ನೀಡಿದರು. ವೈದ್ಯಕೀಯ ಅಧ್ಯಯನಕ್ಕೆ ಆನಂದಿಯವರನ್ನು ಅಮೆರಿಕಕ್ಕೆ ಕಳುಹಿಸಿದರು, ಹೋಗುವಾಗ ಸಾರ್ವಜನಿಕ ಸಭೆಯೊಂದರಲ್ಲಿ ನಾನು ಒಬ್ಬರಾಗಿ ಸ್ವಯಂಸೇವಕಳಾಗಿ ಸೇವೆ ಸಲ್ಲಿಸುತ್ತೇನೆ ಎಂದು ಹೇಳಿದರು.

> "1800–1900ರ ಕಾಲಘಟ್ಟದಲ್ಲಿ ಗಂಡಂದಿರು ತಮ್ಮ ಹೆಂಡತಿಯರ ಶಿಕ್ಷಣದ ಮೇಲೆ ಗಮನಹರಿಸುವುದು ಅಸಾಧ್ಯವಾಗಿತ್ತು, ಮಹಿಳೆಯರನ್ನು ಗೃಹ ಕಾರ್ಯಕ್ಕೆ ಸೀಮಿತವಾಗಿ ಇಟ್ಟಿದ್ದರು. ಆನಂದಿಬಾಯಿಯವರು ಶಿಕ್ಷಣದ ಕಲ್ಪನೆಯನ್ನು ಹೊಂದಿದ್ದರಿಂದ ವಿದ್ಯೆ ಕಲಿಯುವುದಕ್ಕೆ ಅನುಕೂಲವಾಯಿತು. ಆ ಕಾಲಕ್ಕೆ ಯಾರೊಬ್ಬ ಮಹಿಳೆಯು ವೈದ್ಯರಾಗಿರಲಿಲ್ಲ, ಜಗತ್ತಿನಲ್ಲಿ ತನ್ನದೇ ಛಾಪು ಮೂಡಿಸಬೇಕೆಂಬ ಹಂಬಲದಿಂದ ವೈದ್ಯಕೀಯವನ್ನು ಕಲಿಯಬೇಕೆಂದು ಪಣತೊಟ್ಟರು, ಅದಕ್ಕೆ ಪೂರಕವಾಗಿ ಪತಿಯು ಪ್ರೋತ್ಸಾಹ ನೀಡಿದರು.

ಆನಂದಿಬಾಯಿ ಜೋಶಿಯವರು 1886ರಲ್ಲಿ ವೈದ್ಯಕೀಯ ಪದವಿ ಪಡೆದು ಭಾರತದ ಮೊದಲ ಮಹಿಳಾ ವೈದ್ಯರಾಗಿ ಗುರುತಿಸಿಕೊಂಡರು. ತನ್ನ 19ನೇ ವಯಸ್ಸಿನಲ್ಲಿ ತರಬೇತಿಯನ್ನು ಪ್ರಾರಂಭಿಸಿ ಪಾಶ್ಚಿಮಾತ್ಯ ವೈದ್ಯಕೀಯದಲ್ಲಿ ಔಪಚಾರಿಕವಾಗಿ ತರಬೇತಿ ಪಡೆದ ಮೊದಲ ಭಾರತೀಯ ಮಹಿಳೆಯಾದರು. ಅಮೆರಿಕಾದಲ್ಲಿ ಓದುವಾಗ ಶೀತ ಹವಾಮಾನ ಮತ್ತು ಒಗ್ಗದ ಆಹಾರ ಪದ್ಧತಿಯಿಂದ ಅವರ ಆರೋಗ್ಯ ಕೆಟ್ಟಿತು. ಅನಾರೋಗ್ಯದ ನಡುವೆಯೂ ಅವರ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ವೈದ್ಯಕೀಯ ಪದವಿ ಪಡೆದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದ ಇವರ ಸಾಧನೆಯನ್ನು ಮೆಚ್ಚಿ ರಾಣಿ ವಿಕ್ಟೋರಿಯಾರವರು ಅಭಿನಂದನಾ ಸಂದೇಶವನ್ನು ಕಳುಹಿಸಿದ್ದರು.

1886ರ ಕೊನೆಯಲ್ಲಿ ಆನಂದಿಬಾಯಿಯವರು ಭಾರತಕ್ಕೆ ಮರಳಿದರು, ಅವರ ಸಾಧನೆಯನ್ನು ಮೆಚ್ಚಿದ ಭಾರತೀಯರು ಅವರನ್ನು ಸಂಭ್ರಮದಿಂದ ಸ್ವಾಗತಿಸಿದರು. ಆ ಕ್ಷಣವನ್ನು ರಾಷ್ಟ್ರೀಯ ಹೆಮ್ಮೆಯ ಕ್ಷಣವೆಂದು ಪರಿಗಣಿಸಲಾಯಿತು. ಅಮೆರಿಕಾದಲ್ಲಿ ಇದ್ದಾಗಲೇ ಕಾಯಿಲೆಗೆ ತುತ್ತಾಗಿದ್ದರಿಂದ, ಅವರು ವೈದ್ಯಕೀಯ ವೃತ್ತಿ ಆರಂಭಿಸುವುದಕ್ಕೆ ಮುನ್ನವೇ ಅವರ ಆರೋಗ್ಯವು ಕ್ಷೀಣಿಸುತ್ತಲೇ ಇತ್ತು. ಆನಂದಿಬಾಯಿಯವರ ವಯಸ್ಸು 22 ವರ್ಷ ತುಂಬುವ ಕೆಲವೇ ವಾರಗಳ ಮೊದಲು ಫೆಬ್ರವರಿ, 1887ರಂದು ಪುಣೆಯಲ್ಲಿ ಅವರು ನಿಧನರಾದರು. ಮೊದಲ ಮಹಿಳಾ ವೈದ್ಯಳೆಂದು ಖ್ಯಾತಿ ಪಡೆಯುವುದಕ್ಕಷ್ಟೇ ಅವರ ಓದು ಸೀಮಿತವಾಯಿತು. ಅವರು ಪಡೆದ ವಿದ್ಯೆಯು ಸಾರ್ವಜನಿಕರ ಉಪಯೋಗಕ್ಕೆ ಬರಲೇ ಇಲ್ಲ ಎನ್ನಬಹುದು.

ಅಮೆರಿಕನ್ ಸ್ತ್ರೀವಾದಿ ಬರಹಗಾರ್ತಿ ಕ್ಯಾರೋಲಿನ್ ವೆಲ್ಸ್ ಹೀಲಿ ಡಾಲ್‌ರವರು ಜೋಷಿಯವರ ಜೀವನ ಚರಿತ್ರೆಯನ್ನು 1888ರಲ್ಲಿ ಬರೆದರು. ಜೀವನವನ್ನು ಆಧರಿಸಿದ 'ಆನಂದಿ ಗೋಪಾಲ್' ಎಂಬ ಹಿಂದಿ ಸರಣಿಯನ್ನು ದೂರದರ್ಶನವು ಪ್ರಸಾರ ಮಾಡಿತು. 'ಡಾ.ಆನಂದಿಬಾಯಿ ಜೋಶಿ ಅವರ ಕಾಲ ಮತ್ತು ಸಾಧನೆಗಳು' ಪುಸ್ತಕವನ್ನು ಮರಾಠಿಯಲ್ಲಿ ಡಾ.ಅಂಜಲಿ ಕೀರ್ತನೆ ಎಂಬುವವರು ಬರೆದಿದ್ದಾರೆ. ಭಾರತೀಯ ವಿಜ್ಞಾನವನ್ನು ಮುನ್ನಡೆಸುವ ಉದ್ದೇಶದಿಂದ ಲಕ್ನೋದ ಸರ್ಕಾರೇತರ ಸಂಸ್ಥೆ ಇನ್ಸ್ಟಿಟ್ಯೂಟ್ ಫಾರ್ ರಿಸರ್ಚ್ ಅಂಡ್ ಡಾಕ್ಯುಮೆಂಟೇಶನ್ ಸೈನ್ಸಸ್, ಇವರ ಹೆಸರಿನಲ್ಲಿ ಗೌರವಿಸುವ ಸಲುವಾಗಿ ಆನಂದಿಬಾಯಿ ಜೋಶಿ ಪ್ರಶಸ್ತಿಯನ್ನು ನೀಡುತ್ತಿದೆ.

ಡಾ.ಆನಂದಿಬಾಯಿ ಜೋಶಿಯವರು ಮರಣ ಹೊಂದಿ ಇಂದಿಗೆ 138 ವರ್ಷಗಳಾಗಿವೆ, ಅವರು ಬದುಕಿದ್ದು ಕೇವಲ 22 ವರ್ಷಗಳು ಮಾತ್ರ ಅವರು ಆರೋಗ್ಯ ಕ್ಷೇತ್ರದಲ್ಲಿ ವೈದ್ಯರಾಗಿ ಸೇವೆ ಮಾಡಬೇಕೆನ್ನುವ ಮಹತ್ವಾಕಾಂಕ್ಷೆಯು ತಮ್ಮ ಅನಾರೋಗ್ಯದಿಂದ ನುಚ್ಚುನೂರಾಯಿತು, ವಿಧಿಯಾಟ ಬಲ್ಲವರಿಲ್ಲ, ನಾವೊಂದು ಬಗೆದರೆ ದೈವವೊಂದು ಬಗೆವುದು ಎನ್ನುವ ಗಾದೆಗೆ ಶ್ರೀಮತಿ ಡಾ.ಆನಂದಿಬಾಯಿ ಗೋಪಾಲ್ ಜೋಶಿಯವರ ಬದುಕು ಉದಾಹರಣೆಯಾಗಿ ಇತಿಹಾಸದ ಪುಟದಲ್ಲಿ ದಾಖಲಾಗಿದೆ.

ಎಐ ಶೌಚಾಲಯವಾದರೂ ತೊಳೆದೀತೆ ಮನಕಂಟಿದ ಮೈಲಿಗೆಯ!?



ಕೃತಕ ಬುದ್ಧಿಮತ್ತೆ ಕಾಳ್ಗಿಚ್ಚಿನಂತೆ ನಮ್ಮ ಬದುಕನ್ನು ಆವರಿಸುತ್ತಿರುವುದು ನಮಗೆಲ್ಲ ತೀರ ತಡವಾಗಿ ಗಮನಕ್ಕೆ ಬರುತ್ತಿರುವ ಸಂಗತಿ. ನಮ್ಮ ಬದುಕಿನ ಹಲವು ರಂಗಗಳನ್ನು ಎಐ ಆವರಿಸುತ್ತಿರುವುದು ಸಂತೋಷಕ್ಕಿಂತ ಆತಂಕಗಳನ್ನೇ ಸೃಷ್ಟಿಸುವ ಮತ್ತು ನಮ್ಮ ನಾಳೆಗಳ ಬಗ್ಗೆ ನಮ್ಮನ್ನು ಚಿಂತಿತರನ್ನಾಗಿಸುವ ವಿದ್ಯಮಾನ. ಮಾನವನ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಇಂತಹದೊಂದು 'ವಿಶಿಷ್ಟ ಆವಿಷ್ಕಾರವಾಗಿದೆ' ಎನ್ನುತ್ತಾನೆ ನಮ್ಮ ಸಮಕಾಲೀನ ಇತಿಹಾಸಕಾರ ಯುವಲ್ ನೋ ಹರಾರಿ (Yuval Noah Harai). ಇನ್ನು ಹಲವು ಚಿಂತಕರು ಎಐ ತಂದೊಡ್ಡಬಹುದಾದ ಸಂಕಷ್ಟಗಳನ್ನು ನೆನೆದು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಏಕೆಂದರೆ ಇಲ್ಲಿಯವರೆಗೆ ಆದ ಆವಿಷ್ಕಾರಗಳು, ಕೈಗಾರಿಕಾಕ್ರಾಂತಿಯಿಂದ ಹೊರಹೊಮ್ಮಿದ ದೈತ್ಯ ಯಂತ್ರಗಳು, ಹ್ಯೂಮನ್ ಏಜೆನ್ಸಿ ಇಲ್ಲದೆ ಸ್ವಯಂ ಕೆಲಸ ನಿರ್ವಹಿಸಲು ಸಾಧ್ಯವಿರಲಿಲ್ಲ. ಆದರೆ ಎಐ ಹಾಗಲ್ಲ. ಹ್ಯೂಮನ್ ಇಂಟರ್ವೆನ್ಷನ್ ಇಲ್ಲದೆಯೇ ಕೆಲಸ ನಿರ್ವಹಿಸಬಲ್ಲದು ಮಾತ್ರವಲ್ಲ ಮನುಷ್ಯನ ಸಲಹೆ ಅಥವಾ ಆದೇಶ ಇಲ್ಲದೆಯೇ ತನ್ನಷ್ಟಕ್ಕೆ ತಾನೇ ನಿರ್ಧಾರ ತೆಗೆದುಕೊಳ್ಳಬಲ್ಲದು ಎಂದು ಹೇಳಲಾಗುತ್ತಿದೆ ಆದ್ದರಿಂದ ಈ ಬೆಳವಣಿಗೆ ಅತ್ಯಂತ ವಿಸ್ಮಯಕಾರಿ ಮಾತ್ರವಲ್ಲ ಅಷ್ಟೇ ಆಘಾತಕಾರಿ ಕೂಡ. ಇದು ಮನುಷ್ಯನನ್ನು ಕೇವಲ ಅಸಹಾಯಕನನ್ನಾಗಿ ಮಾಡುವುದಿಲ್ಲ. ಬದಲಾಗಿ ಮನುಷ್ಯ ನಿಭಾಯಿಸುತ್ತಿರುವ ಮುಕ್ಕಾಲು ಭಾಗ ಕ್ಷೇತ್ರಗಳಲ್ಲಿ ಮನುಷ್ಯನ ಅಸ್ತಿತ್ವವೇ ನಿಷ್ಪ್ರಯೋಜಕವಾಗುವಂತೆ ಮಾಡುತ್ತದೆ ಎಂಬ ಊಹಾಪೋಹಗಳು ಇಂದು ದಟ್ಟವಾಗುತ್ತಿವೆ. ಈಗಾಗಲೇ ಹಲವು ವೃತ್ತಿಗಳನ್ನು ನಿಭಾಯಿಸಲು ಎಐ ಬಳಕೆಯಾಗುತ್ತಿರುವುದು ಒಂದೆಡೆಯಾದರೆ ವೃತ್ತಿ ಕಳೆದುಕೊಂಡರೆ ಮುಂದೇನು ಎಂಬ ಆತಂಕ ಭಿನ್ನಕ್ಷೇತ್ರದ ಸಾವಿರಾರು ಉದ್ಯೋಗಿಗಳಲ್ಲಿ ಮನೆ ಮಾಡಿದೆ.


ಎಐ ಬಳಕೆಯಿಂದ ನಮ್ಮ ದಿನನಿತ್ಯದ ಕೆಲಸಗಳನ್ನು ಅನಾಯಾಸವಾಗಿ ನಡೆಸಲು, ಅದರ ಎಲ್ಲ ಸಾಧ್ಯತೆಗಳನ್ನು ಶೋಧಿಸಿ ಅದರ ನೂತನ ಅವತಾರಗಳನ್ನು ತಂತ್ರಜ್ಞರು ಆವಿಷ್ಕರಿಸುತ್ತಲೇ ಇದ್ದಾರೆ. ಇದಕ್ಕೆ ನಮ್ಮ ದೈನಂದಿನ ಬದುಕಿನಲ್ಲಿ ಅನುಭವಕ್ಕೆ ಬರುವ ಎಐ ಆಧಾರಿತ ಸೆನ್ಸಾರ್‌ಗಳ ಮೂಲಕ ಸೃಷ್ಟಿಸಿರುವ ಮಾದರಿಗಳನ್ನು ಉದಾಹರಣೆಯಾಗಿ ನೋಡಬಹುದು. ಬಹುಕೋಟಿ ವ್ಯಾಪಾರ ಮಳಿಗೆಗಳಲ್ಲಿ ಬಾಗಿಲುಗಳು ತಾವಾಗಿಯೆ ತೆರೆಯುವುದು, ಗ್ರಾಹಕರು ಮೆಟ್ಟಿಲು ಸಮೀಪಿಸುತ್ತಿದ್ದಂತೆ ಶುರುವಾಗುವ ಎಲಿವೇಟರ್‌ಗಳು, ನಲ್ಲಿಯ ಸಮೀಪ ಕೈಯೊಡ್ಡಿದಾಗ ನೀರು ತಾನಾಗಿಯೆ ಬರುವುದು, ಚಾಲಕನಿಲ್ಲದ ಕಾರುಗಳು ಚಾಲನೆಗೊಳ್ಳುವುದು ಇತ್ಯಾದಿ.., ಈ ಮಧ್ಯೆ ಶೌಚಾಲಯಕ್ಕೂ ಬಂತು ಎಐ ಎಂಬ ಪತ್ರಿಕಾ ವರದಿ ಒಂದನ್ನು ಓದಿ ಆಶ್ಚರ್ಯವೇನೂ ಎನ್ನಿಸಲಿಲ್ಲ. ಆಗಲೇ ಶೌಚಾಲಯಗಳಲ್ಲಿ ಎಐ ಆಧಾರಿತ ಕೃತಕ ಆವಿಷ್ಕಾರಗಳ ಮೂಲಕ ಶೌಚಾಲಯದ ಸ್ವಚ್ಛತೆಯನ್ನು ನಿಭಾಯಿಸಲಾಗುತ್ತಿದೆ.

ಆದರೆ ಈ ವಿದ್ಯಮಾನ ಮುಲ್ಕ್‌ರಾಜ್ ಆನಂದ ಬರೆದ ಅನ್‌ಟಚಬಲ್(untouchable) ಎಂಬ ಕಾದಂಬರಿಯನ್ನು ನೆನಪಿಸುತ್ತದೆ. ಈ ಕಾದಂಬರಿ ಪ್ರಕಟಗೊಂಡದ್ದು (1935) ಸ್ವತಂತ್ರಪೂರ್ವ ಭಾರತದ ಸಂದರ್ಭದಲ್ಲಿ. ಇದು ಶೌಚಾಲಯವನ್ನು ಶುಚಿಗೊಳಿಸುವ ಬಾಖಾ ಎನ್ನುವ ಒಬ್ಬ ತರುಣನ ಬದುಕಿನ ಒಂದು ದಿನದ ಅವಧಿಯಲ್ಲಿ ನಡೆದ ಘಟನೆಗಳ ಸುತ್ತ ಹೆಣೆದ ಕಥೆ.

ಬಡತನ ಮಾತ್ರ ಯಾರಿಗೂ ತಂದೊಡ್ಡಲಾರದ ಮಾನಸಿಕ ನೋವು. ಅವಮಾನ ಹಾಗೂ ಕೀಳರಿಮೆಯನ್ನು ಬಾಖಾ ಸಮಾಜದ ಅತ್ಯಂತ ಕೆಳಸ್ತರದಲ್ಲಿ ಹುಟ್ಟಿದ್ದಕ್ಕಾಗಿ ಅನುಭವಿಸುತ್ತಾನೆ. ಶೌಚಾಲಯ ತೊಳೆಯುವುದೇ ಇವನ ದಿನನಿತ್ಯದ ಕೆಲಸ. ತರುಣ ಮತ್ತು ಸದೃಢನಾದ ಬಾಖಾ ತನ್ನಿಷ್ಟದ ಹಾಡುಗಳನ್ನು ಗುನುಗುನಿಸುತ್ತಾ ತಾನು ಮಾಡುವ ಕೆಲಸವನ್ನು ಸಂತೋಷದಿಂದಲೇ ನಿಭಾಯಿಸುತ್ತಿರುತ್ತಾನೆ. ಎಲ್ಲರಂತೆ ತಾನೂ ಅಕ್ಷರ ಕಲಿಯಬೇಕು. ಸಂಪಾದನೆ ಮಾಡಬೇಕು. ಇಂಗ್ಲಿಷ್ ಬಾಬುಗಳಂತೆ ಬಟ್ಟೆ ಹಾಕಿಕೊಂಡು ಜೀವನದ ಸುಖವನ್ನು ಅನುಭವಿಸಬೇಕೆಂದು ಹಂಬಲಿಸಿ ಕನಸು ಕಾಣುತ್ತಿರುತ್ತಾನೆ. ಹಾಗೆ ಮೈ ಮರೆತು ಒಂದು ದಿನ ಬೀದಿಯಲ್ಲಿ ನಡೆದಾಡುವಾಗ ಅಪ್ರಜ್ಞಾಪೂರ್ವಕವಾಗಿ ಅವನು ಒಬ್ಬ ಕುಲೀನ ಪಂಡಿತನನ್ನು ಸ್ಪರ್ಶಿಸುತ್ತಾನೆ. ಏನಾಯಿತು ಎಂದು ಕಣ್ಣು ಬಿಡುವಷ್ಟರಲ್ಲಿ ಬೀದಿಯಲ್ಲೇ ಅವನ ಚಾರಿತ್ರ್ಯ ಹಾಗೂ ವ್ಯಕ್ತಿತ್ವ ವಧೆ ನಡೆದೇ ಹೋಗುತ್ತದೆ. ಈ ಘಟನೆ ಅವನ ಎಲ್ಲ ಕನಸುಗಳನ್ನು ನುಚ್ಚುನೂರಾಗಿಸುವುದಲ್ಲದೆ ಆತನನ್ನು ಅಂತರ್ಮುಖಿಯನ್ನಾಗಿಸುತ್ತದೆ. ತೀವ್ರ ಮಾನಸಿಕ ಖಿನ್ನತೆ ಮತ್ತು ತನ್ನ ವ್ಯಕ್ತಿತ್ವದ ತೇಜೋವಧೆಯಿಂದ ವಿಹ್ವಲನಾಗಿ ತನ್ನ ನೋವುಗಳಿಗೆ ಕಾರಣಗಳನ್ನು ಹುಡುಕುತ್ತಾ ಹೊರಟಾಗ ಅವನಿಗೆ ಒಬ್ಬ ಕ್ರೈಸ್ತ ಪಾದ್ರಿ ಪ್ರೀತಿಯಿಂದ ಸಂತೈಸುತ್ತಾನೆ. ಕ್ರೈಸ್ತಧರ್ಮದ ಏಸು, ಎಲ್ಲರನ್ನು ಪ್ರೀತಿಸುವ ಹಾಗೂ ಯಾರನ್ನೂ ಕೀಳೆಂದು ಭಾವಿಸದ ನಿಜವಾದ ದೇವರು. ನಿನ್ನೆಲ್ಲ ನೋವು ಕಷ್ಟಗಳಿಗೆ ಏಸು ಮಾರ್ಗಕ್ಕೆ ಬಾ ಎನ್ನುತ್ತಾನೆ. ಆದರೆ ಬಾಖಾ ಕ್ರಿಸ್ತನಾಗುವುದಿಲ್ಲ. ಏಕೆಂದರೆ ಆ ಕ್ರೈಸ್ತ ಪಾದ್ರಿ ಮತ್ತೆ ಮತ್ತೆ ಬೈಬಲ್‌ನಿಂದ ಉಲ್ಲೇಖಿಸುವ ಶ್ಲೋಕಗಳು ಅವನಿಗೆ ಬೇಸರ ಮೂಡಿಸುತ್ತವೆ. ಅಷ್ಟೇ ಏಕೆ, ಆ ಪಾದ್ರಿಯ ಮನೆಗೆ ಹೋದಾಗ ಆತನ ಹೆಂಡತಿ ಬಾಖಾನನ್ನು ಕೀಳಾಗಿ ಹೀಯ್ಯಾಳಿಸುವುದಲ್ಲದೆ ತನ್ನ ಗಂಡನಾದ ಪಾದ್ರಿಯನ್ನೂ ಮೂದಲಿಸುವುದು ಬಾಖಾನಿಗೆ ಹೇಸಿಗೆ ಮೂಡಿಸುತ್ತದೆ. ಹಾಗಾಗಿ ತನ್ನ ನೋವುಗಳಿಗೆ ಧಾರ್ಮಿಕ ಮತಾಂತರ ಪರಿಹಾರವಲ್ಲವೆಂದುಕೊಂಡು ಮುಂದೆ ನಡೆಯುತ್ತಾನೆ. ಆ ಊರಿನ ರೈಲು ನಿಲ್ದಾಣ ತಲುಪಿದಾಗ ಅಲ್ಲಿ ನೆರೆದಿರುವ ಜನಜಂಗುಳಿಯಿಂದ ಮಹಾತ್ಮಗಾಂಧಿ ಬರುತ್ತಿದ್ದಾರೆ ಎಂದು ತಿಳಿಯುತ್ತಾನೆ. ಮಹಾತ್ಮಗಾಂಧಿ ಬಂದು ಅಲ್ಲಿನ ಜನರನ್ನು, ವಿಶೇಷವಾಗಿ ಹರಿಜನರನ್ನು ಉದ್ದೇಶಿಸಿ ಮಾತನಾಡುತ್ತಾ ಅಸ್ಪೃಶ್ಯತೆ ಹಿಂದೂಧರ್ಮಕ್ಕೆ ಅಂಟಿಕೊಂಡ ಕಪ್ಪುಚುಕ್ಕೆ. ಅದನ್ನು ಹೋಗಲಾಡಿಸಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕು. ಅಲ್ಲದೆ ನಮ್ಮ ಸಂಪ್ರದಾಯದಲ್ಲಿ ನಂಬಿಕೆ ಕಳೆದುಕೊಳ್ಳಬಾರದು ಎನ್ನುತ್ತ ಶೌಚಾಲಯ ತೊಳೆಯುವ ಕೆಲಸ ಕೀಳಲ್ಲ ಎನ್ನುತ್ತಾರೆ. ಇದಲ್ಲದೆ ಹರಿಜನರಿಗೆ ಎಲ್ಲ ರೀತಿಯ ಸಮಾನತೆಯನ್ನು ಒದಗಿಸಲು ಎಲ್ಲರೂ ಸಂಕಲ್ಪ ಮಾಡಬೇಕೆಂಬ ಮಾತುಗಳು ಬಾಖಾನಿಗೆ ಗಾಂಧಿ ಬಗ್ಗೆ ಒಳ್ಳೆಯ ಅಭಿಪ್ರಾಯ ಹುಟ್ಟಿಸುತ್ತವೆಯೇ ಹೊರತು ತನ್ನ ಸಮಸ್ಯೆಗೆ ಪರಿಹಾರವಲ್ಲ ಎಂದೆನಿಸುತ್ತದೆ. ಮುಂದೇನು ಎನ್ನುವಾಗ ಅದೇ ಜನಜಂಗುಳಿಯಲ್ಲಿ ಇರುವ ಇಕ್ಬಾಲ್‌ನಾಥ್ ಸರ್‌ಶಾರ್ ಎಂಬ ಒಬ್ಬ ಕವಿಯಿಂದ ಬಾಖಾನ ತಿಳಿವಿಗೆ ಬಂದದ್ದೇ ಅಂದಿನ ದಿನಗಳಲ್ಲಿ ಭಾರತಕ್ಕೆ ಬರಲಿರುವ ಫ್ಲಷಿಂಗ್ ಟಾಯ್ಲೆಟ್ ಸಿಸ್ಟಮ್. ಇದು ಯಾರ ಸಹಾಯ ವಿಲ್ಲದೆ ನಿರಾಯಾಸವಾಗಿ ಶೌಚಾಲಯಗಳನ್ನು ಶುಚಿಗೊಳಿಸುತ್ತದೆ ಎಂದು ತಿಳಿಯುತ್ತಾನೆ. ತನ್ನ ಸಮಸ್ಯೆಗಳಿಗೆ ಒಂದು ಅತ್ಯಂತ ಸೂಕ್ತ ಪರಿಹಾರ ಸಿಕ್ಕಂತಾಗಿ ಈ ಸಾಧನ ಅಸ್ಪೃಶ್ಯತೆಯನ್ನೂ ಹೋಗಲಾಡಿಸುತ್ತದೆ ಎಂದುಕೊಳ್ಳುತ್ತ ಆ ಫ್ಲಷಿಂಗ್ ಟಾಯ್ಲೆಟ್ ಸಿಸ್ಟಮ್ ಬಗ್ಗೆ ತನ್ನ ತಂದೆಗೆ ತಿಳಿಸಬೇಕೆನ್ನುವ ತವಕದಲ್ಲಿ ಮನೆಯತ್ತ ಹೆಜ್ಜೆ ಹಾಕುತ್ತಾನೆ ಬಾಖಾ.

> ಇಂದು ಹಲವು ರಾಷ್ಟ್ರಗಳು ತಮ್ಮ ದೇಶ, ಭಾಷೆ, ಧರ್ಮ, ಸಂಸ್ಕೃತಿಗಳೇ ಶ್ರೇಷ್ಠ ಎಂದು ನಡೆಸುತ್ತಿರುವ ಯುದ್ಧಗಳಲ್ಲಿ ಮತ್ತು ರಾಷ್ಟ್ರವಾದದ ಹೆಸರಿನಲ್ಲಿ ಸೃಷ್ಟಿಸುತ್ತಿರುವ ಸಂಕಥನಗಳ ಹೊಳೆಯಲ್ಲಿ ಮನುಷ್ಯತ್ವ, ಮಾನವೀಯತೆ ಮುಳುಗಿ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಶೌಚಾಲಯದ ಕೊಳೆಯನ್ನೇನೊ ಎಐ ತಂತ್ರಾಂಶ ಬಳಸಿ ಸ್ವಚ್ಛಗೊಳಿಸಬಹುದು. ಆದರೆ ಮೇಲು–ಕೀಳು, ಶ್ರೇಷ್ಠ–ಕನಿಷ್ಠ, ನಾಗರಿಕ–ಅನಾಗರಿಕ ಎಂಬ ಮನದ ಮೈಲಿಗೆಯನ್ನು ತೊಳೆಯಲು ಯಾವ ತಂತ್ರಾಂಶ ಬಳಸೋಣ...?

ಭೌತಿಕ ಪರಿಶ್ರಮ ಬೇಡುವ ಕೆಲಸಗಳನ್ನೆಲ್ಲ ಟೆಕ್ನಾಲಜಿ ಬಳಸಿ ಮಾಡುತ್ತೇವೆ ನಿಜ. ಕೈಗಾರಿಕಾ ಕ್ರಾಂತಿ ಹಾಗೂ ಈ ಹಿಂದಿನ ವೈಜ್ಞಾನಿಕ ಆವಿಷ್ಕಾರಗಳು ದೊಡ್ಡ ಮಟ್ಟಿಗೆ ಭೌತಿಕ ಶ್ರಮ ಕಡಿಮೆ ಮಾಡಿದ್ದವು. ಈಗ ಇನ್ನೂ ಹೆಚ್ಚಿನ ಭೌತಿಕ ಶ್ರಮವನ್ನು ತಗ್ಗಿಸುವ ಯಂತ್ರೋಪಕರಣಗಳು ಆವಿಷ್ಕಾರಗೊಳ್ಳುತ್ತಲೇ ಇವೆ. ಆದರೆ ಈ ಯಂತ್ರೋಪಕರಣಗಳೇ ಪುರುಷ ಪ್ರಗತಿಯೆಂದು ಭಾವಿಸಿದರೆ ತಪ್ಪಾದೀತು. ಇಂತಹ ವೈಜ್ಞಾನಿಕ ಆವಿಷ್ಕಾರಗಳು ನಮ್ಮ ದಿನನಿತ್ಯದ ಬೌದ್ಧಿಕ ಹಾಗೂ ಭೌತಿಕ ಶ್ರಮ ಮಾತ್ರ ತಗ್ಗಿಸುತ್ತಿವೆಯೇ ಹೊರತು ನಮ್ಮಲ್ಲಿ ವೈಚಾರಿಕತೆ ಬೆಳೆಸಲು ವಿಫಲವಾಗುತ್ತಿವೆ. ಮಂಗಳನ ಅಂಗಳದಲ್ಲಿ ಮನೆ ಕಟ್ಟುವ ಕನಸು ಕಾಣುತ್ತಿರುವ ನಾವುಗಳು ನಮ್ಮ ಮನದ ಅಂಗಳದ ತಾರತಮ್ಯ ತೊರೆಯಲು ಸೋತಿದ್ದೇವೆ. ಇಂದು ಹಲವು ರಾಷ್ಟ್ರಗಳು ತಮ್ಮ ದೇಶ, ಭಾಷೆ, ಧರ್ಮ, ಸಂಸ್ಕೃತಿಗಳೇ ಶ್ರೇಷ್ಠ ಎಂದು ನಡೆಸುತ್ತಿರುವ ಯುದ್ಧಗಳಲ್ಲಿ ಮತ್ತು ರಾಷ್ಟ್ರವಾದದ ಹೆಸರಿನಲ್ಲಿ ಸೃಷ್ಟಿಸುತ್ತಿರುವ ಸಂಕಥನಗಳ ಹೊಳೆಯಲ್ಲಿ ಮನುಷ್ಯತ್ವ ಮಾನವೀಯತೆ ಮುಳುಗಿ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಶೌಚಾಲಯದ ಕೊಳೆಯನ್ನೇನೊ ಎಐ ತಂತ್ರಾಂಶ ಬಳಸಿ ಸ್ವಚ್ಛಗೊಳಿಸಬಹುದು. ಆದರೆ ಮೇಲು–ಕೀಳು, ಶ್ರೇಷ್ಠ–ಕನಿಷ್ಠ, ನಾಗರಿಕ–ಅನಾಗರಿಕ ಎಂಬ ಮನದ ಮೈಲಿಗೆಯನ್ನು ತೊಳೆಯಲು ಯಾವ ತಂತ್ರಾಂಶ ಬಳಸೋಣ...?



ಡಾ. ನಾಗೇಶ ಡೂಗನವರ
ಲೇಖಕರು
ಮೊ.: 7022173723

ವಾರಭವಿಷ್ಯ

20.07.2025 ರಿಂದ 26.07.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಚಂದ್ರ–ವೃಷಭ, ಮಿಥುನ, ಕಟಕ, ಕುಜ–ಸಿಂಹ, ಬುಧ–ಕಟಕ, ಗುರು–ವೃಷಭ, ಶುಕ್ರ–ವೃಷಭ, ಮಿಥುನ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭ ಚೆನ್ನಾಗಿದೆ. ಉಚ್ಛ ಚಂದ್ರನ ದೆಶೆಯಿಂದ ದ್ರವ್ಯಲಾಭ, ನೂತನ ವಸ್ತ್ರ–ಆಭರಣ ಪ್ರಾಪ್ತಿ. ಇಚ್ಛಿತ ಕಾರ್ಯಗಳಲ್ಲಿ ಸಫಲತೆ. ವಾರ ಮಧ್ಯೆ ಅನಾಲೋಚಿತ ವಾಗ್ದಾನ ನೀಡಿ ತೊಂದರೆಗೆ ಗುರಿಯಾಗುವಿರಿ. ನೀವು ನಿರೀಕ್ಷೆ ಮಾಡಿರದ ಖರ್ಚುಗಳು ಎದುರಾಗುವುದು. ಸ್ವೇಚ್ಛಾಚಾರದಿಂದ ಕಷ್ಟಕ್ಕೆ ಗುರಿಯಾಗುವಿರಿ. ಸುರಕ್ಷಿತವಾಗಿ ವಾಹನ ಚಲಿಸಿ ಇತರರೂ ಸುರಕ್ಷಿತವಾಗಿರಲಿ.

ಶ್ರೀ ಗಣಪತಿ ಉಪಾಸನೆ, ಶುಭ ಸಂಖ್ಯೆ–6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಗುರುದರ್ಶನದಿಂದ ಗುರಿ ಕಾಣುತ್ತದೆ. ಹಣಕಾಸಿನ ಪರಿಸ್ಥಿತಿ ಉತ್ತಮವಾಗಿರುತ್ತದೆ. ಸಾಲ ತಂದರೂ ಸದ್ವಿನಿಯೋಗವಾಗಿ ಧನಲಾಭವನ್ನು ಹೊಂದುವಿರಿ. ವ್ಯಾಪಾರ–ವ್ಯವಹಾರಗಳು ಚುರುಕಾಗಿ ನಡೆಯುವುದು. ನಿಮ್ಮ ಬುದ್ಧಿ ಕುಶಲತೆಯಿಂದ ಎದುರಾಳಿಗಳನ್ನು ಜಯಿಸುವಿರಿ. ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಇದೆ. ಅಸೂಯಾಪರರಿದ್ದಾರೆ. ಅವರನ್ನು ಕಡೆಗಣಿಸಿ ನಡೆಯಿರಿ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–4

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಪ್ತಾಹದ ಆದಿಗೆ ಚಂದ್ರಗ್ರಹ ಸಂಚಾರ ಶುಭವಿದೆ. ಈ ಹಿಂದೆ ಮಾಡಿದ್ದ ಸದ್ವಿಚಾರಗಳು ಫಲ ನೀಡುವ ಸಮಯ ಬಂದಿದೆ. ಅಮೂಲ್ಯ ಸಂಪತ್ತು ಗಳಿಕೆಯ ಅವಕಾಶವಿದೆ. ವಾರದ ಉತ್ತರಾರ್ಧಕ್ಕೆ ದುಂದು ವೆಚ್ಚಗಳಿಂದ ಜೇಬು ಖಾಲಿ. ಸ್ವಂತ ಜನರೇ ದುಃಖಕ್ಕೆ ಕಾರಣರಾಗುವರು. ಶರೀರದಲ್ಲಿ ನಿಶ್ಶಕ್ತಿ ಕಾಡುವುದು. ದಿನಚರ್ಯೆಯಲ್ಲಿ ಮೆಡಿಟೇಶನ್ ಇರಲಿ.

ಶ್ರೀ ರಾಮನಮ ಜಪ. ಶುಭ ಸಂಖ್ಯೆ–2

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆ ಇದ್ದಲ್ಲಿ ಗುರಿಯನ್ನು ಸಾಧಿಸಲು ನಿಮ್ಮ ರಾಶ್ಯಾಧಿಪತಿ ಚಂದ್ರನ ಬೆಂಬಲ ನಿಮಗಿದೆ. ಮಾತಿನಂತೆ ನಡೆದು ಮನ್ನಣೆಗೆ ಪಾತ್ರರಾಗುವಿರಿ. ಚಂದ್ರ ಮನೋವಿಕಾರಗಳಿಗೂ ಕಾರಣಕರ್ತ ಗ್ರಹ. ಮನಸ್ಸು ಹತೋಟಿಯಲ್ಲಿ ಇರಲಿ. ಖಯ್ಯಾಲಿ ಪ್ರವಾಸಗಳಿಂದ ನಷ್ಟವೇ ಹೆಚ್ಚು. ವಾರದ ಕಡೆಗೆ ಅನ್ಯಕ್ಷೇತ್ರವಾಸ ಹಾಗೂ ತಾಪತ್ರಯಗಳು.

ಶ್ರೀ ದುರ್ಗಾ ಪರಮೇಶ್ವರಿ ದರ್ಶನ. ಶುಭ ಸಂಖ್ಯೆ–8

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ವಾರ ಪೂರ್ತ ಗ್ರಹ ಸಂಚಾರಗಳು ನಿಮಗೆ ಅನುಕೂಲಕರವಾಗಿವೆ. ವಾರದ ಆದಿಗೆ ಆಮೋದ–ಪ್ರಮೋದಗಳಲ್ಲಿ ಕಾಲ ಕಳೆಯುವುದು. ನೂತನ ವ್ಯಾಪಾರ ಪ್ರಾರಂಭಿಸಲು ಪೂರ್ವ ತಯಾರಿಗಳನ್ನು ಮಾಡಿಕೊಳ್ಳಲು ಅಡ್ಡಿ ಇಲ್ಲ. ಗುರುಕೃಪೆಯಿಂದ ಬದುಕು ಸಮೃದ್ಧವಾಗಲಿದೆ. ಸರ್ಕಾರಿ ನೌಕರರಿಗೆ ಬಡ್ತಿ ದೊರೆಯುವ ಸಂಭವವಿದೆ. ನೂತನ ವಸ್ತು ವಾಹನ ಮನೆಗೆ ಬರುವುದು.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ–1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಮೌನವಾಗಿರುವುದರಿಂದ ಕಲಹವಿಲ್ಲ ಎಂಬ ತತ್ವವನ್ನು ಈ ಸಪ್ತಾಹದಲ್ಲಿ ಪಾಲಿಸಿದರೆ ಒಳ್ಳೆಯದು. ನಿಮ್ಮ ತಪ್ಪುಗಳನ್ನು ಅವಲೋಕಿಸಿಕೊಳ್ಳಿ. ಹಳೆಯ ಸಂಬಂಧಗಳನ್ನು ಸುಧಾರಿಸಲು ಪ್ರಯತ್ನಿಸಿ. ಕೈಗೆ ಬಂದ ಹಣ ಬಂದಂತೆಯೇ ಖರ್ಚಾಗುವುದು. ಹಣಕಾಸು ವ್ಯವಹಾರದಲ್ಲಿ ವಂಚನೆಗೆ ಗುರಿಯಾಗುವ ಸಾಧ್ಯತೆ ಇದೆ. ವಾರಾಂತ್ಯಕ್ಕೆ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗುವುದರಿಂದ ಧನ್ಯತಾಭಾವ.

ಶ್ರೀ ಶ್ರೀನಿವಾಸ ಉಪಾಸನೆ, ಶುಭ ಸಂಖ್ಯೆ–7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸ್ಥಿರಾಸ್ತಿ ವಿಲೇವಾರಿಯ ವಿಷಯದಲ್ಲಿ ಲಾಭವನ್ನು ನಿರೀಕ್ಷಿಸಬಹುದು. ಸೃಜನಶೀಲ ವ್ಯಕ್ತಿಗಳಿಗೆ, ಸಂಶೋಧಕರಿಗೆ ಧನಾತ್ಮಕ ಪ್ರತಿಫಲ ಹಾಗೂ ಪ್ರಶಸ್ತಿ ದೊರೆಯುವ ಸಂಭವವಿದೆ. ಸ್ನೇಹಿತರ ಹಾಗೂ ಗುರು ಹಿರಿಯರ ಸಹಕಾರ ಪ್ರಾಪ್ತಿಯಾಗುವುದು. ಗುಪ್ತ ವಿದ್ಯೆ ಕಲಿಯಲು ಆಸಕ್ತಿ ಮೂಡುವುದು. ಹಲವರಿಗೆ ವಿದೇಶ ಸಂಚಾರ ಯೋಗವಿದೆ. ಶೀತ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ವಾರದ ಆದಿಗೆ ಉದ್ಯೋಗ, ವ್ಯವಹಾರಗಳಲ್ಲಿ ಅಲ್ಪ ಮುನ್ನಡೆಯಷ್ಟೇ. ವಾಹನಗಳ ವ್ಯವಹಾರದಲ್ಲಿ ಕಹಿ ಅನುಭವ. ಆರ್ಥಿಕಾಭಿವೃದ್ಧಿ ಇದ್ದಾಗ್ಯೂ ಸಾಲಗಾರರ ಒತ್ತಡ. ಮುಖ್ಯ ವಿಷಯಗಳಲ್ಲಿ ಅನುಭವಿಗಳ ಮಾರ್ಗದರ್ಶನ ಪಡೆಯುವುದು ಉತ್ತಮ, ಅನ್ಯಥಾ ಅನ್ಯರ ಆಗ್ರಹಕ್ಕೆ ಗುರಿಯಾಗುವಿರಿ. ಫರ್ನಿಚರ್ ವ್ಯಾಪಾರಿಗಳಿಗೆ ದೊಡ್ಡ ಆರ್ಡರ್ ದೊರೆಯುವುದು. ಮಂಡಿ ನೋವು ಕಾಡಿಸೀತು.

ಶ್ರೀ ಕಾರ್ತಿಕೇಯ ಆರಾಧನೆ. ಶುಭ ಸಂಖ್ಯೆ–6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಮಿತ್ರಾಗಮನ, ಸುಭೋಜನ, ಶಯನ ಸುಖಗಳೊಂದಿಗೆ ವಾರಕ್ಕೆ ಸ್ವಾಗತ. ವಿದ್ಯಾ ಪ್ರಸಂಗಗಳಲ್ಲಿ ಗುರುಜನರ ಮಾರ್ಗದರ್ಶನ ದೊರೆತು, ಉನ್ನತವಾದುದನ್ನು ಸಾಧಿಸುವಿರಿ. ನಿಮ್ಮ ಸಾಧನೆಗಳಲ್ಲಿ ನಿಮ್ಮ ಶ್ರೀಮತಿಯ ಸಹಕಾರವೂ ದೊರೆಯಲಿದೆ. ಸರ್ಕಾರಿ ನೌಕರರು ತಮ್ಮ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಅಸಮರ್ಥವಾಗಿ ಹಿರಿಯ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗುವರು.

ಶ್ರೀ ಶಿರಡಿ ಸಾಯಿಬಾಬಾ ಪ್ರಾರ್ಥನೆ. ಶುಭ ಸಂಖ್ಯೆ–4

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ವಾರದ ಪೂರ್ವಾರ್ಧ ಚಂದ್ರಗ್ರಹದ ಗೋಚರ ಶುಭವಿದೆ. ಪ್ರೀತಿ ಪಾತ್ರರ ಮಿಲನ, ಅತಿಥಿಗಳ ಸತ್ಕಾರದಿಂದ ಸಂತೃಪ್ತಿ. ಮಾತೃ ಸೇವೆಯಿಂದ ಮನಸ್ಸಿಗೆ ತೃಪ್ತಿ. ಹೋಟೆಲ್, ಕ್ಷೀರೋತ್ಪನ್ನ ಮಾರಾಟಗಾರರಿಗೆ ಹೇರಳ ಧನಲಾಭವಾಗುವುದು. ನಿಮ್ಮ ರಾಶ್ಯಾಧಿಪತಿ ಶನಿದೇವನ ಶುಭ ಗೋಚರ ಫಲವಾಗಿ ಶತ್ರುನಾಶ, ಋಣ ಮುಕ್ತಿ, ರೋಗ ನಿವೃತ್ತಿಯಂತಹ ಫಲಗಳನ್ನು ಅನುಭವಿಸುವಿರಿ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–9

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮಗೆ ಸಾಡೇ ಸಾತಿ ಶನಿಯ ಕಡೆಯ ಚರಣ ಮುಂದುವರೆದಿದೆ. ಗುರು ಕೃಪೆಯ ಬಲದಿಂದ 'ಬಂದದ್ದೆಲ್ಲಾ ಬರಲಿ ಗೋವಿಂದನ ದಯ ಇರಲಿ' ಎಂಬಂತೆ ಮುಂದೆ ಸಾಗಿ. ಕೈಗೊಂಡ ಕೆಲಸ ಕಾರ್ಯಗಳಲ್ಲಿ ಸಫಲತೆಯನ್ನು ಕಾಣುವಿರಿ. ಕೃಷಿಕರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರೆಯುವುದು. ಸಹೋದರರಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ಕೊನೆಗೊಳ್ಳಲಿದೆ. ಅಕಾಲ ಭೋಜನದಿಂದ ಆರೋಗ್ಯ ಕೆಡುತ್ತದೆ.

ಶ್ರೀ ಬನ್ನಿಮರ ಪ್ರದಕ್ಷಿಣೆ. ಶುಭ ಸಂಖ್ಯೆ–1

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಜನ್ಮ ರಾಶಿಯಲ್ಲಿ ಶನಿದೇವ, ಚತುರ್ಥದಲ್ಲಿ ಗುರುದೇವ ನಿಮಗೆ ಮಿಶ್ರಫಲವನ್ನು ನೀಡಲಿದ್ದಾರೆ. ಬಲಗೈಯಲ್ಲಿ ಪಡೆದಿದ್ದನ್ನು, ಎಡಗೈಯಲ್ಲಿ ಕಳೆದುಕೊಳ್ಳುವಿರಿ. ಕಾರ್ಮಿಕ ವರ್ಗದವರಿಗೆ ಸರ್ಕಾರದ ನೆರವು ದೊರೆಯುವುದು. ಸ್ತ್ರೀಯರೊಬ್ಬರ ಸಹಾಯದಿಂದ ಮನೆ ಸಮಸ್ಯೆ ಬಗೆಹರಿಯುವುದು. ಆಸ್ತಿ ವಿಭಾಗ ವಿಷಯಗಳು ಅಂತ್ಯ ಕಾಣದೆ ಬೇಸರ. ವಾರಾಂತ್ಯಕ್ಕೆ ಮಠಾಧೀಶರ ಸಂದರ್ಶನದಿಂದ ಮನಃಶಾಂತಿ.

ಶ್ರೀ ಅಶ್ವತ್ಥನಾರಾಯಣ ಸ್ತುತಿ. ಶುಭ ಸಂಖ್ಯೆ–3

ಮೈಸೂರು ಮಿತ್ರ

ಭಾನುವಾರ 20 ಜುಲೈ 2025

ವಸತಿ ಹಕ್ಕಿಗಾಗಿ ದಲಿತ ಸಂಘರ್ಷ ಸಮಿತಿ ಪ್ರತಿಭಟನೆ

ತಿ.ನರಸೀಪುರ, ಜು.19– ದಲಿತರ ಭೂಮಿ –ವಸತಿ ಹಕ್ಕಿಗಾಗಿ ಮತ್ತು ಇತರೆ ಹಕ್ಕೊತ್ತಾಯಗಳಿಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಟ್ಟಣದ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ತಾಲೂಕು ಆಡಳಿತ ಸೌಧದ ಮುಂಭಾಗ ಜಮಾವಣೆಗೊಂಡಿದ್ದ ದಸಂಸ ಮುಖಂಡರು ಹಾಗೂ ಕಾರ್ಯಕರ್ತರು ದಲಿತರನ್ನು ಭೂಮಿ ವಸತಿ ಹಕ್ಕಿನಿಂದ ನಿರಂತರವಾಗಿ ವಂಚಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನಾ ಧರಣಿಯನ್ನು ನಡೆಸಿದರು.

ಹೋರಾಟದ ನೇತೃತ್ವವನ್ನು ವಹಿಸಿದ್ದ ಜಿಲ್ಲಾ ವಿಭಾಗದ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿ, ಭೂಮಿ ಉಳ್ಳವರಿಗೆ ಸಾಮಾಜಿಕ ಗಣಿತಿ ಹಾಗೂ ಆಳುವ ವರ್ಗವಾಗಿ ಸಮಾಜವನ್ನು ನಿಯಂತ್ರಿಸುವ ಅಧಿಕಾರವಿದೆ. ತಲತಲಾಂತರಗಳಿಂದಲೂ ದಲಿತರನ್ನು ಭೂಮಿ ಹಾಗೂ ನೈಸರ್ಗಿಕ ಸಂಪತ್ತಿನಿಂದ ವೈದಿಕಶಾಹಿಗಳು ವಂಚಿಸುತ್ತಲೇ ಬಂದಿದ್ದಾರೆ. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಅಧಿಕಾರಕ್ಕೆ ಬಂದಿರುವ ಸರ್ಕಾರಗಳು ಕೂಡ ದಲಿತರನ್ನು ವಂಚಿಸುತ್ತಾ ಬಂದಿವೆ. ಗೋಮಾಳ ಹಾಗೂ ಪೋಡಿ ಜಮೀನುಗಳಲ್ಲಿ ದಲಿತರಿಗೆ ಭೂ ಒಡೆತನದ ಹಕ್ಕನ್ನ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಅಲ್ಲಿವರೆಗೂ ದಲಿತ ಸಂಘಟನೆಗಳು ಚಳುವಳಿಯನ್ನು ರಾಜ್ಯದಾದ್ಯಂತ ನಡೆಸುತ್ತವೆ ಎಂದು ಅವರು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಭೂಹೀನ ಸ್ಥಳ ಸಮುದಾಯಗಳ ಉಳುಮೆ ಮಾಡುತ್ತಿರುವ ಬಹು ಸಾಗುವಳಿಯನ್ನು ಕಾಲಮಿತಿ ಒಳಗೆ ಇತ್ಯರ್ಥಗೊಳಿಸಬೇಕು, ವಿನಾಕಾರಣ ವಜಾಗೊಳಿಸಿರುವ ಬಗರ್‌ಹುಕುಂ ಸಾಗುವಳಿ ಅರ್ಜಿಗಳನ್ನು ಮರುಪರಿಶೀಲಿಸಬೇಕು, ಪರಿಶಿಷ್ಟರ ಪಿಟಿಸಿಎಲ್ ಕಾಯ್ದೆಗೆ ರಾಜ್ಯ ಸರ್ಕಾರ ತಂದಿರುವ ತಿದ್ದುಪಡಿಯನ್ನು ಮಾನ್ಯ ಮಾಡದ ಕಂದಾಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಹೈಕೋರ್ಟ್‌ಗಳಲ್ಲಿ ಪಿಟಿಸಿಎಲ್ ಅರ್ಜಿಗಳನ್ನು ವಜಾಗೊಳಿಸುತ್ತಿದ್ದು ನುರಿತ ವಕೀಲರುಗಳನ್ನು ರಾಜ್ಯ ಸರ್ಕಾರ ನೇಮಿಸಿ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವಂತೆ ಆಗಬೇಕು ಎಂದರು.

ನಂತರ ಸಿಎಂ, ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರಿಗೆ ಸಲ್ಲಿಸಲು ಉದ್ದೇಶಿಸಿದ್ದ ಮನವಿ ಪತ್ರಗಳನ್ನು ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಅವರಿಗೆ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ವಾಟಾಳು ನಾಗರಾಜು, ತಾಲೂಕು ಪ್ರಧಾನ ಸಂಚಾಲಕ ಬನ್ನಹಳ್ಳಿ ಬಸವರಾಜು, ಮುಖಂಡರಾದ ಸೋಮಪ್ಪ, ಗಿರೀಶ್, ಸೋಮೇಶ್, ರಂಗಸ್ವಾಮಿ, ಶೃತಿ, ಬಸವಣ್ಣ, ಪುಟ್ಟರಂಗಯ್ಯ, ಜ್ಯೋತಿ, ಆನಂದ್, ಶಿವಕುಮಾರ್, ಮಾಲಾ, ಅಪ್ಪಾಜಿ, ವಾಟಾಳು ಕಾಂತರಾಜು, ಶೇಷಣ್ಣ, ನಾಗರಾಜ್ ಮತ್ತಿತರರು ಇದ್ದರು.



ತಾಲೂಕು ಕಚೇರಿ ಮುಂಭಾಗ ದಲಿತರ ಭೂಮಿ–ವಸತಿ ಹಕ್ಕಿಗಾಗಿ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವುದು.

ಮುಂದಿನ ಚುನಾವಣೆಯಲ್ಲಿ ಶಾಸಕ ಜಿಟಿಡಿ ನೇತೃತ್ವದಲ್ಲಿ 10ರಿಂದ 15 ಶಾಸಕರನ್ನು ಗೆಲ್ಲಿಸುವ ತಾಕತ್ತು ನಮಗಿದೆ

ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಆತ್ಮವಿಶ್ವಾಸ

ಕೆ.ಆರ್.ನಗರ, ಜು.19– ಮುಂಬರುವ 2028ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ನಾಯಕರಾದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ 10ರಿಂದ 15 ಶಾಸಕರನ್ನು ಗೆಲ್ಲಿಸುವ ತಾಕತ್ತು ನಮಗಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಹಾಗೂ ಉಪ್ಪಾರ ಸಮಾಜದ ನಾಯಕ ಹರದನಹಳ್ಳಿ ಹೆಚ್.ಎನ್.ವಿಜಯ್ ಹೇಳಿದರು.

ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಮದ ತಮ್ಮ ನಿವಾಸದಲ್ಲಿ ಕೃತಜ್ಞತೆ ಸಭೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಪಕ್ಷ ಶಾಸಕ ಜಿ.ಟಿ.ದೇವೇಗೌಡರ ತಂಡದಲ್ಲಿ ನಾವೇಳಿದ ಅಭ್ಯರ್ಥಿಗಳಿಗೆ ಪಕ್ಷ ಗುರುತಿಸಿ ಟಿಕೆಟ್ ನೀಡಿದರೆ ಖಂಡಿತ ಗೆಲ್ಲಿಸುತ್ತೇವೆ. ಅಷ್ಟೂ ಜನರನ್ನು ಗೆಲ್ಲಿಸಿಕೊಂಡು ಬರುವ ಹೊಣೆಗಾರಿಕೆ ನಮ್ಮದು ಎಂದರು.

ಒಂದು ವೇಳೆ ಜಾ.ದಳ, ಬಿಜೆಪಿ, ಕಾಂಗ್ರೆಸ್ ಪಕ್ಷ ಸೇರಿದಂತೆ ಈ ಮೂರು ಪಕ್ಷಗಳು ನಮ್ಮ ಮನವಿಯನ್ನು ಪರಿಗಣಿಸದೇ ಹೋದಲ್ಲಿ ಜಿ.ಟಿ.ದೇವೇಗೌಡರ ಮಾರ್ಗದರ್ಶನದಲ್ಲಿ ಪರ್ಯಾಯದ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ತಿಳಿಸಿದ ಅವರು, ನಾನು ಭವಿಷ್ಯದ ರಾಜಕಾರಣದ ಬಗ್ಗೆ ನಾವು ಗಂಭೀರವಾಗಿ ಚಿಂತನೆ ನಡೆಸುತ್ತಿದ್ದೇವೆ. ನನ್ನ ಅಪ್ಪರು, ಮುಖಂಡರು, ಹಿತೈಷಿಗಳು ಸೇರಿದಂತೆ ಸ್ನೇಹಿತರು ಅಭಿಪ್ರಾಯ ಪಡೆದುಕೊಂಡು ರಾಜಕೀಯವಾಗಿ ಮುನ್ನುಗ್ಗಲು ಚಿಂತಿಸಿ ತೀರ್ಮಾನಿಸುತ್ತೇನೆ ಎಂದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಹೆಚ್.ಎನ್.ವಿಜಯ್

ಮೈಸೂರು, ಮಂಡ್ಯ, ಹಾಸನ ಸೇರಿದಂತೆ ಚಾಮರಾಜನಗರ ಜಿಲ್ಲೆಗಳಲ್ಲಿ ಟಿಕೆಟ್ ಪಡೆಯಲು ಚಿಂತನೆ ನಡೆಸುತ್ತಿರುವುದಾಗಿ ಹೇಳಿದ ಅವರು, 2028ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಏನು ಬೇಕಾದರೂ ಆಗಬಹುದು. ಯಾರು ಊಹಿಸಬಲ್ಲರು ಎಂದು ಮಾಧ್ಯಮದವರನ್ನು ಪ್ರಶ್ನೆ ಮಾಡಿದರು.

ಜಿಲ್ಲಾ ಪತ್ರ ಬರಹಗಾರ ಮರ್ಲೆ ರಾಜೇಶ್, ಮಂಡ್ಯ ಜಿಲ್ಲಾ ಉಪ್ಪಾರ ಸಮಾಜದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ನಾಗರತ್ನಮ್ಮ, ಸಾಲಿಗ್ರಾಮ ಕೊಪ್ಪಲ್ ಮಂಜು, ದುಷ್ಯಂತ್, ಕುಮಾರ್ ಇದ್ದರು.

ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿ ಬಂಧನ

ನಂಜನಗೂಡು: ಬೈಕ್‌ನಲ್ಲಿ ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಿ 540 ಗ್ರಾಂ ಗಾಂಜಾ ಮತ್ತು ಬೈಕ್ ಅನ್ನು ನಂಜನಗೂಡು ಪಟ್ಟಣ ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಗರದ 11ನೇ ಕ್ರಾಸ್ ನಿವಾಸಿ ಮಹಮ್ಮದ್ ಮಸೂದ್ (30) ಬಂಧಿತ ವ್ಯಕ್ತಿ.

ಮೋಟಾರ್ ಬೈಕ್‌ನಲ್ಲಿ ಅಕ್ರಮವಾಗಿ ಗಾಂಜಾ ಮಾರುತ್ತಿರುವುದಾಗಿ ಬಂದ ಮಾಹಿತಿ ಮೇರೆಗೆ ನಂಜನಗೂಡು ಪಟ್ಟಣ ಪೊಲೀಸರು ತಾಲೂಕಿನ ಕಲ್ಲಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ತಪಾಸಣೆ ನಡೆಸುತ್ತಿದ್ದ ವೇಳೆ ಬೈಕ್‌ನಲ್ಲಿ ಮಹಮ್ಮದ್ ಮಸೂದ್ 29 ಪೊಟ್ಟಣಗಳ ಒಟ್ಟು 540 ಗ್ರಾಂ ಗಾಂಜಾ, 550 ನಗದು ಹಣ, ಹಾಗೂ ಕೃತ್ಯಕ್ಕೆ ಬಳಸಿದ ಬೈಕ್ ಅನ್ನು ವಶಕ್ಕೆ ಪಡೆದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಜಿಲ್ಲಾ ಪೊಲೀಸ್ ಅಧೀಕ್ಷಕ ವಿಷ್ಣುವರ್ಧನ, ಅಪರ ಪೊಲೀಸ್ ಅಧೀಕ್ಷಕ ಮಲ್ಲಿಕ್, ನಾಗೇಶ್ ಹಾಗೂ ಡಿವೈಎಸ್ಪಿ ರಘುರವರ ಮಾರ್ಗದರ್ಶನದಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ, ಪಿಎಸ್ಐ ಕೃಷ್ಣಕಾಂತಕೋಳಿ, ಸಿಬ್ಬಂದಿಗಳಾದ ತಿಮ್ಮಯ್ಯ, ಯು.ಎಸ್.ಶಿವಕುಮಾರ್, ಚೇತನ್ ಕುಮಾರ್, ಮಹೇಶ, ನವೀನ್ ಕುಮಾರ್, ಮುರಳಿಧರ, ಮಹೇಶ್ ಜಗತಾಪ, ಸರಿತಾ, ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಇಂದು ಪತ್ರಿಕಾ ದಿನಾಚರಣೆ

ಹುಣಸೂರು, ಜು.19– ಹುಣಸೂರು ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಮತ್ತು ಹಿರಿಯ ಪತ್ರಕರ್ತರಿಗೆ ಅಭಿನಂದನಾ ಕಾರ್ಯಕ್ರಮವು ಜು.20ರಂದು ತಾಪಂ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್ ಗೌಡರು ಉದ್ಘಾಟಿಸಲಿದ್ದು, ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ.

ವಿಧಾನಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ದಿ.ಎಚ್.ಆರ್.ಶ್ರೀನಿವಾಸ್ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದು, ಹಿರಿಯ ಪತ್ರಕರ್ತರನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಸನ್ಮಾನಿಸುವರು. ಪತ್ರಿಕೆ ವಿತರಕರಿಗೆ ಹುಣಸೂರು ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರ ಅಧ್ಯಕ್ಷ ಎಚ್.ಪಿ. ಅಮರ್‌ನಾಥ್ ಸನ್ಮಾನ ಮಾಡುವರು.

ಬಾಲಗಂಗಾಧರನಾಥ ಶ್ರೀಗಳ ಕನಸು ನನಸು ಮಾಡಿದ ವಿದ್ಯಾರ್ಥಿಗಳು

ಹೆಚ್.ಡಿ.ಕೋಟೆ, ಜು.19– ತಾಲೂಕಿನಲ್ಲಿ ಬಡ ಕುಟುಂಬದ ಮಕ್ಕಳ ಭವಿಷ್ಯ ರೂಪಿಸಬೇಕು ಎಂದು ಬಾಲಗಂಗಾಧರನಾಥ ಸ್ವಾಮೀಜಿಯವರ ಮಹದಾಸೆಯಾಗಿತ್ತು. ಅದರಂತೆ ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಆದಿಚುಂಚನಗಿರಿ ವಿದ್ಯಾಸಂಸ್ಥೆಯನ್ನು ತೆರೆಯಲಾಗಿದ್ದು, ಅವರ ಮಹದಾಸೆಯನ್ನು ವಿದ್ಯಾರ್ಥಿಗಳು ನನಸು ಮಾಡಿರುವುದು ಸಂತಸ ತಂದಿದೆ ಎಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮಿ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪ್ರಸ್ತುತ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು ತಾಲೂಕಿನಲ್ಲಿ ಬಡ ಕುಟುಂಬ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ಬದುಕು ರೂಪಿಸಬೇಕು ಎಂಬುದು ಅವರ ಮಹದಾಸೆಯಾಗಿತ್ತು. ಈ ನಿಟ್ಟಿನಲ್ಲಿ ನಮ್ಮ ಶಿಕ್ಷಣ ಸಂಸ್ಥೆ ಯಶಸ್ವಿ ಕಂಡಿದೆ ಎಂದರು.



ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಲಾಯಿತು.

ವಿದ್ಯಾರ್ಥಿಗಳು ಓದುವುದರ ಜೊತೆಗೆ ನಿಮ್ಮ ತಂದೆ ತಾಯಿಗಳನ್ನು, ಗುರುಗಳನ್ನು ಗೌರವದಿಂದ ಕಾಣಬೇಕು. ಏಕೆಂದರೆ ನೀವು ವಿದ್ಯಾಭ್ಯಾಸಕ್ಕೆ ತೆರಳುವಾಗ ನಿಮ್ಮ ತಂದೆ ತಾಯಿಗಳು ನಮ್ಮ ಮಕ್ಕಳು ಉತ್ತಮ ವಿದ್ಯಾಭ್ಯಾಸ ಮಾಡುವುದರ ಜೊತೆಗೆ ತಮ್ಮ ಭವಿಷ್ಯದಲ್ಲಿ ಬಹಳಷ್ಟು ಎತ್ತರಕ್ಕೆ ಬೆಳೆಯಬೇಕು ಎಂದು ಸಂಕಲ್ಪ ಮಾಡಿರುತ್ತಾರೆ ಆದ್ದರಿಂದ ನೀವು ಗೌರವಿಸಿದರೆ ನಿಮ್ಮ ಭವಿಷ್ಯ ಉಜ್ವಲವಾಗುತ್ತದೆ ಎಂದು ವಿದ್ಯಾ ರ್ಥಿಗಳಿಗೆ ಕರೆ ನೀಡಿದರು.

ಮಹಾರಾಜ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಚಂದ್ರೇಗೌಡ ಮಾತನಾಡಿ ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಯಶಸ್ಸು ದೊರೆಯಲು ಸಾಧ್ಯ, ಹೊಸಯತ್ನಕ್ಕೆ ಹಳೆ ತತ್ವಗಳೇ ದಾರಿದೀಪವಾಗವಾಗಲಿದ್ದು, ಹಳೆ ತತ್ವದಂತೆ ನಡೆಯಬೇಕು ಎಂದರು. ವಿದ್ಯಾಭ್ಯಾಸವು ಹೆಚ್ಚು ಅಂಕಗಳಿಸಲು, ಚಿನ್ನದ ಪದಕಗಳನ್ನು ಪಡೆಯುವುದೇ ಗುರಿಯಾಗಬಾರದು, ಯಾವ ರೀತಿ ಸಮಾಜದಲ್ಲಿ ಬದುಕಬೇಕು ಎಂಬುದನ್ನು ಸಹ ಅಭ್ಯಾಸ ಮಾಡುವುದೇ ವಿದ್ಯಾಭ್ಯಾಸದ ಮೂಲ ತತ್ವವಾಗಿದೆ ಎಂದರು.

ಈ ವಿದ್ಯಾಸಂಸ್ಥೆ ಕಟ್ಟಲು ಬಹಳಷ್ಟು ಶ್ರಮ ವಹಿಸಿದ ಆದಿಚುಂಚನಗಿರಿ ಆಡಳಿತಾಧಿಕಾರಿ ಕೆ.ಪಿ.ಬಸವೇಗೌಡರನ್ನು ಈ ಸಂದರ್ಭದಲ್ಲಿ ಸ್ಮರಿಸಿದ ಸ್ವಾಮೀಜಿಗಳು, ಇಂದಿನ ಕಾರ್ಯಕ್ರಮಕ್ಕೆ ಅವರು ಬರಬೇಕಾಗಿತ್ತು ಅನಾರೋಗ್ಯದ ಕಾರಣ ಬಂದಿಲ್ಲ. ಅವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ರೀಡಾ ವಿಭಾಗಗಳಲ್ಲಿ ಪ್ರತಿಭೆ ತೋರಿದ ಮತ್ತು ವಿವಿಧ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಪ್ರಾಂಶುಪಾಲರಾದ ಭೈರೇಗೌಡ, ಜೆ.ಎನ್.ವೆಂಕಟೇಶ್, ಎ.ಸಿ. ಭೈರಪ್ಪ, ಕಾಳಿಂಗೇಗೌಡ, ಮುಖಂಡ ಎ.ಜೆ. ಕಾಳೇಗೌಡ, ಸೆನೆಟ್ ಮಾಜಿ ಸದಸ್ಯ ಕೃಷ್ಣೇಗೌಡ, ಯರಹಳ್ಳಿ ಶಾಲೆಯ ಮುಖ್ಯೋಪಾಧ್ಯಾಯರಾದ ವಿಶ್ವನಾಥ್ ಪ್ರಸಾದ್, ಕೆ.ಗೀತಾ, ರತ್ನಪ್ಪ, ಭೀಮಪ್ಪ ಮಲ್ಲಪ್ಪ ಮಾದಾರ, ಉಪನ್ಯಾಸಕರುಗಳಾದ ಸುಬ್ರಮಣ್ಯ, ಮಲ್ಲೇಶ್, ಸೋಮಶೇಖರ್, ನಂದಿನಿ, ಚನ್ನಬಸಪ್ಪ, ಮಂಜೇಶ್, ಸತೀಶ್ ಕುಮಾರ್, ರಾಜೇಶ್, ಶ್ರೀನಿವಾಸ್, ಅನೀಲ್ ಕುಮಾರ್, ಮಧು, ಸಾಭವಿ,ಪಲ್ಲವಿ, ಸುವಾಸಿನಿ, ಕಾವ್ಯ, ರಶ್ಮಿ, ಪುಷ್ಪ, ಸಿಬ್ಬಂದಿಗಳಾದ ರಾಜೇಶ್, ಅಂಕಪ್ಪ, ಗಾಯತ್ರಿ ಹಾಜರಿದ್ದರು.

ಕಡೇ ಆಷಾಢ ಶುಕ್ರವಾರದ ಅಂಗವಾಗಿ ಸ್ನೇಹ ಬಳಗದಿಂದ ಅನ್ನ ಸಂತರ್ಪಣೆ

ತಿ.ನರಸೀಪುರ, ಜು.19– ಕೊನೆ ಆಷಾಢ ಶುಕ್ರವಾರ ಹಾಗೂ ಶನಿವಾರದ ವಿಶೇಷತೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ವಕ್ತಾರ ಸಂತೃಪ್ತಿ ಕುಮಾರ್ ನೇತೃತ್ವದಲ್ಲಿ ಸ್ನೇಹ ಬಳಗದ ವತಿಯಿಂದ ಪಟ್ಟಣದ ಗುಂಜಾ ನರಸಿಂಹ ಸ್ವಾಮಿ ದೇವಸ್ಥಾನದ ದಾಸೋಹ ಭವನದಲ್ಲಿ ಅನ್ನ ಸಂತರ್ಪಣೆ ಕಾರ್ಯ ಹಮ್ಮಿಕೊಳ್ಳಲಾಗಿತ್ತು.

ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ದಾಸೋಹ ಭವನದಲ್ಲಿ ಅನ್ನ ದಾಸೋಹಕ್ಕೆ ಚಾಲನೆ ನೀಡಿ ಮಾತನಾಡಿದ ಸಂತೃಪ್ತಿ ಕುಮಾರ್ ಪ್ರತಿ ವರ್ಷದಂತೆ ಈ ವರ್ಷವೂ ಸರ್ವರಿಗೂ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ನರಸಿಂಹಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದರು.

ಈ ವೇಳೆ ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್, ಮುದ್ದಬೀರನಹುಂಡಿ ಗೋವಿಂದರಾಜು, ರಮೇಶ್, ಪುಟ್ಟಸ್ವಾಮಿ, ರವಿ, ಪ್ರಕಾಶ, ನಾಗರಾಜು, ನಿಂಗರಾಜು, ಯೋಗೇಂದ್ರ ವಿನಯ್, ಹರೀಶ್, ಮಹೇಶ್, ನಂಜುಂಡ, ಜಗದೀಶ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುಟ್ಟಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ದಾಸೋಹ ಸಮಿತಿಯ ಮುಖ್ಯಸ್ಥ ವಾಸುದೇವ್, ಪಾರು ಪತ್ತೆದಾರ್ ದೀಪು, ವಿಜಯಕುಮಾರ್ (ಚೆಂಗ) ಇದ್ದರು.



ಐದನೇ ಪುಟದಿಂದ

2,578 ಕೋಟಿ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ

ಜರ್ಮನ್ ಪೆಂಡಾಲ್‌ಗಳನ್ನು ಹಾಕಲಾಗಿತ್ತು. ಸಾವಿರಾರು ಜನರು ಸೇರುವ ಹಿನ್ನೆಲೆಯಲ್ಲಿ ಒಳಗೆ ಹಿತಕರ ವಾತಾವರಣಕ್ಕೆ ಪೆಂಡಾಲ್‌ಗೆ ಜಂಬೋ ಫ್ಯಾನ್‌ಗಳನ್ನು ಅಳ ವಡಿಸಲಾಗಿತ್ತು. ಈ ಮೊದಲೆಲ್ಲಾ ವೇದಿಕೆಯ ಹಿಂದೆ ಫ್ಲೆಕ್ಸ್‌ಗಳನ್ನು ಹಾಕಲಾಗುತ್ತಿತ್ತು. ಆದರೆ ಇಂದಿನ ಸಾಧನಾ ಸಮಾವೇಶದಲ್ಲಿ ಹೈಟೆಕ್ ಸ್ಪರ್ಶ ನೀಡಲಾಗಿತ್ತು. ವೇದಿಕೆಯ ಹಿಂದೆ ಡಿಜಿಟಲ್ ಸ್ಕ್ರೀನ್‌ಗಳನ್ನು ಹಾಕಲಾಗಿತ್ತು. ಹಿಂದೆ ಕುಳಿತವರಿಗೆ ವೇದಿಕೆ ಸಮಾರಂಭ ನೋಡಲು ಅನುಕೂಲವಾಗುವಂತೆ ಅಲ್ಲಲ್ಲಿ ಡಿಜಿಟಲ್ ಸ್ಕ್ರೀನ್‌ಗಳನ್ನು ಅಳವಡಿಸಲಾಗಿತ್ತು.

ಸಾಧನಾ ಸಮಾವೇಶ ನಡೆದ ಮಹಾರಾಜ ಕಾಲೇಜು ಮೈದಾನದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅಹಿತಕರ ಘಟನೆಗೆ ಆಸ್ಪದವಿಲ್ಲದಂತೆ ಮೆಟಲ್ ಡಿಟೆಕ್ಟರ್ ಮೂಲಕ ಶೋಧಿಸಿ ಜನರ ಒಳಗೆ ಬಿಡಲಾಗುತಿತ್ತು. ಮಹಾರಾಜ ಕಾಲೇಜು ಮೈದಾನದ ಸನಿಹದಲ್ಲಿರುವ ವೃತ್ತಗಳಲ್ಲಿ ಟ್ರಾಫಿಕ್ ಜಾಮ್ ಆಗದಂತೆ ಸುಗಮ ಸಂಚಾರ ವ್ಯವಸ್ಥೆ ಮಾಡಲಾಗಿತ್ತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಇಂಧನ ಸಚಿವ ಕೆ.ಜೆ. ಜಾರ್ಜ್, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಪೌರಾಡಳಿತ ಸಚಿವ ರಹೀಂಖಾನ್, ಸಣ್ಣ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪುರ್, ಸಂಸದ ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ರವಿಶಂಕರ್, ಕೆ.ಹರೀಶ್‌ಗೌಡ, ದರ್ಶನ್ ಧೃವನಾರಾಯಣ್, ಡಾ.ತಿಮ್ಮಯ್ಯ, ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್, ಎ.ಆರ್. ಕೃಷ್ಣಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಕರ್ನಾಟಕ ಸಿನಿಮಾ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲಾ ಸೇರಿದಂತೆ ಹಲವು ನಾಯಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೂರು ಗಂಟೆ ಕಾರ್ಯಕ್ರಮಕ್ಕೆ ಭಾರೀ ಖರ್ಚು–ವೆಚ್ಚ

ಗ್ಯಾರಂಟಿ ಯೋಜನೆಯ ಭರ್ಜರಿ ಪ್ರಚಾರ ಹಾಗೂ ಬಿಜೆಪಿ ಟೀಕೆಗೆ ಪ್ರತ್ಯುತ್ತರ ನೀಡಲು ಸರ್ಕಾರದ ಸಾಧನಾ ಸಮಾವೇಶ ಸೀಮಿತವಾಗಿತ್ತು. ಸಿದ್ದರಾಮಯ್ಯ ಸೇರಿದಂತೆ ಹಲವರು ಈ ಎರಡು ವಿಚಾರವನ್ನು ಬಿಟ್ಟು ಬೇರೇನನ್ನು ಪ್ರಸ್ತಾಪಿಸಲಿಲ್ಲ. ಇಷ್ಟಕ್ಕೆ ಭಾರೀ ಖರ್ಚು–ವೆಚ್ಚ ಮಾಡಬೇಕಿತ್ತಾ ಎಂದು ಕೆಲವರು ಪ್ರಶ್ನಿಸಿದರು.

ಗ್ರಾಮೀಣ ಪ್ರದೇಶದಿಂದ ಜನರನ್ನು ಕರೆತರಲು ಕೆಎಸ್ಆರ್ ಟಿಸಿ ಮತ್ತು ಖಾಸಗಿ ಬಸ್‌ಗಳನ್ನು ಬಳಸಿಕೊಳ್ಳಲಾಗಿತ್ತು. ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಸಮರ್ಪಕ ಬಸ್ ಸೇವೆ ಇಲ್ಲದೆ ಪ್ರಯಾಸಪಟ್ಟರು. ಸಾಧನಾ ಸಮಾವೇಶದಲ್ಲಿ ಜನರಿಗೆ ನೀರು ಮತ್ತು ಮಜ್ಜಿಗೆ ನೀಡಲಾಗುತ್ತಿತ್ತು. ಆದರೆ ಬಹಳಷ್ಟು ಜನ ಅರ್ಧ ಕುಡಿದು ಮಜ್ಜಿಗೆ ಹಾಗೂ ನೀರಿನ ಬಾಟಲ್ ಹಾಗೂ ಸ್ಯಾಚೆಟ್‌ನ್ನು ಬಿಸಾಡುತ್ತಿದ್ದುದು ಸಾಮಾನ್ಯವಾಗಿತ್ತು. ಸಿದ್ದರಾಮಯ್ಯ ಸೇರಿದಂತೆ ಹಲವರು ಇದು ಸರ್ಕಾರದ ಸಾಧನ ಸಮಾವೇಶ ಎಂದು ಸ್ಪಷ್ಟನೆ ನೀಡಿದರೂ ಅದು ಕಾಂಗ್ರೆಸ್ ಸಮಾವೇಶದಂತೆ ಭಾಸವಾಗುತ್ತಿತ್ತು. ಕಾಂಗ್ರೆಸ್ ನಾಯಕರು, ಕಾರ್ಯಕರ್ತರನ್ನು ಹೊರತುಪಡಿಸಿ ಬೇರೆ ಪಕ್ಷದವರಾಗಲೀ, ಸಾರ್ವಜನಿಕರಾಗಲೀ ಅಲ್ಲಿ ಕಾಣಲಿಲ್ಲ.

ಮೈಸೂರಿಗೆ 2,578 ಕೋಟಿಯ ಯೋಜನೆಗಳು

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ 2,578 ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಇಂದು ನೆರವೇರಿತು. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ–192.99 ಕೋಟಿ, ಕೆಎಸ್ಆರ್ ಟಿಸಿಗೆ–120 ಕೋಟಿ, ಕರ್ನಾಟಕ ದಸರಾ ವಸ್ತುಪ್ರದರ್ಶನ–23.59 ಕೋಟಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ–408.95 ಕೋಟಿ, ಲೋಕೋಪ ಯೋಗಿ ಇಲಾಖೆ–502.41 ಕೋಟಿ, ಮೈಸೂರು ನಗರಪಾಲಿಕೆ–380.84 ಕೋಟಿ, ಕಾರ್ಮಿಕ ಇಲಾಖೆ–19.76 ಕೋಟಿ, ಜಲಸಂಪನ್ಮೂಲ ಇಲಾಖೆ (ಕಬಿನಿ, ಹಾರಂಗಿ)– 419.86 ಕೋಟಿ, ಯುವ ಸಬಲೀಕರಣ ಇಲಾಖೆ– 3.50 ಕೋಟಿ, ವೈದ್ಯಕೀಯ ಶಿಕ್ಷಣ ಇಲಾಖೆ–175.50 ಕೋಟಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ–55.50 ಕೋಟಿ, ಇಂಧನ ಇಲಾಖೆ–38.73 ಕೋಟಿ, ಕಾರ್ಮಿಕ ಇಲಾಖೆ–19.76 ಕೋಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ–14.63 ಕೋಟಿ, ಸಣ್ಣ ನೀರಾವರಿ ಇಲಾಖೆ–13 ಕೋಟಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ–10.80 ಕೋಟಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ–3 ಕೋಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ–1.50 ಕೋಟಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ–1 ಕೋಟಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ–0.84 ಕೋಟಿ, ಪಶುಸಂಗೋಪನಾ ಇಲಾಖೆ–0.50 ಕೋಟಿ, ರೇಷ್ಮೆ ಇಲಾಖೆ–0.50 ಕೋಟಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ–0.50 ಕೋಟಿ, ಮೈಸೂರು ಜಿಲ್ಲಾ ನಗರಾಭಿವೃದ್ಧಿ ಕೋಶ ಇಲಾಖೆ– 163.78 ಕೋಟಿ.

ಒಳಗೆ ಸಾಧನೆ, ಹೊರಗೆ ಭರ್ಜರಿ ವ್ಯಾಪಾರ

ಮಹಾರಾಜ ಕಾಲೇಜು ಮೈದಾನದಲ್ಲಿ ಸರ್ಕಾರದ ಸಾಧನಾ ಸಮಾವೇಶ ನಡೆಯುತ್ತಿದ್ದರೆ, ಹೊರಗೆ ರಸ್ತೆ ಬದಿ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರವಾಗುತ್ತಿತ್ತು. ಶರ್ಟ್, ಪ್ಯಾಂಟ್, ಚಪ್ಪಲಿ ಸೇರಿದಂತೆ ಹಲವು ವಸ್ತುಗಳ ಮಾರಾಟ ಬಲು ಜೋರಾಗಿತ್ತು. ಅಲ್ಲದೆ ಐಸ್ ಕ್ರೀಂ, ಕಡ್ಲೆಕಾಯಿ, ಮಾವಿನ ಹಣ್ಣು ಸೇರಿದಂತೆ ಇತರೆ ತಿಂಡಿ ತಿನಿಸುಗಳ ಮಾರಾಟವೂ ಜೋರಾಗಿತ್ತು. ಹಾವೇರಿಯಿಂದ ಬಂದಿದ್ದ ವ್ಯಾಪಾರಿಗಳು ಉಣ್ಣೆಯಿಂದ ತಯಾರಿಸಿರುವ ಟೋಪಿ, ಕಂಬಳಿ, ಶಾಲುಗಳನ್ನು ಮಾರಾಟ ಮಾಡಿದರು.

ನನ್ನ ಶಕ್ತಿ ಪ್ರದರ್ಶನವಲ್ಲ; ಅಭಿವೃದ್ಧಿ ಶಕ್ತಿ ಪ್ರದರ್ಶನ!

ರಾಜ್ಯದ ಖಜಾನೆಯಲ್ಲಿ ಹಣವಿಲ್ಲದಿದ್ದರೆ ಒಂದೇ ಜಿಲ್ಲೆಯ ಯೋಜನೆಗಳಿಗೆ ಇಷ್ಟು ಹಣ ನೀಡಲು ಸಾಧ್ಯವಾಗುತ್ತಿತ್ತೆ ಎಂದು ಪ್ರಶ್ನಿಸಿದರು. ಈ ಸಮಾವೇಶದಲ್ಲಿ ನೀವು ಹಾಜರಾಗಿದ್ದರೆ ಅಧಿಕಾರದಲ್ಲಿ ಇರುವಾಗ ನೀವೇನು ಮಾಡಿದ್ದೀರಾ, ಎರಡು ವರ್ಷದ ಅಧಿಕಾರಾವಧಿಯಲ್ಲಿ ನಾವೇನು ಮಾಡಿದ್ದೇವೆ ಎಂದು ಇದೇ ವೇದಿಕೆಯಲ್ಲಿ ಜನರೆದುರು ಬಹಿರಂಗವಾಗಿ ಚರ್ಚೆ ಮಾಡಬಹುದಿತ್ತು. ಆದರೆ ನೀವು ಬರಲಿಲ್ಲ, ರಾಜ್ಯದ ಜನರು ಇದನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿರುತ್ತಾರೆ ಎಂದರು.

ರಾಜ್ಯದ ಆರ್ಥಿಕ ಪರಿಸ್ಥಿತಿ ದಿವಾಳಿಯಾಗಿದೆ ಎಂದು ಬಿಜೆಪಿ ಮತ್ತು ಜೆಡಿಎಸ್‌ನವರು ಜನರಿಗೆ ತಪ್ಪು ಸಂದೇಶ ನೀಡುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಅಭಿವೃದ್ಧಿಯ ಶಕ್ತಿ ಏನೆಂದು ತೋರಿಸಲು ಈ ಸಮಾವೇಶ ಆಯೋಜನೆ ಮಾಡಿದ್ದೇವೆ ಎಂದು ಸಿದ್ದರಾಮಯ್ಯ ಪುನರುಚ್ಚರಿಸಿದರು.

ಒಳ್ಳೆಯ ಕೆಲಸಕ್ಕೆ ಮತ್ಸರ ಇರಬಾರದು ಎಂಬ ಮಾತಿನಂತೆ ನಾವು ಮಾಡಿರುವ ಒಳ್ಳೆಯ ಯೋಜನೆಗಳಿಗೆ ಪ್ರಶಂಸೆ ವ್ಯಕ್ತಪಡಿಸಬೇಕು. ಅದು ಬಿಟ್ಟು ಈ ರೀತಿ ಮತ್ಸರ ತೋರಬಾರದು ಎಂದು ವಿರೋಧ ಪಕ್ಷದ ನಾಯಕರಿಗೆ ಕಿವಿಮಾತು ಹೇಳಿದರು.

ನಮ್ಮ ಗ್ಯಾರಂಟಿ ಯೋಜನೆಗಳಿಂದ ಜನರು ಖುಷಿಯಲ್ಲಿದ್ದರೆ, ನೀವು ಹೊಟ್ಟೆ ಉರಿ ಪಡುತ್ತಿದ್ದೀರಾ, ದ್ವೇಷ ಕಾರುತ್ತಿದ್ದೀರಾ ಎಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರನ್ನು ತರಾಟೆಗೆ ತೆಗೆದುಕೊಂಡ ಸಿದ್ದರಾಮಯ್ಯ, ಈಗ ಕರ್ನಾಟಕ ಮಾದರಿಯ ಗ್ಯಾರಂಟಿ ಯೋಜನೆಗಳನ್ನು ಬೇರೆ ರಾಜ್ಯಗಳಲ್ಲಿ ಜಾರಿ ಮಾಡುತ್ತಿದ್ದಾರೆ ಎಂದರು.

ಜಿಎಸ್‌ಟಿಯಿಂದ 4.5 ಲಕ್ಷ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರಕ್ಕೆ ನೀಡುತ್ತಿದ್ದೇವೆ. ನ್ಯಾಯಯುತವಾಗಿ ನಮ್ಮ ಪಾಲಿನ ಹಣ ನೀಡದೆ 65 ಸಾವಿರ ಕೋಟಿ ರೂ. ಮಾತ್ರ ನೀಡುತ್ತಿದ್ದಾರೆ.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಮೇಲ್ವರ್ಗದ ಪರವಾಗಿದೆ. ದೇಶದಲ್ಲಿ ಶೇ.90ರಷ್ಟು ಶೂದ್ರರಿದ್ದು, ಶೇ.10ರಷ್ಟು ಮೇಲ್ವರ್ಗದವರಿದ್ದಾರೆ. ಆದರೆ ಬಿಜೆಪಿಯವರು 10 ಪರ್ಸೆಂಟ್ ಮೇಲ್ವರ್ಗದವರ ಪರವಾಗಿದ್ದಾರೆ. ಆದರೆ ನಾವು ಶೇ.90 ರಷ್ಟಿರುವ ಶೂದ್ರರ ಪರವಾಗಿದ್ದೇವೆ. ಜನರ ಪ್ರೀತಿ, ಅಭಿಮಾನ ಉಳಿಸಿಕೊಂಡಿರುವ ಕಾರಣ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ.

ಸ್ಪಷ್ಟ ಬಹುಮತ ಪಡೆಯದ ಕಾರಣ ಜೆಡಿಎಸ್‌ನವರು ಇಲ್ಲಿವರೆಗೆ ಹಿಂಬಾಗಿಲಿನಿಂದ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಪ್ರತಿ ಬಾರಿಯ ಚುನಾವಣೆಯಲ್ಲಿ ಗೆಲುವು ಸಾಧಿಸುವವರ ಸಂಖ್ಯೆ ಇಳಿಮುಖವಾಗುತ್ತಾ ಬರುತ್ತಿದೆ. ಕಳೆದ ಚುನಾವಣೆಯಲ್ಲಿ ಕೇವಲ 18 ಸ್ಥಾನ ಮಾತ್ರ ಪಡೆದ ಜೆಡಿಎಸ್ ಮುಂದಿನ ಚುನಾವಣೆಯಲ್ಲಿ ಗುರುತು ಸಿಗದಂತೆ ಮಾಯವಾಗುತ್ತದೆ ಎಂದು ಭವಿಷ್ಯ ನುಡಿದರು.

ಜನರ ಋಣ ತೀರಿಸುವ ಕೆಲಸ ನಾವು ಮಾಡಿದ್ದೇವೆ

ಯೋಜನೆಗಳು ಸುಳ್ಳು, ಇದರಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಪ್ರಧಾನಿ ಸೇರಿದಂತೆ ರಾಜ್ಯದ ಬಿಜೆಪಿ ನಾಯಕರು ಟೀಕಿಸಿದ್ದರು. ಆದರೆ, ಮಧ್ಯಪ್ರದೇಶ, ಮಹಾರಾಷ್ಟ್ರ, ದೆಹಲಿ, ಹರಿಯಾಣ ಸೇರಿದಂತೆ ಬೇರೆ ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತ ಬಿಜೆಪಿಗರು ಮೊದಲೇ ಗ್ಯಾರಂಟಿ ಯೋಜನೆ ಘೋಷಿಸಿದ್ದಾರೆ. ಇತ್ತೀಚೆಗೆ ಬಿಹಾರದಲ್ಲೂ ನಮ್ಮದೇ ಗ್ಯಾರಂಟಿ ನಕಲು ಮಾಡಿದ್ದಾರೆ ಎಂದು ಟೀಕಿಸಿದರು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿಗರು ಸುಳ್ಳು ಆರೋಪ ಮಾಡುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಮಾಡಿದ ಅಭಿವೃದ್ಧಿ ಕೆಲಸ, ಜಾರಿಗೆ ತಂದಿರುವ ಜನಪ್ರಿಯ ಯೋಜನೆಗಳು ಜನರ ಕಣ್ಣಿಗೆ ಕಾಣುತ್ತಿವೆ. ಇಂದು ಮಾಡುತ್ತಿರುವ ಸಾಧನ ಸಮಾವೇಶ ಪ್ರಶಂಸೆ ಹಾಗೂ ಜೈಕಾರ ಹಾಕಿಸಿಕೊಳ್ಳಲು ಆಯೋಜಿಸಿಲ್ಲ. ನಿಮ್ಮ ಋಣ ತೀರಿಸಲು ಬಂದಿದ್ದೇವೆ. ನಮ್ಮ ಸರ್ಕಾರ ಬಂದ ನಂತರ ನಾನು ಹಾಗೂ ಸಿದ್ದರಾಮಯ್ಯ ಅವರು ತಾಯಿ ಚಾಮುಂಡೇಶ್ವರಿ ದೇವಾಲಯಕ್ಕೆ ಹೋಗಿ ಐದು ವರ್ಷದ ಗೃಹಲಕ್ಷ್ಮೀ ಯೋಜನೆ ಹಣವನ್ನು ತಾಯಿಯ ಪಾದಕ್ಕೆ ಅರ್ಪಿಸಿ ಆಶೀರ್ವಾದ ಪಡೆದಿದ್ದೇವೆ ಎಂದರು.

ಹಸ್ತ ಜನರ ಬದುಕಿಗೆ ಆಸರೆಯಾಗಿದೆ. ಈ ಹಸ್ತ ಟೀಕೆ ಮಾಡುವ ವಿರೋಧಿಗಳ ಬಾಯಿ ಮುಚ್ಚಿಸಿದೆ. ರೈತರನ್ನು ಉಳಿಸಿದೆ, ಮಹಿಳೆಯರಿಗೆ ಶಕ್ತಿ ತುಂಬಿದೆ, ಬೆಲೆ ಏರಿಕೆ ಸಮಸ್ಯೆಗೆ ಪರಿಹಾರ ಕೊಟ್ಟಿದೆ. ಇದರಿಂದ ಎಲ್ಲಾ ಜಾತಿ, ಧರ್ಮಗಳ ಬಡ ಜನರು ಗೌರವಯುತವಾಗಿ ಬದುಕುವ ಹಾಗೂ ಆರ್ಥಿಕ ಪರಿಸ್ಥಿತಿ ಸುಧಾರಿಸುವ ವಾತಾವರಣ ನಿರ್ಮಿಸಿದೆ ಎಂದರು.

ಟೀಕೆ ಮಾಡುವುದಕ್ಕೆ ಸೀಮಿತವಾಗಿರುವ ಬಿಜೆಪಿ, ಜೆಡಿಎಸ್ ಇದುವರೆಗೂ ಜನರ ಮನಸ್ಸಲ್ಲಿ ಉಳಿಯುವ ಒಂದೇ ಒಂದು ಯೋಜನೆಯನ್ನೂ ಜಾರಿಗೊಳಿಸಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಉಳುವವನಿಗೆ ಭೂಮಿ, ಬಡವರಿಗೆ ಮನೆ, ನಿವೇಶನ, ವಿವಿಧ ಪಿಂಚಣಿ ಯೋಜನೆ, ಅಂಗನವಾಡಿ, ಆದಿವಾಸಿಗಳಿಗೆ ಭೂಮಿ, ಶೈಕ್ಷಣಿಕ ಹಕ್ಕು, ಆಹಾರ ಭದ್ರತೆ, ಉದ್ಯೋಗ ಖಾತರಿ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿ ಮಾಡಿದೆ. ರಾಹುಲ್ ಗಾಂಧಿ ಅವರೊಂದಿಗೆ ಪಾದಯಾತ್ರೆಯಲ್ಲಿ ಸಾಗುವಾಗ ವಯಸ್ಸಾದ ಮಹಿಳೆ ಸೌತೆಕಾಯಿ ತಂದು ರಾಹುಲ್ ಗಾಂಧಿ ಅವರಿಗೆ ಕೊಟ್ಟು, ಇದು ನಿಮ್ಮ ಅಜ್ಜಿ ಕೊಟ್ಟ ಭೂಮಿಯಲ್ಲಿ ಬೆಳೆದಿದ್ದೇನೆ ಎಂದರು. ಇಂತಹ ಯಾವುದಾದರೂ ಒಂದು ಕಾರ್ಯಕ್ರಮವನ್ನು ಬಿಜೆಪಿ ಅಥವಾ ಜೆಡಿಎಸ್ ಕೊಟ್ಟಿದೆಯೇ? ಎಂದು ಸವಾಲೆಸೆದರು.

ಮತ್ತಷ್ಟು ಬಲ ಬಂದಿದೆ: ಕಳೆದ ವರ್ಷ ನಡೆದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದೆ. ನಾವು ಇಬ್ಬರು ಮಾಜಿ ಮುಖ್ಯಮಂತ್ರಿಗಳ ಮಕ್ಕಳನ್ನು ಸೋಲಿಸಿದ್ದೇವೆ. ಆ ಮೂಲಕ ಮತದಾರರು ಸಂದೇಶ ರವಾನಿಸಿ ನಮಗೆ ಆತ್ಮಬಲ ತುಂಬಿದ್ದಾರೆ. 2028ರ ಚುನಾವಣೆಯಲ್ಲಿ ನೀವು ಇನ್ನು ಹೆಚ್ಚಿನ ಕ್ಷೇತ್ರಗಳಲ್ಲಿ ಗೆಲ್ಲಿಸಿ ಆಶೀರ್ವಾದ ಮಾಡಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತಂದು ನಿಮ್ಮ ಸೇವೆ ಮಾಡಲು ಅವಕಾಶ ನೀಡಬೇಕು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವ, ಸಿಎಂ ಸಿದ್ದರಾಮಯ್ಯ ಅವರ ಮುಖಂಡತ್ವದಲ್ಲಿ ನಾನು ಹಾಗೂ ಎಲ್ಲಾ ಸಚಿವರು ಒಗ್ಗಟ್ಟಾಗಿ ಕೆಲಸ ಮಾಡಿ ನಿಮ್ಮ ಋಣ ತೀರಿಸುತ್ತೇವೆ ಎಂದು ಭರವಸೆ ನೀಡಿದರು.

ಇಂದು ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ

ನವನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಪ್ರೋತ್ಸಾಹ

ಮೈಸೂರು, ಜು. 19– ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ವಿಜಯನಗರದ ರೈಲ್ವೆ ಬಡಾವಣೆಯ ರಂಗಮಂದಿರದಲ್ಲಿ ಜ.20ರಂದು ಸಂಜೆ 5 ಗಂಟೆಗೆ ಶೈಕ್ಷಣಿಕ ಸಾಧಕರಿಗೆ ಸತ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ 250ಕ್ಕೂ ಹೆಚ್ಚು ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಲಾಗುವುದು. ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಒಡೆಯರ್, ಮಂಡ್ಯದ ಜಿಲ್ಲಾಧಿಕಾರಿ ಡಾ.ಕುಮಾರ್, ನಟ ಮುಖ್ಯಮಂತ್ರಿ ಚಂದ್ರು, ಖ್ಯಾತ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಭಾಗವಹಿಸಲಿದ್ದಾರೆ. ಇದೇ ವೇಳೆ ಬೆಂಗಳೂರಿನ ಖ್ಯಾತ ಗಾಯಕಿ ಕುಮಾರಿ ಭಾಗ್ಯಶ್ರೀ ಗೌಡ ಮತ್ತು ತಂಡದವರಿಂದ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ್, ಹೆಬ್ಬಾಳು ಬಡಾವಣೆಯ ಮುಖಂಡರು, ಸಂಘ–ಸಂಸ್ಥೆಗಳ ಮುಖಂಡರು, ಸಾರ್ವಜನಿಕರು ಉಪಸ್ಥಿತರಿರುವರು.

ನಿವೃತ್ತ ಸರ್ಕಾರಿ ನೌಕರರಿಗೆ ಪಿಂಚಣಿ ಪರಿಷ್ಕರಣೆ ನಿರಾಕರಣೆ ವಿರೋಧಿಸಿ ಸಹಿ ಸಂಗ್ರಹ

ಮೈಸೂರು,ಜು.19(ಜಿಎ)–ಅಖಿಲ ಭಾರತ ರಾಜ್ಯಗಳ ಪಿಂಚಣಿದಾರರ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೇಂದ್ರ ಸರ್ಕಾರ ಮುಂದಿನ 8ನೇ ವೇತನ ಆಯೋಗದಲ್ಲಿ ನಿವೃತ್ತ ನೌಕರರಿಗೆ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪರಿಷ್ಕರಿಸಲು ಸಾಧ್ಯವಿಲ್ಲ ಎಂದು ತಿಳಿಸಿರುವುದನ್ನು ವಿರೋಧಿಸಿ ಸಹಿ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ರಾಜ್ಯ ಸರ್ಕಾರ ಈ ಕುರಿತು ಏನಾದರೂ ವ್ಯತಿರಿಕ್ತ ನಿರ್ಧಾರ ಕೈಗೊಳ್ಳಬಹುದಾಗಿದೆ. ಆದ್ದರಿಂದ ಸಹಿ ಆಂದೋಲನದಿಂದ ನಿವೃತ್ತ ನೌಕರರ ಪರವಾಗಿ ವಾದಿಸಿ ಕೇಂದ್ರಕ್ಕೆ ಕಳುಹಿಸುವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘ, ವಿಶ್ರಾಂತ ಉದ್ಯೋಗಿಗಳ ಸಂಘ ತಿಳಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ್ ಈ ವಿಷಯ ತಿಳಿಸಿ, ಪ್ರತಿಯೊಬ್ಬ ನಿವೃತ್ತ ನೌಕರರೂ ಸಂಘಕ್ಕೆ ಭೇಟಿ ನೀಡಿ, ಈ ಸಹಿ ಸಂಗ್ರಹ ಅಭಿಯಾನದಲ್ಲಿ ಪಾಲ್ಗೊಳ್ಳಬೇಕು. 8ನೇ ವೇತನ ಆಯೋಗದಲ್ಲಿ ಆಗಬಹುದಾದ ಬದಲಾವಣೆ ಇವರಿಗೆ ಅರಿವಾಗದು. ಶೀಘ್ರದಲ್ಲೇ ಪ್ರತಿಭಟನಾ ಜಾಥಾ ನಡೆಸಿ ಡಿಸಿ ಮೂಲಕ ಪ್ರಧಾನಿಗೂ ಮನವಿ ಸಲ್ಲಿಸಲಾಗುವುದು ಎಂದು.

ಸಂವಿಧಾನ ಬದಲಾವಣೆ ಮಾಡಲು ಬಿಟ್ಟರೆ ನೀವು ಸತ್ತಂತೆ

ಎಂದು ಬಿಜೆಪಿ ನಾಯಕರು ಆಲೋಚನೆ ಮಾಡುತ್ತಾರೆ. ಅಷ್ಟರ ಮಟ್ಟಿಗೆ ಸಂವಿಧಾನ ಬದಲಾವಣೆ ಅವರ ಮೆದುಳು ಹೊಕ್ಕಿದೆ ಎಂದು ಕಿಡಿಕಾರಿದರು. ಈ ಹಿನ್ನೆಲೆಯಲ್ಲಿ ಬಿಜೆಪಿ ಸರ್ಕಾರದ ದಲಿತ ವಿರೋಧಿ ನೀತಿ ಅರಿಯಬೇಕು. ಜೈ ಭೀಮ್, ಜೈ ಸಂವಿಧಾನ, ಜೈ ಬಾಪು ಎಂಬುದು ನಿಮ್ಮ ಘೋಷಣೆಯಾಗಬೇಕು ಎಂದರು. ನಮ್ಮ ದೇಶದ ಮಣಿಪುರ ಹೊತ್ತಿ ಉರಿಯುತ್ತಿದೆ. ಆದರೆ ಮೋದಿ ಅವರು ಈ ತನಕ ಮಣಿಪುರಕ್ಕೆ ಒಮ್ಮೆಯೂ ಭೇಟಿ ನೀಡಿಲ್ಲ. ದೇಶದ ಬಹುತೇಕ ಕೈಗಾರಿಕೆಗಳನ್ನು ಅಂಬಾನಿ, ಅದಾನಿ ಕೈಗಿಟ್ಟು, ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಅನಾಥರಾಗಿ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ತಮ್ಮ ಭಾಷಣದುದ್ದಕ್ಕೂ ಮೋದಿ ಅವರ ವಿರುದ್ಧ ಟೀಕಾಪ್ರಹಾರ ನಡೆಸಿದ ಖರ್ಗೆ, ನಮ್ಮ ಕಾಂಗ್ರೆಸ್ ಪಾರ್ಟಿ ಜನಪರವಾಗಿದೆ. ಜಮ್ಮು–ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ನಮ್ಮ ಪಕ್ಷ ಅಸ್ತಿತ್ವದಲ್ಲಿದೆ. ನಾವು ಚುನಾವಣೆಯಲ್ಲಿ ಸೋತಿರಬಹುದು. ಆದರೆ ಮೂಲ ಸಿದ್ಧಾಂತ ಬಿಟ್ಟುಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

ಖಜಾನೆ ಯಾವಾಗಲೂ ಭರ್ತಿ: ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಲವು ಬಜೆಟ್ ಮಂಡಿಸಿದ್ದಾರೆ. ಅವರು ಅಧಿಕಾರಕ್ಕೆ ಬರುತ್ತಿದ್ದಂತೆ ಲಕ್ಷ್ಮೀ ಕಾಲು ಮುರಿದುಕೊಂಡು ರಾಜ್ಯದಲ್ಲಿ ಕೂರುತ್ತಾಳೆ. ಹಾಗಾಗಿ ಖಜಾನೆ ಯಾವಾಗಲೂ ಭರ್ತಿಯಾಗಿರುತ್ತದೆ ಎಂದು ಖರ್ಗೆ ಹೇಳಿದರು.

ಆದರೆ ಅದೇ ಬಿಜೆಪಿಯವರು ಅಧಿಕಾರಕ್ಕೆ ಬಂದರೆ ಲಕ್ಷ್ಮೀ ಓಡಿ ಹೋಗುತ್ತಾಳೆ. ಖಜಾನೆ ಖಾಲಿಯಾಗುತ್ತದೆ. ಆರ್ಥಿಕ ಪರಿಸ್ಥಿತಿ ಹದಗೆಡುತ್ತದೆ ಎಂದು ಬಿಜೆಪಿ ಬಗ್ಗೆ ಗೇಲಿ ಮಾಡಿದರು.

ಕೆಳಗೆ ಬರಲೇಬೇಕು: ತಮಗೆ ಅಧಿಕಾರ ಶಾಶ್ವತ ಎಂದು ಬಿಜೆಪಿಯವರು ಅತೀವ ವಿಶ್ವಾಸದಲ್ಲಿದ್ದಾರೆ. ಆದರೆ ಅಧಿಕಾರ ಯಾರಿಗೂ ಶಾಶ್ವತವಲ್ಲ ಎಂಬ ವಾಸ್ತವ ಸತ್ಯ ಅವರಿಗೆ ಗೊತ್ತಿಲ್ಲ. ಮೇಲೆ ಹೋದವರು ಒಂದಲ್ಲಾ ಒಂದು ದಿನ ಕೆಳಗೆ ಬರಬೇಕು. ಚಾಮುಂಡಿಬೆಟ್ಟ ಹತ್ತಿದವನು ಅಲ್ಲೇ ಇರಲು ಸಾಧ್ಯವಿಲ್ಲ, ಕೆಳಗೆ ಬರಬೇಕಲ್ಲವೇ ಎಂದು ಪ್ರಶ್ನಿಸಿದ ಖರ್ಗೆ, ಈಗ ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿಯವರು ಒಂದಲ್ಲಾ ಒಂದು ದಿನ ಅಧಿಕಾರ ಬಿಟ್ಟು ಬರಲೇಬೇಕು. ಇದು ಕಟು ಸತ್ಯ ಎಂದು ಭವಿಷ್ಯ ನುಡಿದರು.

ನ್ಯೂಸ್ ನೋಡಿದಾಗಲೆಲ್ಲಾ ಮೋದಿನೇ ಬರುತ್ತಾರೆ: ಬಹುತೇಕ ಟಿವಿ ಚಾನಲ್‌ಗಳಲ್ಲಿ ಪ್ರತಿದಿನ ಬೆಳಿಗ್ಗೆಯಿಂದ ರಾತ್ರಿವರೆಗೆ ಪ್ರಧಾನಿ ನರೇಂದ್ರ ಮೋದಿ ಅವರದೆ ನ್ಯೂಸ್ ಬರುತ್ತದೆ. ಸರ್ಕಾರದ ದೂರದರ್ಶನ್‌ನಲ್ಲಿ ಕೂಡ ನರೇಂದ್ರ ಮೋದಿ ಅವರನ್ನೇ ಹೊಗಳುತ್ತಾರೆ. ಈ ಮೂಲಕ ಬಿಜೆಪಿಯವರು ಮಾಧ್ಯಮಗಳನ್ನು ನಿಯಂತ್ರಿಸುತ್ತಿದ್ದಾರೆ ಎಂದು ಮಲ್ಲಿಕಾರ್ಜುನ ಖರ್ಗೆ ಆಪಾದಿಸಿದರು.

ಎರಡು ಪರ್ಸೆಂಟ್ ವ್ಯತ್ಯಾಸವಷ್ಟೆ: ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ನಮಗೂ ಬಿಜೆಪಿಗೂ ಬಾರೀ ವ್ಯತ್ಯಾಸವೇನಿಲ್ಲ, ಕೇವಲ ಎರಡು ಪರ್ಸೆಂಟ್ ಅಷ್ಟೆ, ಕರ್ನಾಟಕದಿಂದ 10, ಮಹಾರಾಷ್ಟ್ರದಿಂದ 10 ಸೇರಿದಂತೆ ಕೆಲವು ರಾಜ್ಯಗಳಿಂದ ಒಂದಷ್ಟು ಸೀಟ್ ಬಂದಿದ್ದರೆ ನಾವೇ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದೆವು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಬಿವಿಬಿ ಮೈಸೂರು ಕೇಂದ್ರದಿಂದ 'ಕೆಬಿಜಿಯವರಿಗೆ ಸಂಗೀತ ನಮನ'





ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನ ಕೇಂದ್ರದಲ್ಲಿ, ಬಿವಿಬಿ ಬೆಂಗಳೂರು ಕೇಂದ್ರ ಹಾಗೂ ಇನ್ಫೋಸಿಸ್ ಫೌಂಡೇಷನ್ ಸಹಯೋಗದಲ್ಲಿ ಶನಿವಾರ ನಡೆದ 146ನೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ಗಣ್ಯರು ದೀಪ ಬೆಳಗಿಸಿ, ಉದ್ಘಾಟಿಸಿದರು. ಬಿವಿಬಿ ಶಾಲೆಯ ಪ್ರಾಂಶುಪಾಲೆ ಲೇಖಾ ನಾಯರ್, ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖ್ಯಾತ ಸಂಗೀತಗಾರ ವಿದ್ವಾನ್ ಆರ್.ಕೆ.ಪದ್ಮನಾಭ, ಬಿವಿಬಿ ಮೈಸೂರು ಕೇಂದ್ರದ ನೂತನ ಅಧ್ಯಕ್ಷ ಡಾ.ಸಿ.ನಾಗಣ್ಣ, ಖಜಾಂಚಿ ಎ.ಟಿ.ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ.ಗಾಯತ್ರಿ, ಟಿ.ಎಸ್.ಗಂಗಾಧರ್, ಬಿ.ಯೋಗೇಶ್ ಚಿತ್ರದಲ್ಲಿದ್ದಾರೆ. ಗಾನಕಲಾಭೂಷಣ ವಿದ್ವಾನ್ ಆರ್.ಕೆ.ಪದ್ಮನಾಭ ಅವರ ಶಾಸ್ತ್ರೀಯ ಸಂಗೀತ ಪ್ರಸ್ತುತಿಯನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.19(ಎಸ್‌ಬಿಡಿ)– ಭಾರತೀಯ ವಿದ್ಯಾಭವನ(ಬಿವಿಬಿ) ಮೈಸೂರು ಕೇಂದ್ರದ ವತಿಯಿಂದ ಕೇಂದ್ರದ ಅಧ್ಯಕ್ಷರೂ ಆಗಿದ್ದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ದಿವಂಗತ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರಿಗೆ ಶನಿವಾರ 'ಸಂಗೀತ ನಮನ' ಸಲ್ಲಿಸಲಾಯಿತು.

ಬಿವಿಬಿ ಮೈಸೂರು ಹಾಗೂ ಬೆಂಗಳೂರು ಕೇಂದ್ರ ಮತ್ತು ಇನ್ಫೋಸಿಸ್ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಿದ್ದ 146ನೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೆಬಿಜಿ ಅವರಿಗೆ ಸಮರ್ಪಿಸಲಾಯಿತು. ಕರ್ನಾಟಕ ಶಾಸ್ತ್ರೀಯ ಸಂಗೀತದ ಮೇರು ಕಲಾವಿದರಾದ ಗಾನಕಲಾಭೂಷಣ ವಿದ್ವಾನ್ ಆರ್.ಕೆ. ಪದ್ಮನಾಭ ಸಂಗೀತ ಕಛೇರಿಯ ಆರಂಭದಲ್ಲಿ ಡಾ.ಕೆ.ಬಿ.ಗಣಪತಿ ಅವರ ಹೆಸರನ್ನೂ ಸೇರಿಸಿ ಗಾಯನ ಪ್ರಸ್ತುತಪಡಿಸಿದರು. ಇದಕ್ಕೂ ಮುನ್ನ ಗಣ್ಯರು ಕೆಬಿಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ದೀಪ ಬೆಳಗಿದರು.

ನುಡಿ ನಮನ: ಈ ವೇಳೆ ಬಿವಿಬಿ ಮೈಸೂರು ಕೇಂದ್ರದ ನೂತನ ಅಧ್ಯಕ್ಷರಾದ ಡಾ.ಸಿ.ನಾಗಣ್ಣ ಮಾತನಾಡಿ, ಬಿವಿಬಿ ಅಧ್ಯಕ್ಷರಾಗಿದ್ದ ಡಾ.ಕೆ.ಬಿ.ಗಣಪತಿ ಅವರು, ಸುಮಾರು ಅರ್ಧ ಶತಮಾನದ ಹಿಂದೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಪತ್ರಿಕೆಗಳನ್ನು ಪ್ರಾರಂಭಿಸಿದರು. ಆ ಕಾಲದಲ್ಲಿ ಇಂಗ್ಲಿಷ್ ಸಂಜೆ ದೈನಿಕ ಆರಂಭಿಸುವುದು ಸುಲಭದ ಮಾತಾಗಿರಲಿಲ್ಲ. ತಮ್ಮ ಪತ್ರಿಕೆಗಳನ್ನು ಬಹಳ ವಿಚಕ್ಷಣೆಯಿಂದ ಸಂಸ್ಕೃತಿ, ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಹೀಗೆ ಎಲ್ಲಾ ಕ್ಷೇತ್ರಗಳನ್ನೂ ಪ್ರತಿನಿಧಿಸುವ ರೀತಿಯಲ್ಲಿ ವಿನ್ಯಾಸಗೊಳಿಸಿದರು. ಈ ಎರಡೂ ಪತ್ರಿಕೆಗಳು ಮೈಸೂರಿನ ದಿನಚರಿಯನ್ನು ಗುರುತಿಸುವಂತಾದವು. ವಿವಿಧ ಕ್ಷೇತ್ರಗಳಿಂದ ಕೆ.ಬಿ.ಗಣಪತಿ ಅವರಿಗೆ ನುಡಿ ನಮನ ತಿಂಗಳುಗಳ ಕಾಲ ಮುಂದುವರೆಯುತ್ತದೆ. ನಾವು ನಾಡಿನ ಪ್ರಸಿದ್ಧ ಸಂಗೀತಗಾರರಾದ ವಿದ್ವಾನ್ ಡಾ.ಆರ್.ಕೆ. ಪದ್ಮನಾಭ ಅವರ ಸಂಗೀತ ಕಛೇರಿ ಮೂಲಕ ಕೆ.ಬಿ.ಗಣಪತಿ ಅವರಿಗೆ ನಮನಗಳನ್ನು ಸಮರ್ಪಿಸುತ್ತಿದ್ದೇವೆ ಎಂದು ತಿಳಿಸಿದರು.

ಕರ್ನಾಟಕ ಹಾಗೂ ಮೈಸೂರು ಸಂಸ್ಕೃತಿಯನ್ನು ಚೆನ್ನಾಗಿ ಅರಿತಿದ್ದ ಕೆಬಿಜಿ ಅವರು, ತಮ್ಮ ಪತ್ರಿಕೆಗಳಲ್ಲಿ ಸಂಗೀತ ಮತ್ತು ನೃತ್ಯಕ್ಕೆ ಧಾರಾಳವಾಗಿ ಸ್ಥಳ ನೀಡುತ್ತಿದ್ದರು. ಹಿರಿಯರ ಜೊತೆಗೆ ಉದಯೋನ್ಮುಖ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ಪತ್ರಿಕೆಗಳಲ್ಲಿ ಪ್ರಕಟವಾಗುವ ತಮ್ಮ ಭಾವಚಿತ್ರ ಸಹಿತ ಪರಿಚಯದ ಲೇಖನಗಳನ್ನು ಓದಿ ಕಲಾವಿದರು ಪುಳಕಿತರಾಗುತ್ತಿದ್ದರು. ಇದರಿಂದ ಕಲಾವಿದರ ಜನಪ್ರಿಯತೆಯೂ ಹೆಚ್ಚಾಗಲು ಸಾಧ್ಯವಾಯಿತು. ಸಮಾಜದಲ್ಲಿ ಸಂಗೀತ ಮಹತ್ವದ ಪಾತ್ರ ಹೊಂದಿದ್ದು, ಮಾನವೀಯತೆ ಮೇಲೆ ಗುಣಾತ್ಮಕ ಪರಿಣಾಮ ಬೀರುತ್ತದೆ ಎಂಬುದನ್ನು ಕೆಬಿಜಿ ಅವರು ಚೆನ್ನಾಗಿ ಅರಿತಿದ್ದರು. ಸಂಗೀತವು ನಮಗೆ ಶಕ್ತಿ ಹಾಗೂ ಪ್ರೇರಣೆ ನೀಡುವುದರ ಜೊತೆಗೆ ಸಮಾಜದ ಬದಲಾವಣೆಗೆ ಪ್ರಭಾವ ಬೀರುತ್ತದೆ ಎಂಬುದನ್ನು ತಿಳಿದಿದ್ದ ಅವರು, ಭಾರತೀಯ ವಿದ್ಯಾಭವನದ ಹಲವು ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಸಂಗೀತಕ್ಕೆ ಸಂಬಂಧಿಸಿದಂತೆ ಅವರ ಗಮನ ಸೆಳೆಯುವ ಅಂಶಗಳನ್ನು ಎ.ಟಿ.ಭಾಷ್ಯಂ ಹಾಗೂ ಪಿ.ಎಸ್.ಗಣಪತಿ ಅವರೊಂದಿಗೆ ಹಂಚಿಕೊಂಡು ಹೆಚ್ಚಿನ ಮಾಹಿತಿ ತಿಳಿದುಕೊಳ್ಳುತ್ತಿದ್ದರು. ಸಾರ್ಥಕವಾದ ಜೀವನ ನಡೆಸಿದ ಕೆಬಿಜಿ ಅವರು ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ ಶ್ರೇಷ್ಠ ಆದರ್ಶವನ್ನು ಬಿಟ್ಟು ಹೋಗಿದ್ದಾರೆ ಎಂದು ಸ್ಮರಿಸಿಕೊಂಡರು.

ನಾದತಪಸ್ವಿಯ ಗಾನಸುಧೆ: ದೇವರ ನಾಮದೊಂದಿಗೆ ಗಾಯನ ಸುಧೆ ಆರಂಭಿಸಿದ ವಿದ್ವಾನ್ ಡಾ.ಆರ್.ಕೆ.ಪದ್ಮನಾಭ ಅವರು, ಬಿವಿಬಿಯ 146ನೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಶೇಷಗೊಳಿಸಿದರು. ಕಲಾವಿದರಾದ ವಿದ್ವಾನ್ ಸಿ.ಚೆಲುವರಾಜು(ಮೃದಂಗ), ವಿದುಷಿ ಸಿಂಧು ಸುಚೇತನ್(ವಯೋಲಿನ್), ವಿದ್ವಾನ್ ಅಭಿಷೇಕ್ ಹಾಗೂ ವಿದ್ವಾನ್ ಅನ್ವಿಕ್ (ವೀಣೆ) ಪಕ್ಕವಾದ್ಯ ಸಹಕಾರದೊಂದಿಗೆ ದೇವರನಾಮ, ತಿಲ್ಲಾನ ಹಾಗೂ ವಿವಿಧ ಕೃತಿಗಳನ್ನು ಹೃನ್ಮನ ಮುಟ್ಟುವಂತೆ ಹಾಡಿ ಶಾಸ್ತ್ರೀಯ ಸಂಗೀತ ಲೋಕವನ್ನೇ ಸೃಷ್ಟಿಸಿ, ನೆರೆದಿದ್ದವರನ್ನು ಮಂತ್ರಮುಗ್ಧಗೊಳಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ.ಗಾಯತ್ರಿ, ಟಿ.ಎಸ್.ಗಂಗಾಧರ್, ಬಿ.ಯೋಗೇಶ್, ಪ್ರಾಂಶುಪಾಲೆ ಶ್ರೀಮತಿ ಲೇಖಾ ನಾಯರ್, ಉಪಪ್ರಾಂಶುಪಾಲೆ ಶ್ರೀಮತಿ ಪ್ರಫುಲ್ಲಾ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಎಕ್ಕ (ಕ)	4 ಪ್ರದರ್ಶನಗಳು
ಲಿಡೋ	
ತಮ್ಮುಡು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೆಬಿಜಿಯವರು ನನಗೆ ಮಾರ್ಗದರ್ಶಕರು

ಮಾಜಿ ಮೇಯರ್ ಸಂದೇಶ್ ಸ್ವಾಮಿ ಸ್ಮರಣೆ



ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ಎನ್.ಆರ್.ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜು, ಮಾಜಿ ಅಧ್ಯಕ್ಷ ಸು.ಮುರುಳಿ, ಪ್ರಧಾನ ಕಾರ್ಯದರ್ಶಿಗಳಾದ ಪದ್ಮನಾಭ್, ಮಂಜು ಸಿಗೌಡ, ಮಾಜಿ ಕಾರ್ಯದರ್ಶಿ ವೇಲು ಅವರು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ನಿವಾಸಕ್ಕೆ ಶನಿವಾರ ಭೇಟಿ ನೀಡಿ, ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಡಾ.ಕೆ.ಬಿ.ಗಣಪತಿ ಅವರ ಪುತ್ರ ಮಿಕ್ಕಿ ಬೋಪಣ್ಣ(ಎಡದಿಂದ ನಾಲ್ಕನೆಯವರು) ಚಿತ್ರದಲ್ಲಿದ್ದಾರೆ.

ಮೈಸೂರು, ಜು.19– ಜನರ ಮನಸ್ಸಿನಲ್ಲಿ ಉಳಿಯುವಂತಹ ಕೆಲಸಗಳನ್ನು ರಾಜಕಾರಣಿಗಳು ಮಾಡಬೇಕು ಎಂದು ಹಿರಿಯ ಪತ್ರಿಕೋದ್ಯಮಿಗಳಾಗಿದ್ದ ಡಾ.ಕೆ.ಬಿ.ಗಣಪತಿಯವರು ಸಲಹೆ ನೀಡಿದ್ದರು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಸ್ಮರಿಸಿಕೊಂಡಿದ್ದಾರೆ.

ನಾನು ಮೈಸೂರು ಮೇಯರ್ ಆಗಿದ್ದ ಸಂದರ್ಭದಲ್ಲಿ ಕೆ.ಬಿ.ಗಣಪತಿಯವರನ್ನು ಭೇಟಿ ಮಾಡಿ ಮಾರ್ಗದರ್ಶನ ಕೋರಿದ್ದೆ. ಆಗ ಅವರು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರ ಬಗ್ಗೆ ಹೇಳಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಹೇಗಿರಬೇಕೆಂದು ತಿಳಿಸಿಕೊಟ್ಟರು. ಮಿರ್ಜಾ ಇಸ್ಮಾಯಿಲ್ ಅವರು ಕುದುರೆಯೇರಿ ನಗರವನ್ನೆಲ್ಲಾ ಸುತ್ತಾಡಿ ಜನರ ಸಮಸ್ಯೆಗಳನ್ನು ಆಲಿಸಿ, ಕೂಡಲೇ ಪರಿಹಾರ ಕ್ರಮ ಕೈಗೊಳ್ಳುತ್ತಿದ್ದರು. ಮೇಯರ್ ಆಗಿರುವ ನೀವೂ ಪ್ರತಿನಿತ್ಯ ವಾರ್ಡ್‌ಗಳಿಗೆ ಭೇಟಿ ನೀಡುವಂತೆ ಸಲಹೆ ನೀಡಿದ್ದರು. ಕೆಬಿಜಿ ಅವರ ಮಾರ್ಗದರ್ಶನದಂತೆಯೇ ವಾರ್ಡ್ ಭೇಟಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆ.

ಚಾಮುಂಡಿಬೆಟ್ಟದಲ್ಲಿ ಹೆಚ್ಚಿನ ಸಸಿಗಳನ್ನು ಬೆಳೆಸಬೇಕು. ಆ ಮೂಲಕ ಬಂಡೆಗಳು ಮಾತ್ರವಲ್ಲ ನೆಲವೂ ಕೂಡ ಹಚ್ಚಹಸುರಿನಿಂದ ಆವೃತಗೊಳ್ಳುವಂತೆ ಮಾಡಬೇಕು. ನಗರದ ಪಾರಂಪರಿಕ ಕಟ್ಟಡಗಳ ಸೌಂದರ್ಯ ಹಾಳಾಗದಂತೆ ರಕ್ಷಣೆ ಮಾಡಬೇಕು. ಕಟ್ಟಡಗಳ ಮೇಲೆ ಗಿಡ–ಗಂಟಿ ಬೆಳೆಯದಂತೆ ನಿಗಾ ವಹಿಸಬೇಕು. ರಾಜಮಹಾರಾಜರ ಸಮಾಧಿ ಸ್ಥಳವನ್ನು ಅಭಿವೃದ್ಧಿಪಡಿಸಿ, ಅವುಗಳನ್ನು ಪ್ರವಾಸಿತಾಣವಾಗಿ ರೂಪಿಸುವ ಮೂಲಕ ಮೈಸೂರಿನ ಐತಿಹಾಸಿಕ ಮಹತ್ವವನ್ನು ಸಾರುವಂತಾಗಬೇಕು ಎಂದು ಸಲಹೆ ನೀಡಿದ್ದರು. ನಾನು ಮೇಯರ್ ಆಗಿದ್ದ ಒಂದು ವರ್ಷದ ಅವಧಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಬೆಂಬಲವಾಗಿದ್ದರು ಎಂದು ಪತ್ರಿಕಾ ಹೇಳಿಕೆಯಲ್ಲಿ ನೆನಪಿಸಿಕೊಂಡಿದ್ದಾರೆ.

ಮಹಿಳಾ ಉದ್ಯಮಿಗಳ 'ಸ್ಫೂರ್ತಿ ಉತ್ಸವ'ಕ್ಕೆ ಚಾಲನೆ

ಮಹಿಳಾ ಉದ್ಯಮಿಗಳು ತಯಾರಿಸುವ ಉತ್ಪನ್ನಗಳ ಪ್ರದರ್ಶನ, ಮಾರಾಟ



ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆಯ ಮಹಿಳಾ ಘಟಕವಾದ ಸ್ಫೂರ್ತಿ ವತಿಯಿಂದ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಮಹಿಳಾ ಉದ್ಯಮಿಗಳು ತಯಾರಿಸಿದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ 'ಸ್ಫೂರ್ತಿ ಉತ್ಸವ'ಕ್ಕೆ ದಿಯಾ ಸಿಲ್ಕ್ ವ್ಯವಸ್ಥಾಪಕ ನಿರ್ದೇಶಕಿ ನಮ್ರತಾ ಶೆಣೈ ಚಾಲನೆ ನೀಡಿದರು.


ಮೈಸೂರು, ಜು.19(ಜಿಎ)–ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆಯ ಮಹಿಳಾ ಘಟಕವಾದ ಸ್ಫೂರ್ತಿ ವತಿಯಿಂದ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಮಹಿಳಾ ಉದ್ಯಮಿಗಳು ತಯಾರಿಸುವ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ 'ಸ್ಫೂರ್ತಿ ಉತ್ಸವ'ಕ್ಕೆ ದಿಯಾ ಸಿಲ್ಕ್ ವ್ಯವಸ್ಥಾಪಕ ನಿರ್ದೇಶಕಿ ನಮ್ರತಾ ಶೆಣೈ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಮಹಿಳೆಯರು ಉದ್ಯಮಿಗಳಾಗುವುದೇ ನಿಜವಾದ ಸ್ಫೂರ್ತಿ. ಅವರಿಗೆ ಬಿಲ್ಡರ್ಸ್ ಅಸೋಸಿಯೇಷನ್ ಸಾಥ್ ನೀಡುತ್ತಿರುವುದು ಸಂತಸದ ವಿಚಾರ ಎಂದು ಶ್ಲಾಘಿಸಿದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆಯ ಅಧ್ಯಕ್ಷ ಶ್ರೀನಾಥ್ ಮಾತನಾಡಿ, ಸ್ಫೂರ್ತಿ ಅಂದರೆ ಉತ್ತಮ ಬಾಂಧವ್ಯವಾಗಿದೆ. ವರ್ಷದಿಂದ ವರ್ಷಕ್ಕೆ ಸ್ಫೂರ್ತಿ ಉತ್ಸವಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸಾಮಾಜಿಕ ಕಳಕಳಿ ಇಟ್ಟುಕೊಂಡು ಮಾಡುತ್ತಿದ್ದಾರೆ. ಮಹಿಳೆ ಉದ್ಯಮಿಗಳಿಗೆ ಮತ್ತಷ್ಟು ಸ್ಫೂರ್ತಿ ನೀಡಲಿ ಎಂದರು.

ಉತ್ಸವದಲ್ಲಿ 51 ಮಳಿಗೆಗಳನ್ನು ನಿರ್ಮಾಣ ಮಾಡಿದ್ದು, ಇದರಲ್ಲಿ 8 ಮಳಿಗೆ ಆಹಾರದ್ದಾಗಿವೆ. ಮಹಿಳಾ ಉದ್ಯಮಿಗಳ ನಡುವೆ ಸಂಪರ್ಕ, ಉತ್ಪಾದನೆಗೆ ಉತ್ತೇಜನ ನೀಡುವ ಉದ್ದೇಶವಾಗಿದ್ದು, ಆಭರಣ, ಉಡುಪು, ಫ್ಯಾಷನ್ ಮತ್ತು ಸೌಂದರ್ಯ ಪರಿಕರ, ಗೃಹಾಲಂಕಾರ, ಕುಂಬಾರಿಕೆ, ಹಸಿರು ಪರಿಕಲ್ಪನೆ, ಉಡುಗೊರೆ ಕಲಾಕೃತಿ, ಆಹಾರ ಉತ್ಪನ್ನಗಳ ಮಳಿಗೆ, ದೇಸಿ ಆಟಗಳು ಇವೆ. ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ ತೆರೆದಿರಲಿದ್ದು, ಉಚಿತ ಪ್ರವೇಶವಿದೆ. ಕಾರ್ಯಕ್ರಮದಲ್ಲಿ ಅಧ್ಯಕ್ಷೆ ಕವಿತಾ ಗುರುರಾಜ್, ಕಾರ್ಯದರ್ಶಿ ರಮ್ಯಾ ಲೋಕೇಶ್, ಶಾಂತಿ ಭಾರದ್ವಾಜ್, ವೀಣಾ ಅಶೋಕ್, ರೇಖಾ ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಸೀಡ್‌ಬಾಲ್ ವಿತರಣಾ ಕಾರ್ಯಕ್ರಮ



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಸೀಡ್‌ಬಾಲ್ ವಿತರಣಾ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು. ಈ ವೇಳೆ ಸುತ್ತೂರು ಶ್ರೀಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿ ವರ್ಗ, ಜೆಎಸ್‌ಎಸ್ ಶಾಲೆಯ ಸಿಬ್ಬಂದಿ ಹಾಜರಿದ್ದರು.

ಪಿಹೆಚ್‌ಡಿ ಸಂಶೋಧನೆ ಕೈಗೊಳ್ಳಲು ಅವಕಾಶ ಕೋರಿ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಪಿಹೆಚ್‌ಡಿ ಸಂಶೋಧನೆ ಕೈಗೊಳ್ಳಲು ಪ್ರವೇಶಾತಿಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ವಿವಿಯ ಕ್ರಾಫರ್ಡ್ ಭವನ ಮುಂಭಾಗ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.


ಮೈಸೂರು, ಜು.19(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಪಿಹೆಚ್‌ಡಿ ಸಂಶೋಧನೆ ಕೈಗೊಳ್ಳಲು ಪ್ರವೇಶಾತಿಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ವಿವಿಯ ಕ್ರಾಫರ್ಡ್ ಭವನ ಮುಂಭಾಗ ಸಂಶೋಧನ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು ವಿವಿಯು ನಡೆಸುವ ಪಿಹೆಚ್‌ಡಿ ಪ್ರವೇಶಾತಿ ಪರೀಕ್ಷೆಯಲ್ಲಿ ಮತ್ತು ಜೆಆರ್‌ಎಫ್, ಎನ್‌ಇಟಿ, ಕೆ–ಸೆಟ್ ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡು ಗರಿಷ್ಠ ಅಂಕಗಳನ್ನು ಪಡೆದು ಸಂಶೋಧನೆ ಕೈಗೊಳ್ಳಲು ಅರ್ಹತೆ ಪಡೆದಿರುವ ಸಂಶೋಧನಾ ಆಕಾಂಕ್ಷಿಗಳಾದ ನಮಗೆ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಸಂಶೋಧನೆ (ಪಿಹೆಚ್‌ಡಿ) ಕೈಗೊಳ್ಳಲು ಪ್ರವೇಶಾತಿ ಕಲ್ಪಿಸುವಂತೆ ಕೋರಿ ಹತ್ತಾರು ಬಾರಿ ಕುಲಪತಿ ಹಾಗೂ ಪರೀಕ್ಷಾಂಗ ಕುಲಸಚಿವರಿಗೆ ಮನವಿ ಸಲ್ಲಿಸಿರುತ್ತೇವೆ. ಆದರೆ ನಮ್ಮ ಮನವಿಗೆ ವಿಶ್ವವಿದ್ಯಾಲಯದಿಂದ ಯಾವುದೇ ಪೂರಕ ಪ್ರತಿಕ್ರಿಯೆ ಇಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ಈ ಸಮಸ್ಯೆ ಹಿನ್ನೆಲೆಯಲ್ಲಿ ಮೇ ತಿಂಗಳ 20, 21, 22, 23ರಂದು ಅಹೋರಾತ್ರಿ ಪ್ರತಿಭಟನೆಯನ್ನೂ ಮಾಡಿದ್ದು, ಬಳಿಕ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಮೇ.23ರಂದು ತಮ್ಮ ನಿವಾಸದಲ್ಲಿ ಖುದ್ದು ಭೇಟಿ ಮಾಡಿ ಸದರಿ ವಿಷಯವನ್ನು ತಿಳಿಸಲಾಗಿತ್ತು. ನಂತರ ಅವರ ಮೌಖಿಕ ಸೂಚನೆ ಅನುಸಾರ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಕೈಬಿಟ್ಟು, ಜೊತೆಗೆ ಉನ್ನತ ಶಿಕ್ಷಣ ಸಚಿವರ ಗಮನಕ್ಕೂ ತರಲಾಗಿತ್ತು ಆದರೆ ಈ ಮೌಖಿಕ ಆದೇಶದ ಬಳಿಕವೂ ವಿಶ್ವವಿದ್ಯಾನಿಲಯವು ನಮಗೆ ಯಾವುದೇ ರೀತಿಯ ನ್ಯಾಯವನ್ನು ದೊರಕಿಸಿಕೊಟ್ಟಿಲ್ಲ. ಆದುದರಿಂದ ಪಿಹೆಚ್‌ಡಿ ಸಂಶೋಧನೆಗೆ ಎಲ್ಲಾ ಅರ್ಹತೆಯುಳ್ಳ ಪರಿಶಿಷ್ಟ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳಾದ ನಮಗೆ ಪಿಹೆಚ್‌ಡಿ ಪ್ರವೇಶಾತಿ ಕಲ್ಪಿಸಲು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಸೂಚನೆ ನೀಡುವ ಮೂಲಕ ಅತಂತ್ರ ಸ್ಥಿತಿಯಲ್ಲಿರುವ ನಮಗೆ ನ್ಯಾಯ ಒದಗಿಸಿಕೊಟ್ಟು ನಮ್ಮ ಭವಿಷ್ಯದ ಶೈಕ್ಷಣಿಕ ಹಾದಿಗೆ ತಾವು ಬೆಳಕು ತೋರಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ರವಿಕುಮಾರ್, ನವೀನ್, ರೋಜಾ, ಮೌನದೊರೆ, ತರುಣ್, ಪ್ರಸನ್ನ, ನವೀನ್ ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ದಲೈಲಾಮ ವಿಶ್ವ ಶಾಂತಿದೂತ: ಗೃಹಸಚಿವ ಡಾ. ಜಿ.ಪರಮೇಶ್ವರ್ ಬಣ್ಣನೆ



ಮೈಸೂರಿನ ಕಲಾಮಂದಿರದಲ್ಲಿ ಟಿಬೆಟಿಯನ್ನರ 14ನೇ ದಲೈಲಾಮಾ ಅವರ ಜನ್ಮ ದಿನಾಚರಣೆ ಪ್ರಯುಕ್ತ ಶನಿವಾರ ಸಂಜೆ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಚಿತ್ರದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮತ್ತು ಇತರರನ್ನು ಕಾಣಬಹುದು.

ಮೈಸೂರು, ಜು.19(ವಿವಿಹೆಚ್)– ಪ್ರಪಂಚದಾದ್ಯಂತ ಶಾಂತಿ ನೆಲೆಸಲು ಜಾತಿ, ಧರ್ಮ, ಭೇದ–ಭಾವ ಎಲ್ಲವನ್ನು ಮೆಟ್ಟಿನಿಂತು ಶಾಂತಿ ಸಂದೇಶ ಸಾರಿದ ದಲೈಲಾಮರನ್ನು ವಿಶ್ವವೇ ಗುರುತಿಸಿದೆ ಎಂದು ರಾಜ್ಯ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ನಗರದ ಕಲಾಮಂದಿರದಲ್ಲಿ ಟಿಬೆಟಿಯನ್ನರ 14ನೇ ದಲೈಲಾಮಾ ಅವರ ಜನ್ಮ ದಿನಾಚರಣೆ ಪ್ರಯುಕ್ತ ಶನಿವಾರ ಸಂಜೆ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ರಾಷ್ಟ್ರ–ರಾಷ್ಟ್ರಗಳ ನಡುವೆ ಭಿನ್ನಮತ ಹೆಚ್ಚಾಗುತ್ತಿದ್ದು, ಹಿಂಸೆಯ ಮಾರ್ಗವನ್ನು ಹಿಡಿಯುತ್ತಿವೆ. ಆದರೆ 2500 ವರ್ಷಗಳ ಹಿಂದೆ ಶಾಂತಿ ಸೂತ್ರ ಸಾರಿದ ಬುದ್ಧನ ಬೋಧನೆಗಳು ಇಂದಿಗೂ ಪ್ರಸ್ತುತವಾಗಿದ್ದು, ಇವುಗಳನ್ನು ಪ್ರಪಂಚದ ಮೂಲೆ ಮೂಲೆಗೆ ಪಸರಿಸುವ ಕೆಲಸವನ್ನು ದಲೈಲಾಮ ಮಾಡುತ್ತಾ ಬರುತ್ತಿದ್ದಾರೆ. ಆಧುನಿಕ ಜಗತ್ತಿನ ಶಾಂತಿ ದೂತ ದಲೈಲಾಮ ಎಂದು ಶ್ಲಾಘಿಸಿದರು.

1950ರ ದಶಕದಲ್ಲಿ ಟಿಬೆಟ್ ಮೇಲೆ ಚೀನಾ ಮಾಡಿದ ಆಕ್ರಮಣದಿಂದಾಗಿ ಟಿಬೆಟಿಯನ್ನರು ತಮ್ಮ ನಾಡು ತೊರೆದು ಭಾರತಕ್ಕೆ ಬರಬೇಕಾಯಿತು. ಈ ವೇಳೆ ಟಿಬೆಟಿಯನ್ನರಿಗೆ ಸಹಾಯ ಮಾಡಿ ಭಾರತದಲ್ಲಿ ನೆಲೆಯೂರುವಂತೆ ಮಾಡಿದ ಅಂದಿನ ಪ್ರಧಾನಿ ಜವಹರಲಾಲ್ ನೆಹರು ಹಾಗೂ ಅಂದಿನ ಕರ್ನಾಟಕ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರನ್ನು ದಲೈಲಾಮ ಸದಾ ನೆನೆಯುತ್ತಾರೆ. ಭಾರತದಾದ್ಯಂತ ಟಿಬೆಟಿಯನ್ನರು ಶಾಂತಿ, ಸೌಹಾರ್ದತೆಯಿಂದ ಎಲ್ಲರ ಜೊತೆಗೂಡಿ ಬಾಳುವಂತೆ ಮಾಡಿರುವುದು, ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತಿರುವುದು ನಮ್ಮ ಸಂವಿಧಾನವಾಗಿದ್ದು, ಅದರ ಆಶಯದಡಿ ಜೀವನ ನಡೆಸುವಂತೆ ಸಾರಿದ್ದು ನಿಜಲಿಂಗಪ್ಪ ಎಂದು ತಿಳಿಸಿದರು.

ಎಲ್ಲವನ್ನು ಮೆಟ್ಟಿನಿಲ್ಲುವ ಶಕ್ತಿ ಇರುವುದು ಶಿಕ್ಷಣಕ್ಕೆ. ಹಾಗಾಗಿ ಟಿಬೆಟಿಯನ್ನರು ಹೆಚ್ಚು–ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬೇಕು. ಆ ಮೂಲಕ ತಮ್ಮ ಕಲೆ, ಸಂಸ್ಕೃತಿಯನ್ನು ಕಾಪಾಡಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 14ನೇ ದಲೈಲಾಮ, ಆಧ್ಯಾತ್ಮದ ಗುರುಗಳಾಗಿ ಅದೇ ಸಂದರ್ಭದಲ್ಲಿ ರಾಜಕೀಯ ಮಾರ್ಗದರ್ಶಕರಾಗಿ ಎರಡು ರೀತಿಯ ಜವಾಬ್ದಾರಿಗಳನ್ನು ನಿಭಾಯಿಸುತ್ತಿರುವ ಧಾರ್ಮಿಕ ಗುರುಗಳಾಗಿದ್ದು, ಅವರು ನಮ್ಮ ನಡುವೆ ಇರುವ ಅಪರೂಪದ ಶ್ರೇಷ್ಠ ಸಂತ ಎಂದು ಬಣ್ಣಿಸಿದರು.

ಬೌದ್ಧ ಧರ್ಮದ ಮಾರ್ಗದರ್ಶಕರಾಗಿ ಬೌದ್ಧ ಧರ್ಮವನ್ನು ಜಗತ್ತಿನಾದ್ಯಂತ ಮಾನವೀಯತೆ, ಅನುಕಂಪ, ಸೌಹಾರ್ದತೆ, ಕ್ಷಮಾ ಗುಣಗಳನ್ನು ಬಿತ್ತುತ್ತಿರುವ ಶಾಂತಿ ದೂತ. ದಲೈಲಾಮರ ಶಾಂತಿ ಸಂದೇಶಕ್ಕೆ ನೊಬೆಲ್ ಪ್ರಶಸ್ತಿಯೇ ಒಲಿದು ಬಂದಿದೆ. ಪ್ರಶಸ್ತಿಗಳು ಬಂದ ಕಾರಣದಿಂದ ದಲೈಲಾಮ ದೊಡ್ಡವರಾಗಿಲ್ಲ. ದಲೈಲಾಮರಿಗೆ ಕೊಟ್ಟ ಕಾರಣದಿಂದ ಪ್ರಶಸ್ತಿಗಳ ಗೌರವಗಳು ಹೆಚ್ಚಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಐಜಿಪಿ ಬೋರಲಿಂಗಯ್ಯ, ಮಾಜಿ ಎಂಎಲ್‌ಸಿ ವೇಣುಗೋಪಾಲ್, ಗೆಶೆ ಲಕ್ಡೋರ್, ನ್ಗಚೆನ್, ಗೆಲೆಕ್, ಚಿಮೆ, ಥುಪ್ಟೆನ್ ಟೆಸಿಂಗ್, ಲೋಬ್ಸಾಂಗ್ ಧೋಂಡಪ್ ಸೇರಿದಂತೆ ಹಲವು ಟಿಬೆಟ್ ಧರ್ಮಗುರುಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಬಳಿಕ ಟಿಬೆಟಿಯನ್ನರಿಂದ ಬುದ್ಧ ಕಲೆ, ಉತ್ಸಾಹಭರಿತ ಹಿಮಸಿಂಹ ಮತ್ತು ಯಾಕ್ ನೃತ್ಯ ಪ್ರದರ್ಶನ ಮಾಡಲಾಯಿತು.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಜನನ: 06–05–1996 **ಯದು ಎಂ. ಗೌಡ** ನಿಧನ: 11–07–2025

ಜೆಡಿಎಸ್ ಮುಖಂಡರಾದ ಹೂಟಗಳ್ಳಿ ಮಂಚೇಗೌಡರ ದ್ವಿತೀಯ ಪುತ್ರ

ಇವರು ದಿನಾಂಕ: 11–07–2025ನೇ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ **ಉತ್ತರ ಕ್ರಿಯಾದಿ ಕಾರ್ಯವನ್ನು** ದಿನಾಂಕ: 21–07–2025 ನೇ ಸೋಮವಾರ ಬೆಳಿಗ್ಗೆ 11:30 ಗಂಟೆಗೆ **ಸ್ಥಳ : ಹೂಟಗಳ್ಳಿಯ ಸ್ವಗೃಹದಲ್ಲಿ** ಏರ್ಪಡಿಸಲಾಗಿದೆ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

"ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ಕೋರುತ್ತೇವೆ".

ದುಃಖತಪ್ತರು: ಶ್ರೀಮತಿ ಅಂಕಮ್ಮ ದಿ॥ ಪಟೇಲ್ ನಾಗೇಗೌಡರ ಕುಟುಂಬ ವರ್ಗದವರು
ಶ್ರೀಮತಿ ದಿ॥ ದೇವಮ್ಮ ಮತ್ತು ಶ್ರೀ ದಿ॥ ಸಣ್ಣೇಗೌಡರ ಕುಟುಂಬವರ್ಗದವರು
ಶ್ರೀಮತಿ ಮಮತ ಎಸ್ ಮತ್ತು ಶ್ರೀ ಮಂಚೇಗೌಡ ಹಾಗೂ ಹೂಟಗಳ್ಳಿ ಗ್ರಾಮಸ್ಥರು

